ಬುಧವಾರ, ಮೇ 17, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 136 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ತಾರುಣ್ಯಕ್ಕೆ ಮರಳಬೇಕೆಂಬ ಆಸೆ ಯಾರಿಗಿರದು! ಆದರೆ ಅದು ಸಾಧ್ಯವೇ?

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 9

ತುರ್ತು ಚಿಕಿತ್ಸೆ: ಪಟ್ಟಿಗೆ 16 ಆಸ್ಪತ್ರೆಗಳ ಸೇರ್ಪಡೆ 5

ಕೃತಕ ಸಿಹಿಕಾರಕ ಬಳಕೆ: ಆರೋಗ್ಯದ ಮೇಲೆ ದುಷ್ಪರಿಣಾಮ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,932 ▼	18,286 ▼	₹63,150 (ಬೆಂಗಳೂರು) ▲	₹74,600 (ಬೆಂಗಳೂರು) ▲	82.2 ▲

ಮತ್ತೊಂದು ಸುತ್ತಿನ ಸಭೆ ಇಂದು: ಸೋನಿಯಾ, ರಾಹುಲ್ ಜೊತೆ ಚರ್ಚಿಸಿ ನಿರ್ಧಾರ?

ಹೈಕಮಾಂಡ್‌ಗೂ ಬಾಗದ ಹಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಗಾದಿ ಸಿಗಬೇಕು ಎಂಬ ಪಟ್ಟನ್ನು ಇನ್ನಷ್ಟು ಬಿಗಿಗೊಳಿಸಿದ್ದಾರೆ. ಹೀಗಾಗಿ, ಕಾಂಗ್ರೆಸ್ ಹೈಕಮಾಂಡ್ ಇಕ್ಕಟ್ಟಿಗೆ ಸಿಲುಕಿದೆ ಮತ್ತು ಪಕ್ಷದಲ್ಲಿ ಕಗ್ಗಂಟು ಮುಂದುವರಿದಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಬ್ಬರೂ ನಾಯಕರ ಜೊತೆಗೆ ಮಂಗಳವಾರ ಸಮಾಲೋಚನೆ ನಡೆಸಿ ಮನವೊಲಿಸುವ ಪ್ರಯತ್ನ ಮಾಡಿದರು. ಆದರೆ, ಖರ್ಗೆ ಮನವೊಲಿಕೆಯ ಬಳಿಕವೂ ಇಬ್ಬರೂ ಪಟ್ಟು ಸಡಿಲಿಸಿಲ್ಲ.

ಖರ್ಗೆ ಅವರು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರೊಂದಿಗೆ ಬುಧವಾರ ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದಾರೆ. ಆ ಬಳಿಕ, ರಾಜ್ಯದ ಕೆಲವು ಶಾಸಕರ ಅಭಿಪ್ರಾಯಗಳನ್ನು ಪಡೆಯಲಿದ್ದಾರೆ. ನಂತರ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಾತುಕತೆ ನಡೆಸಿ ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ.

ಶಿವಕುಮಾರ್ ಅವರು ಮಂಗಳವಾರ ಬೆಳಿಗ್ಗೆ ದೆಹಲಿಗೆ ಹೊರಡುವ ಮುನ್ನ ಬೆಂಗಳೂರಿನಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, 'ಸಂಕಷ್ಟದ ಸಮಯದಲ್ಲಿ ಪಕ್ಷದ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿ ರಾತ್ರಿ ಹಗಲು ದುಡಿದಿದ್ದೇನೆ. ಜವಾಬ್ದಾರಿ ವಹಿಸುವಾಗ ಸೋನಿಯಾ ಗಾಂಧಿ ಭರವಸೆ ನೀಡಿದ್ದರು. ಅವರನ್ನು ಭೇಟಿಯಾಗುತ್ತೇನೆ' ಎಂದು ತಿಳಿಸಿದರು. ಆದರೆ, ಸೋನಿಯಾ ಅವರು ಶಿಮ್ಲಾದಿಂದ ಮರಳದ ಕಾರಣ ಅವರ ಭೇಟಿ ಸಾಧ್ಯವಾಗಲಿಲ್ಲ.

5ನೇ ಪುಟ ನೋಡಿ

ಮಂಗಳವಾರ ಏನೇನಾಯಿತು?

- ಮಂಗಳವಾರ ಮಧ್ಯಾಹ್ನ ದೆಹಲಿಗೆ ಬಂದ ಡಿ.ಕೆ. ಶಿವಕುಮಾರ್
- ಮಧ್ಯಾಹ್ನ 1ರಿಂದ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಜತೆಗೆ ಮಲ್ಲಿಕಾರ್ಜುನ ಖರ್ಗೆ ಸಭೆ
- ಬಳಿಕ ರಾಹುಲ್ ಗಾಂಧಿ ಹಾಗೂ ಕೆ.ಸಿ.ವೇಣುಗೋಪಾಲ್ ಸಮಾಲೋಚನೆ
- ಸಂಜೆ 5.20ಕ್ಕೆ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ಡಿ.ಕೆ. ಶಿವಕುಮಾರ್. ಅರ್ಧ ಗಂಟೆ ಚರ್ಚೆ
- ಸಂಜೆ 6ಕ್ಕೆ ಖರ್ಗೆ–ಸಿದ್ದರಾಮಯ್ಯ ಭೇಟಿ. ಒಂದೂವರೆ ಗಂಟೆ ಚರ್ಚೆ
- ರಾತ್ರಿ 8ಕ್ಕೆ ಕೆ.ಸಿ.ವೇಣುಗೋಪಾಲ್ ಭೇಟಿ ಮಾಡಿದ ಸಿದ್ದರಾಮಯ್ಯ. ನಂತರ ಸುರ್ಜೇವಾಲಾ ಜತೆಗೆ ಮಾತುಕತೆ


ಶಿವಕುಮಾರ್ ವಾದ

- 2019ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷ ಹೀನಾಯ ಸಾಧನೆ ಮಾಡಿತ್ತು. ನಂತರ ಸಂಕಷ್ಟದ ಸಮಯದಲ್ಲಿ ಪಕ್ಷದ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿ ಸಂಘಟಿಸಿ ಅಧಿಕಾರಕ್ಕೆ ತಂದಿದ್ದೇನೆ
- ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 135 ಸ್ಥಾನಗಳನ್ನು ಗಳಿಸಿ ಅಭೂತಪೂರ್ವ ಸಾಧನೆ ಮಾಡಲು ನನ್ನ ಪರಿಶ್ರಮವೇ ಕಾರಣ
- ನನ್ನ ಕೆಲಸಕ್ಕೆ ಕೂಲಿ ಕೇಳುತ್ತಿದ್ದೇನೆ. ಹೈಕಮಾಂಡ್ ಮೇಲೆ ವಿಶ್ವಾಸ ಇದೆ
- 2013ರಿಂದ 2018ರ ವರೆಗೆ ಸಿದ್ದರಾಮಯ್ಯ ಅಧಿಕಾರ ನಡೆಸಿದ್ದರು. ಪಕ್ಷಕ್ಕೆ ಲಿಂಗಾಯತ ವಿರೋಧಿ ಹಣೆಪಟ್ಟಿ ಬಂತು. 2018ರ ಚುನಾವಣೆಯಲ್ಲಿ ಪಕ್ಷವು ಅಧಿಕಾರ ಕಳೆದುಕೊಂಡಿತು
- 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಪತನಕ್ಕೆ ಕಾರಣ ಯಾರು ಎಂಬುದು ಬಹಿರಂಗ ಸತ್ಯ
- ಈ ಚುನಾವಣೆಯಲ್ಲಿ ಒಕ್ಕಲಿಗರು ದೊಡ್ಡ ಪ್ರಮಾಣದಲ್ಲಿ ಪಕ್ಷದ ಬೆಂಬಲಕ್ಕೆ ನಿಂತಿದ್ದಾರೆ. ಇದರಿಂದಾಗಿ ಪಕ್ಷ ಶೇ 5ರಷ್ಟು ಹೆಚ್ಚುವರಿ ಮತ ಪಡೆಯಿತು. ಇದಕ್ಕೆ ನಾನೇ ಕಾರಣ



ಸಿದ್ದರಾಮಯ್ಯ ವಾದ

- ಪಕ್ಷದ ಹೆಚ್ಚಿನ ಶಾಸಕರು ನನ್ನ ಬೆಂಬಲಕ್ಕೆ ಇದ್ದಾರೆ
- 2013ರಿಂದ 18ರ ವರೆಗೆ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನಡೆಸಿದ್ದೇನೆ. ಅದಕ್ಕಾಗಿ ಮತ್ತೊಂದು ಅವಕಾಶ ನೀಡಬೇಕು
- ದಲಿತರು, ಹಿಂದುಳಿದವರು ಈ ಸಲ ಪಕ್ಷದ 'ಕೈ' ಹಿಡಿದಿದ್ದಾರೆ. ನಾನು ರಾಜ್ಯದಾದ್ಯಂತ ಓಡಾಡಿ ಪ್ರಚಾರ ಮಾಡಿದ್ದು ಇದಕ್ಕೆ ಕಾರಣ
- ಕಳೆದ ಐದು ವರ್ಷಗಳಲ್ಲಿ ಬಿಜೆಪಿ ವಿರುದ್ಧ ಸದನದ ಒಳಗೆ ಹಾಗೂ ಹೊರಗೆ ನಿರಂತರ ಹೋರಾಟ ಮಾಡಿದ್ದು ನಾನು
- ಪಕ್ಷ 135 ಸ್ಥಾನಗಳನ್ನು ಗಳಿಸುವಲ್ಲಿ ನನ್ನ ಪಾತ್ರ ದೊಡ್ಡದಿದೆ
- ಇದು ನನ್ನ ಕೊನೆಯ ಚುನಾವಣೆ ಎಂದು ಮೊದಲೇ ಪ್ರಕಟಿಸಿದ್ದೇನೆ. ಈ ಸಲ ನನಗೆ ಹುದ್ದೆ ನೀಡಬೇಕು



ಭಯ ಸೃಷ್ಟಿಸದಿರಿ: 'ಸುಪ್ರೀಂ'

ಜಾರಿ ನಿರ್ದೇಶನಾಲಯಕ್ಕೆ ಕೋರ್ಟ್‌ನ ಮೌಖಿಕ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯದಲ್ಲಿ ಭಯದ ವಾತಾವರಣ ಸೃಷ್ಟಿಸಬೇಡಿ' ಎಂದು ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಮಂಗಳವಾರ ತಾಕೀತು ಮಾಡಿದೆ.

ಇ.ಡಿ ತನಿಖೆಯನ್ನು ಪ್ರಶ್ನಿಸಿ ಛತ್ತೀಸಗಢ ಮೂಲದ ವ್ಯಕ್ತಿಗಳಿಬ್ಬರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಪ್ರಕರಣದಲ್ಲಿ ತಮ್ಮನ್ನೂ ಕಕ್ಷಿದಾರರನ್ನಾಗಿಸುವಂತೆ ಕೋರಿ ರಾಜ್ಯ ಸರ್ಕಾರವೂ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರ ದ್ವಿಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ರಾಜ್ಯದಲ್ಲಿ ನಡೆದಿದೆ ಎನ್ನಲಾಗಿರುವ ₹2,000 ಕೋಟಿ ಮೊತ್ತದ ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರನ್ನು ಸಿಲುಕಿಸಲು ಇ.ಡಿ ಕುತಂತ್ರ ನಡೆಸುತ್ತಿದೆ. ಅಬಕಾರಿ ಇಲಾಖೆಯ ಅಧಿಕಾರಿಗಳು, ಅವರ ಕುಟುಂಬದ ಸದಸ್ಯರಿಗೆ ಬಂಧನದ ಬೆದರಿಕೆ ಒಡ್ಡುತ್ತಿದೆ' ಎಂದು ಛತ್ತೀಸಗಢ ಸರ್ಕಾರ ಆರೋಪಿಸಿತು.

ರಾಜ್ಯ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, 'ಚುನಾವಣೆ ಸಮೀಪಿಸುತ್ತಿರುವ ಕಾರಣದಿಂದ ಈ ರೀತಿಯ ಬೆದರಿಕೆ ತಂತ್ರಗಳನ್ನು ಅನುಸರಿಸಲಾಗುತ್ತಿದೆ. ಈ ನಡೆ ಆಘಾತಕಾರಿ. ಸಂಸ್ಥೆಯು ಹದ್ದು ಮೀರಿ ವರ್ತಿಸುತ್ತಿದೆ' ಎಂದರು. ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಸಿಬಲ್ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿ ಜಾರಿ ನಿರ್ದೇಶನಾಲಯವು ರಾಜ್ಯದಲ್ಲಿ ನಡೆದಿರುವ ಹಗರಣದ ತನಿಖೆ ನಡೆಸುತ್ತಿರುವುದಾಗಿ ಹೇಳಿದರು.

ಆಗ ನ್ಯಾಯಪೀಠ, 'ಭಯದ ವಾತಾವರಣ ಸೃಷ್ಟಿಸಬೇಡಿ. ನಿಮ್ಮ (ಇ.ಡಿ) ಈ ಬಗೆಯ ವರ್ತನೆಯಿಂದಾಗಿ ನಿಜವಾದ ಪ್ರಕರಣವನ್ನೂ ಸಂಶಯದಿಂದಲೇ ನೋಡುವಂತಾಗುತ್ತದೆ' ಎಂದು ಮೌಖಿಕ ಎಚ್ಚರಿಕೆ ನೀಡಿತು.

'ಇ.ಡಿ ಅಧಿಕಾರಿಗಳು ತಮ್ಮ ಜೊತೆಗೆ ಕುಟುಂಬದ ಸದಸ್ಯರನ್ನೂ ಬೆದರಿಸುತ್ತಿರುವುದಾಗಿ ಅಬಕಾರಿ ಇಲಾಖೆಯ ಅಧಿಕಾರಿಗಳೇ ದೂರಿದ್ದಾರೆ. ಇ.ಡಿ ಕೈಗೊಂಡಿರುವ ಕ್ರಮದಿಂದಾಗಿ ಆಡಳಿತವು ನಿಷ್ಕ್ರಿಯಗೊಂಡಿದೆ. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆಯ ಸಮಸ್ಯೆ ತಲೆದೋರಿದೆ' ಎಂದು ರಾಜ್ಯ ಸರ್ಕಾರ ಅರ್ಜಿಯಲ್ಲಿ ದೂರಿದೆ.

'ಮುಖ್ಯಮಂತ್ರಿ ಹಾಗೂ ರಾಜ್ಯದ ಇತರ ಉನ್ನತ ಅಧಿಕಾರಿಗಳನ್ನು ಪ್ರಕರಣದಲ್ಲಿ ಸಿಲುಕಿಸುವ ಉದ್ದೇಶದಿಂದ ತಾವು ಸಿದ್ಧಪಡಿಸಿರುವ ಹೇಳಿಕೆಗೆ ಸಹಿ ಮಾಡುವಂತೆ ಇ.ಡಿ ಅಧಿಕಾರಿಗಳು ಒತ್ತಡ ಹೇರುತ್ತಿದ್ದಾರೆ. ಸಹಿ ಮಾಡದಿದ್ದರೆ ಪ್ರಕರಣದಲ್ಲಿ ಸಿಲುಕಿಸುವುದಾಗಿ ಅಬಕಾರಿ ಅಧಿಕಾರಿಗಳಿಗೆ ಹೆದರಿಸಿದ್ದಾರೆ. ಪ್ರಭಾವಿ ರಾಜಕೀಯ ಮುಖಂಡರ ಆಣತಿಯಂತೆ ಇ.ಡಿ ಕೆಲಸ ಮಾಡುತ್ತಿದೆ' ಎಂದೂ ರಾಜ್ಯ ಸರ್ಕಾರ ಆರೋಪಿಸಿದೆ. ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಾಲಯವು ಜಾರಿ ನಿರ್ದೇಶನಾಯಲಕ್ಕೆ ಸೂಚಿಸಿದೆ.

ರಾಹುಲ್ ಪಿ.ಎಯಿಂದ ಹಣ: ಇ.ಡಿ ಮುಂದೆ ಸುಳ್ಳು ಹೇಳಿದ ಟಿಎಂಸಿ ವಕ್ತಾರ

ಅಹಮದಾಬಾದ್: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಆಪ್ತ ಸಹಾಯಕ ಅಲಂಕಾರ್ ಸವಾಯಿ ಅವರಿಂದ ಸಾಮಾಜಿಕ ಮಾಧ್ಯಮ ಹಾಗೂ ಇತರ ಸಲಹಾ ಕಾರ್ಯಗಳಿಗಾಗಿ ₹23.54 ಲಕ್ಷ ನಗದು ಪಡೆದಿರುವುದಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಟಿಎಂಸಿಯ ರಾಷ್ಟ್ರೀಯ ವಕ್ತಾರ ಸಾಕೇತ್ ಗೋಖಲೆ ಸುಳ್ಳು ಹೇಳಿದ್ದಾರೆ ಎನ್ನಲಾಗಿದೆ.

ಸುದ್ದಿ 11

51 ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಕಲಿ ಅಂಕಪಟ್ಟಿ ಕಾರಣ ನೀಡಿದ ವಿಟಿಯು
- ಕ್ಯೂಆರ್ ಕೋಡ್ ಸ್ಕ್ಯಾನ್‌ನಿಂದ ಹಗರಣ ಬಯಲು

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ನಕಲಿ ಅಂಕಪಟ್ಟಿಗಳ ಕಾರಣ ನೀಡಿ 51 ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಿದೆ.

ವಿಟಿಯು ಮೊದಲ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗೆ ಈ ವಿದ್ಯಾರ್ಥಿಗಳು ಅರ್ಜಿ ಹಾಕಿದ್ದರು. ಆದರೆ, 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್‌ಐಒಎಸ್) ನೀಡಿದ ಪ್ರಮಾಣಪತ್ರಗಳು ನಕಲಿ ಎಂದು ಸಾಬೀತಾದ ಕಾರಣ, ಪ್ರವೇಶ ಪಡೆಯಲು ಅವಕಾಶ ನೀಡಿಲ್ಲ' ಎಂದು ವಿಟಿಯು ಮೂಲಗಳು ಖಚಿತಪಡಿಸಿವೆ.

ಇದಕ್ಕೂ ಮುನ್ನ ತಾಂತ್ರಿಕ ಶಿಕ್ಷಣ ಇಲಾಖೆ ಈ ಎಲ್ಲ ಅಂಕಪಟ್ಟಿಗಳನ್ನೂ ಮಾನ್ಯ ಮಾಡಿತ್ತು. ಆದರೆ, ವಿಟಿಯು ಕಾಲೇಜುವಾರು ಅನುಮೋದನೆ ನೀಡುವಾಗ ಅಮಾನ್ಯ ಮಾಡಿದೆ.

'ಈ ನಕಲಿ ಅಂಕಪಟ್ಟಿಗಳ ಹಿಂದೆ ದೊಡ್ಡ ಹಗರಣ ನಡೆದಿರುವ ಶಂಕೆ ಇದೆ. ಹಾಗಾಗಿ ಎಲ್ಲ ವಿದ್ಯಾರ್ಥಿಗಳ ಈವರೆಗಿನ ಪ್ರಮಾಣಪತ್ರಗಳು, ದಾಖಲೆಗಳ ಬಗ್ಗೆಯೂ ಪರಿಶೀಲನೆ ಮಾಡುವುದು ಅಗತ್ಯ. ಈ ಬಗ್ಗೆ ರಾಜ್ಯ ಸರ್ಕಾರ ಮತ್ತು ಎನ್‌ಐಒಎಸ್‌ಗೂ ಪತ್ರ ಬರೆಯಲು ಉದ್ದೇಶಿಸಲಾಗಿದೆ' ಎಂದೂ ವಿಟಿಯು ಮೂಲಗಳು ಹೇಳಿವೆ.

'ಎನ್‌ಐಒಎಸ್‌ನಿಂದ ಈ ವಿದ್ಯಾರ್ಥಿಗಳು ಪಡೆದ ಪಿಯು ದ್ವಿತೀಯ ವರ್ಷದ ತರಗತಿಯ ಅಂಕಗಳ ಕಾರ್ಡ್‌ಗಳಲ್ಲಿ ಮುದ್ರಿಸಲಾದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಲಾಯಿತು. ಅಂಕಪಟ್ಟಿಗಳು ನಕಲಿ ಎಂಬುದನ್ನು ವೆಬ್‌ಸೈಟ್ ದೃಢಪಡಿಸಿದೆ' ಎಂದು ತಿಳಿದು ಬಂದಿದೆ.



ಈ ವಿದ್ಯಾರ್ಥಿಗಳು ಮ್ಯಾನೇಜ್‌ಮೆಂಟ್ ಕೋಟಾದಡಿಯಲ್ಲಿ ಸೀಟುಗಳನ್ನು ಪಡೆದಿದ್ದಾರೆ. ಅವರಲ್ಲಿ ಹೆಚ್ಚಿನವರು ತುಮಕೂರು ಮತ್ತು ಚಿಕ್ಕಬಳ್ಳಾಪುರದವರು.

ಬೆಂಗಳೂರಿನ ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ದಯಾನಂದ ಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್, ಸಿಟಿ ಎಂಜಿನಿಯರಿಂಗ್ ಕಾಲೇಜು, ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೋಪಾಲನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್, ಕೆಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಎಎಂಸಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು ಎಂದು ಗೊತ್ತಾಗಿದೆ.

ವೇತನ ಆಯೋಗದ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕುರಿತು ಅಧ್ಯಯನ ಮಾಡಿ, ವರದಿ ಸಲ್ಲಿಸಲು ರಚಿಸಲಾಗಿರುವ 7ನೇ ವೇತನ ಆಯೋಗದ ಅವಧಿಯನ್ನು 6 ತಿಂಗಳು ವಿಸ್ತರಿಸಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ಅವರ ಅಧ್ಯಕ್ಷತೆಯಲ್ಲಿ 2022ರ ನವೆಂಬರ್ 19ರಂದು 7ನೇ ವೇತನ ಆಯೋಗ ರಚಿಸಲಾಗಿತ್ತು.

ವೇತನ ಪರಿಷ್ಕರಣೆ ಕುರಿತು ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳ ಜತೆ ವೇತನ ಆಯೋಗ ನಡೆಸುತ್ತಿರುವ ಸಮಾಲೋಚನಾ ಕಾರ್ಯಗಳು ಪ್ರಗತಿಯಲ್ಲಿವೆ. ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳಿಸಲು ಸಮಯಾವಕಾಶದ ಅಗತ್ಯವಿರುವ ಕಾರಣ ಅವಧಿಯನ್ನು ಮೇ 19ರಿಂದ ಅನ್ವಯವಾಗುವಂತೆ 6 ತಿಂಗಳು ವಿಸ್ತರಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಮುಂಗಾರು: ಜೂನ್ 4ಕ್ಕೆ ಕೇರಳ ಪ್ರವೇಶ ಸಾಧ್ಯತೆ

ನವದೆಹಲಿ (ಪಿಟಿಐ): ಈ ಬಾರಿ ನೈರುತ್ಯ ಮುಂಗಾರು ಮಾರುತವು ಕೇರಳವನ್ನು ಜೂನ್ 4ರಂದು ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ಹೇಳಿದೆ.

ವಾಡಿಕೆಯಂತೆ ಮುಂಗಾರು ಜೂನ್ 1ರಂದು ಕೇರಳ ಕರಾವಳಿಯನ್ನು ಪ್ರವೇಶಿಸಬೇಕು. ಈ ವರ್ಷ ಜೂನ್ 4ರಂದು ಕೇರಳ ಪ್ರವೇಶಿಸುವ ಸಾಧ್ಯತೆ ಇದೆ.

ಮುಂಗಾರು ಪ್ರವೇಶವು ನಾಲ್ಕು ದಿನಗಳಷ್ಟು ಮುಂಚಿತವಾಗಿ ಅಥವಾ ವಿಳಂಬವಾಗಿ ಆಗುವ ಸಾಧ್ಯತೆಯೂ ಇದೆ. ಮುಂಗಾರು ಮಾರುತವು ಕೇರಳ ಪ್ರವೇಶಿಸಿ, ನಂತರ ದೇಶದ ಇತರ ಭಾಗಗಳನ್ನು ಆವರಿಸಿಕೊಳ್ಳುತ್ತದೆ.

'ಎಲ್ ನಿನೊ' ಪರಿಸ್ಥಿತಿಯ ಹೊರತಾಗಿಯೂ ಈ ಬಾರಿ ಮುಂಗಾರು ಅವಧಿಯಲ್ಲಿ ವಾಡಿಕೆಯಂತೆ ಮಳೆ ಬೀಳುವ ಸಾಧ್ಯತೆ ಇದೆ ಎಂದು ಇಲಾಖೆಯು ಕಳೆದ ತಿಂಗಳು ಹೇಳಿತ್ತು. ಕೃಷಿ ವಲಯದಲ್ಲಿ ಶೇ 52ರಷ್ಟು ಪ್ರದೇಶ ಹಾಗೂ ದೇಶದ ಒಟ್ಟು ಆಹಾರ ಧಾನ್ಯ ಉತ್ಪಾದನೆಯಲ್ಲಿ ಮಳೆ ಆಶ್ರಿತ ಪ್ರದೇಶದ ಪಾಲು ಶೇ 40ರಷ್ಟು ಎಂಬುದು ಗಮನಾರ್ಹ.


ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು





ಅಧಿಕಾರಿಗಳ ವರ್ಗ

ಬೆಂಗಳೂರು: ಐಎಎಸ್ ಅಧಿಕಾರಿಗಳಾದ ಬಗಾದಿ ಗೌತಮ್, ಅವಸ್ಥಿ ಎಸ್ ಅವರನ್ನು ಮಸ್ಸೂರಿಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನ ಉಪ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಅವೈಜ್ಞಾನಿಕವಾಗಿ ತೆರವು ಕಾರ್ಯಾಚರಣೆ: ಪೊಲೀಸರಿಗೆ ದೂರು ನೀಡಿದ ನಿವಾಸಿಗಳು

ಹಳೇ ಕಟ್ಟಡ ಕುಸಿತ: ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ




ಬೆಂಗಳೂರಿನ ರಿಚ್ಮಂಡ್ ಟೌನ್‌ನ ಆಲ್ಬರ್ಟ್ ಸ್ಟ್ರೀಟ್‌ನಲ್ಲಿರುವ ಹಳೇ ಕಟ್ಟಡವನ್ನು ಅವೈಜ್ಞಾನಿಕವಾಗಿ ತೆರವು ಮಾಡಲಾಗುತ್ತಿದ್ದು, ಕಟ್ಟಡದ ಮಾಲೀಕರು ಹಾಗೂ ಎಂಜಿನಿಯರ್ ನಿರ್ಲಕ್ಷ್ಯದಿಂದ ಕಟ್ಟಡವು ದಿಢೀರ್ ಕುಸಿದಿದೆ (ಎಡಚಿತ್ರ). ಕಟ್ಟಡದ ಅವಶೇಷಗಳ ಮೇಲೆ ನಿಂತುಕೊಂಡು ಕಾರ್ಮಿಕರು ತೆರವು ಕಾರ್ಯದಲ್ಲಿ ತೊಡಗಿದ್ದರು
–ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ರಿಚ್ಮಂಡ್ ಟೌನ್ ಆಲ್ಬರ್ಟ್ ಸ್ಟ್ರೀಟ್‌ನಲ್ಲಿರುವ ಮೂರು ಅಂತಸ್ತಿನ ಹಳೇ ಕಟ್ಟಡವನ್ನು ಅವೈಜ್ಞಾನಿಕ ರೀತಿಯಲ್ಲಿ ತೆರವು ಮಾಡಲಾಗುತ್ತಿದ್ದು, ಇದರಿಂದಾಗಿ ಕಟ್ಟಡ ಮಂಗಳವಾರ ಮಧ್ಯಾಹ್ನ ದಿಢೀರ್ ಕುಸಿದು ಬಿದ್ದು ಅಕ್ಕ–ಪಕ್ಕದ ಮನೆಗಳ ಗೋಡೆಗಳಿಗೆ ಹಾನಿಯಾಗಿದೆ.

ಆಲ್ಬರ್ಟ್ ಸ್ಟ್ರೀಟ್‌ನಲ್ಲಿರುವ (17)4 ಸಂಖ್ಯೆ ನಿವೇಶನವನ್ನು 'ಜಿ.ಎಂ ಇನ್‌ಫೈನೆಟ್' ರಿಯಲ್ ಎಸ್ಟೇಟ್ ಕಂಪನಿಯವರು ಖರೀದಿಸಿದ್ದಾರೆ. ಇದೇ ನಿವೇಶನದಲ್ಲಿ ಮೂರು ಅಂತಸ್ತಿನ ಹಳೇ ಕಟ್ಟಡವಿದ್ದು, ಅದನ್ನು ತೆರವು ಮಾಡಿ 'ಜಿ.ಎಂ ಪಲಾಜ್ಜೊ' ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಲು ಕಂಪನಿ ಕೆಲಸ ಆರಂಭಿಸಿದೆ.

ನಿವೇಶನಕ್ಕೆ ಹೊಂದಿಕೊಂಡಿರುವ ಕಿಂಗ್ ಸ್ಟ್ರೀಟ್‌ನಲ್ಲಿ ಪ್ರೆಸ್ಟೀಜ್ ಕ್ರೌನ್ ಕೋರ್ಟ್ ಅಪಾರ್ಟ್‌ಮೆಂಟ್ ಸಮುಚ್ಚಯ, ಚಾರ್ಟರ್ಡ್ ಆಲ್ಕವ್ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಹಲವು ಕಟ್ಟಡಗಳಿವೆ. ಅದರಲ್ಲಿ ಹಲವು ಕುಟುಂಬಗಳು ವಾಸಿಸುತ್ತಿವೆ. ಈ ರಸ್ತೆಗಳಲ್ಲಿ ಕಂಪನಿ ಕಚೇರಿಗಳಿದ್ದು, ನಿತ್ಯವೂ ಸಾರ್ವಜನಿಕರು ಓಡಾಡುತ್ತಿರುತ್ತಾರೆ.

'ಜನವಸತಿ ಪ್ರದೇಶದಲ್ಲಿ ಹಳೇ ಕಟ್ಟಡ ತೆರವು ಮಾಡುವ ಸಂದರ್ಭದಲ್ಲಿ ಬಿಬಿಎಂಪಿ ನಿಯಮಗಳನ್ನು ಪಾಲಿಸಬೇಕು. ಸುತ್ತಲೂ ಎತ್ತರದ ತಗಡುಗಳನ್ನು ನಿಲ್ಲಿಸಿ ಅಕ್ಕ–ಪಕ್ಕದ ಮನೆಗಳಿಗೆ ಹಾಗೂ ನಿವಾಸಿಗಳಿಗೆ ತೊಂದರೆ ಆಗದಂತೆ ತೆರವು ಮಾಡಬೇಕು. ಆದರೆ, 'ಜಿ.ಎಂ ಇನ್‌ಫೈನೆಟ್' ಕಂಪನಿಯವರು ಮುಂಜಾಗ್ರತವಾಗಿ ಸುರಕ್ಷಿತ ಕ್ರಮಗಳಿಗೆ ಒತ್ತು ನೀಡದೇ ಕಡಿಮೆ ಎತ್ತರದ ತಗಡುಗಳನ್ನು ನಿಲ್ಲಿಸಿ ಅವೈಜ್ಞಾನಿಕವಾಗಿ ಕೆಲಸ ಆರಂಭಿಸಿದ್ದಾರೆ' ಎಂದು ಸ್ಥಳೀಯ ನಿವಾಸಿಗಳು ದೂರಿದರು.

'ಕಾರ್ಮಿಕರು ತಮ್ಮಿಷ್ಟದಂತೆ ಮೂರು ಅಂತಸ್ತಿನ ಕಟ್ಟಡ ತೆರವು ಮಾಡುತ್ತಿದ್ದಾರೆ. ಮಂಗಳವಾರ ಮಧ್ಯಾಹ್ನ 3.45ರ ಸುಮಾರಿಗೆ ಇಡೀ ಕಟ್ಟಡ ದಿಢೀರ್ ಕುಸಿದು ಬಿದ್ದು, ದೊಡ್ಡ ಶಬ್ದ ಉಂಟಾಯಿತು. ತಗಡುಗಳ ಸಮೇತ ಅವಶೇಷವೆಲ್ಲ ಅಕ್ಕ–ಪಕ್ಕದ ಮನೆ ಜಾಗದಲ್ಲಿ ಬಿದ್ದಿತು. ನಮ್ಮ ಉದ್ಯಾನದ ಗೋಡೆ ಮೇಲೆ ಅವಶೇಷಗಳು ಬಿದ್ದಿದ್ದವು. ಇದರಿಂದ ಗೋಡೆ ಉರುಳಿಬಿದ್ದಿದೆ. ಹಳೇ ಕಟ್ಟಡದ ಅವಶೇಷಗಳು ಅಪಾಯಕಾರಿ ಸ್ಥಿತಿಯಲ್ಲಿದ್ದು, ಅವುಗಳು ಪುನಃ ಕುಸಿದು ಬೀಳುವ ಭಯವಿದೆ' ಎಂದು ಪ್ರೆಸ್ಟೀಜ್ ಕ್ರೌನ್ ಕೋರ್ಟ್ ಅಪಾರ್ಟ್‌ಮೆಂಟ್ ಸಮುಚ್ಚಯ ನಿವಾಸಿಗಳು ಹೇಳಿದರು.

'ನಿವಾಸಿಗಳು ಉದ್ಯಾನದಲ್ಲಿ ವಾಯುವಿಹಾರ ಮಾಡುತ್ತಾರೆ. ಕೆಲವರು ಕುಳಿತು ವಿಶ್ರಾಂತಿ ಪಡೆಯುತ್ತಾರೆ. ಅದೃಷ್ಟವಶಾತ್ ಮಧ್ಯಾಹ್ನ ಯಾರೂ ಇರಲಿಲ್ಲ. ಇದ್ದಿದ್ದರೆ, ಜೀವ ಹಾನಿ ಆಗುವ ಸಂಭವವಿತ್ತು. ತೆರವು ಕೆಲಸದಿಂದ ನಿತ್ಯವೂ ದೂಳು ಸಹ ಮನೆಯೊಳಗೆ ಬರುತ್ತಿದ್ದು, ಆರೋಗ್ಯ ಸಮಸ್ಯೆಯೂ ಆಗುತ್ತಿದೆ' ಎಂದರು.

ಪೊಲೀಸರಿಗೆ ದೂರು: 'ಹಳೇ ಕಟ್ಟಡ ಕುಸಿಯುವ ಭೀತಿ ಇದ್ದಿದ್ದರಿಂದ, ಅಲ್ಲಿಯ ಕೆಲಸಗಾರರಿಗೆ ಮೊದಲೇ ಎಚ್ಚರಿಕೆ ನೀಡಲಾಗಿತ್ತು. ಯಾರೊಬ್ಬರೂ ನಮ್ಮ ಮಾತು ಕೇಳಲಿಲ್ಲ. ಇದೀಗ ಕಟ್ಟಡ ಕುಸಿದು ಬಿದ್ದಿದೆ. ಮನುಷ್ಯರ ಜೀವಕ್ಕೆ ಕುತ್ತು ಉಂಟಾಗುವ ರೀತಿಯಲ್ಲಿ ಕಟ್ಟಡ ತೆರವು ಮಾಡುತ್ತಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಆಗ್ರಹಿಸಿ ಅಶೋಕನಗರ ಠಾಣೆಗೆ ನಿವಾಸಿಗಳು ದೂರು ನೀಡಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, 'ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಗಿದೆ. ದೂರು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ.

ಕಟ್ಟಡ ಕುಸಿತದ ಬಗ್ಗೆ ಪ್ರತಿಕ್ರಿಯೆ ಪಡೆಯಲು 'ಜಿ.ಎಂ ಇನ್‌ಫೈನೆಟ್' ಕಂಪನಿಯವರು ಲಭ್ಯರಾಗಲಿಲ್ಲ.

'ಕಾರ್ಮಿಕರ ಜೀವಕ್ಕೂ ಕುತ್ತು'

'ಕಟ್ಟಡ ತೆರವು ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಯಾವುದೇ ಸುರಕ್ಷತೆ ಇಲ್ಲ. ಕುಸಿದು ಬಿದ್ದಿರುವ ಕಟ್ಟಡದ ಅವಶೇಷಗಳ ಮೇಲೆ ನಿಂತುಕೊಂಡು ಕಾರ್ಮಿಕರು ಕೆಲಸ ಮಾಡುತ್ತಿದ್ದು, ಏನಾದರೂ ಅನಾಹುತ ಉಂಟಾಗಿ ಜೀವಕ್ಕೆ ಹಾನಿಯಾದರೆ ಯಾರು ಹೊಣೆ' ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ.

'ಕಟ್ಟಡದ ತೆರವು ಕೆಲಸವೇ ಅವೈಜ್ಞಾನಿಕವಾಗಿದೆ. ಹೀಗಾಗಿ, ನಿವೇಶನ ಮಾಲೀಕರು ಹಾಗೂ ಎಂಜಿನಿಯರ್‌ಗಳನ್ನು ಸಂಬಂಧಪಟ್ಟ ಅಧಿಕಾರಿಗಳು ವಿಚಾರಣೆ ನಡೆಸಬೇಕು. ಸೂಕ್ತ ರೀತಿಯಲ್ಲಿ ಕಟ್ಟಡ ತೆರವು ಮಾಡುವಂತೆ ಸೂಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

ನಿಧನ ವಾರ್ತೆ

ಸುಸೀಲಾ ಮೇರಿ



ಬೆಂಗಳೂರು: ಕೆ.ಆರ್. ಪುರದ ದೊಡ್ಡಬಸವನಪುರದ ನಿವಾಸಿ ಸುಸೀಲಾ ಮೇರಿ (51) ಸೋಮವಾರ ನಿಧನರಾದರು. ಇವರಿಗೆ ಪತಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಅಂತ್ಯಕ್ರಿಯೆಯು ಮಂಗಳವಾರ ಸೀಗೆಹಳ್ಳಿಯ ಸಂತ ಲೂರ್ದು ಮಾತೆಯ ದೇವಾಲಯ ಆವರಣದಲ್ಲಿ ನಡೆಯಿತು ಎಂದು ಕುಟುಂಬ ಸದಸ್ಯರು ಮಾಹಿತಿ ನೀಡಿದ್ದಾರೆ.



ಅಂತಿಮ ಸ್ಪರ್ಶ

ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಲಾಗಿರುವ ಬಸವೇಶ್ವರ ಪ್ರತಿಮೆಗೆ ಮಂಗಳವಾರ ಬಾಕಿ ಉಳಿದಿದ್ದ ಕಾರ್ಯಗಳಿಗೆ ಕಾರ್ಮಿಕರು ಅಂತಿಮ ಸ್ಪರ್ಶ ನೀಡಿದರು
–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಶಿಕ್ಷಣ: ವೈಜ್ಞಾನಿಕ ಆಶಯ ವಿರುದ್ಧದ ವಿಷಯ ಬೇಡ'

ಬೆಂಗಳೂರು: 'ವೈಜ್ಞಾನಿಕ ಆಶಯಗಳಿಗೆ ವಿರುದ್ಧವಾಗಿರುವ ವೈದಿಕ ಶಿಕ್ಷಣ, ಜ್ಯೋತಿಷವನ್ನು ಶಿಕ್ಷಣದಲ್ಲಿ ತರಬಾರದು' ಎಂದು ಎಐಡಿಎಸ್‌ಒ ರಾಜ್ಯ ಸಮಿತಿ ಕಾರ್ಯದರ್ಶಿ ಅಜಯ್ ಕಾಮತ್ ಆಗ್ರಹಿಸಿದ್ದಾರೆ.

'ಹೊರ ರಾಷ್ಟ್ರದ ವಿದ್ಯಾರ್ಥಿಗಳನ್ನು ಆಕರ್ಷಿಸಲು ವೈದಿಕ ಗಣಿತ, ಸಂಸ್ಕೃತ, ಯೋಗ, ಆಯುರ್ವೇದ, ಜ್ಯೋತಿಷದಂತಹ ವಿಷಯಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೊಸದಾಗಿ ಸೇರಿಸಬೇಕು ಎಂದು ಯುಜಿಸಿ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿದೆ. ಇದು ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ–2020ರ ಭಾಗವಾಗಿದೆ. ಮಹನೀಯರು ಯಾವ ಪದ್ಧತಿ ವಿರುದ್ಧ ಹೋರಾಟ ನಡೆಸಿದ್ದರೋ ಆ ವ್ಯವಸ್ಥೆಯನ್ನೇ ಮತ್ತೆ ಶಿಕ್ಷಣದಲ್ಲಿ ತರುವ ಪ್ರಯತ್ನಗಳು ನಡೆಯುತ್ತಿವೆ. ಇದನ್ನು ರಾಜ್ಯದ ವಿದ್ಯಾರ್ಥಿ ಸಮೂಹ ಹಾಗೂ ಎಲ್ಲಾ ಶಿಕ್ಷಣ ಪ್ರಿಯರು ವಿರೋಧಿಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಎಲ್ಲ ವಿಶ್ವ ವಿದ್ಯಾಲಯಗಳಿಗೆ ತನ್ನದೇ ಆದ ಸ್ವಾಯತ್ತತೆ ಇದೆ. ಅಂತಹ ಸಂದರ್ಭದಲ್ಲಿ ಇಂಥದ್ದೇ ವಿಷಯವನ್ನು ವಿವಿಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಬೋಧಿಸಬೇಕು ಎಂದು ಎನ್.ಇ.ಪಿ ಹೆಸರಿನಲ್ಲಿ ವಿಶ್ವವಿದ್ಯಾಲಯಗಳ ಮೇಲೆ ಹೇರುತ್ತಿರುವ ಯುಜಿಸಿಯ ಕ್ರಮ ಅತ್ಯಂತ ಅಪ್ರಜಾತಾಂತ್ರಿಕ ಹಾಗೂ ಸರ್ವಾಧಿಕಾರಿ ಧೋರಣೆಯಿಂದ ಕೂಡಿದೆ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮೇ 20ರಿಂದ ರಾಗಿಕಣ ಸಂತೆ

ಬೆಂಗಳೂರು: ರಾಗಿ ಕಣ ಸಂತೆಯ 6ನೇ ವರ್ಷದ ಕಾರ್ಯಕ್ರಮ ಇದೇ 20 ಮತ್ತು 21ರಂದು ಬನ್ನೇರುಘಟ್ಟ ರಸ್ತೆಯಲ್ಲಿರುವ ಶ್ರೀರಾಮಕೃಷ್ಣ ಸನ್ಮಾರ್ಗ ಶಿಕ್ಷಣ ಕೇಂದ್ರದ ಆವರಣದಲ್ಲಿ ನಡೆಯಲಿದೆ.

2 ದಿನಗಳ ಈ ಸಂತೆಯನ್ನು ಮೇ 20ರಂದು ಕೈಮಗ್ಗ ಚಳವಳಿ ದಸ್ತಕಾರ್ ಸಂಸ್ಥಾಪಕಿ ಲೈಲಾ ತ್ಯಾಬ್ಜಿ ಮತ್ತು ಹಲ್ ಕುಲ್ ಟ್ರಸ್ಟ್‌ನ ಸರೋಜಮ್ಮ ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ. ಡೊಳ್ಳು ಕುಣಿತ, ಒಲೆ ಹಚ್ಚದೆ ಖಾದ್ಯಗಳನ್ನು ಮಾಡುವ ಪ್ರಾತ್ಯಕ್ಷಿಕೆ, ಸಂತಿಮ್ಮಿ ರಾಮಯಣ ರಂಗರೂಪಕ ಮತ್ತು ಸಂಗೀತ ಸಂಜೆ ಇರಲಿದೆ. ಮೇ 21ರಂದು ಕಲಾವಿದ ಎಸ್. ಜಿ. ವಾಸುದೇವ್ ಅವರ ನೇತೃತ್ವದಲ್ಲಿ ಕಲಾಕೃತಿಗಳ ಸೃಷ್ಟಿ, ಜಾನಪದ ಗಾಯಕ ಮೈಸೂರು ಗುರುರಾಜ್ ತಂಡದಿಂದ ಮಂಟೇಸ್ವಾಮಿ ಮತ್ತು ಬಸವಣ್ಣ ಅವರ ಭೇಟಿಯ ಪ್ರಸಂಗ, ಜಂಬೆ ಬಾಲು ಮತ್ತು ತಂಡದಿಂದ ಜಂಬೆ ಝಲಕ್ ಸಂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಸತಿನಿಯಲಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಪಿಯು, ಪದವಿ, ಸ್ನಾತ್ತಕೋತ್ತರಪದವಿ, ತಾಂತ್ರಿಕ ಮತ್ತು ವೈದ್ಯಕೀಯ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ತಿಗಳ ಸಮುದಾಯದ (ಅಗ್ನಿವಂಶ ಕ್ಷತ್ರಿಯ) ಮತ್ತು ಇತರೆ ಸಮುದಾಯಗಳ ಆಸಕ್ತ ವಿದ್ಯಾರ್ಥಿ ಗಳು ಮತ್ತು ವಿದ್ಯಾರ್ಥಿನಿಯರು ಮೇ 30ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 080–23200608ಗೆ ಸಂಪರ್ಕಿಸಬಹುದು.

ತೋಟಗಾರಿಕೆ ತರಬೇತಿ

ಬೆಂಗಳೂರು: ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2023-24ನೇ ಸಾಲಿನ 10 ತಿಂಗಳ ಅವಧಿಗೆ ತೋಟಗಾರಿಕೆ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರು ಉತ್ತರ ಹಾಗೂ ಯಲಹಂಕ ತಾಲ್ಲೂಕಿನ ಆಸಕ್ತರು ಮೇ 22ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳ ಸಂದರ್ಶನ ಮೇ 25ರಂದು ನಿಗದಿಪಡಿಸಲಾಗಿದೆ. ತರಬೇತಿಯು 2023ರ ಜೂನ್ 1ರಿಂದ 2024ರ ಮಾರ್ಚ್ 30ರವರೆಗೆ ನಡೆಯಲಿದೆ.

ಅರ್ಜಿಯನ್ನು ಇಲಾಖೆಯ ವೆಬ್‌ಸೈಟ್ https://horticulturedir. karnataka.gov.in ಅಥವಾ ತೋಟಗಾರಿಕೆ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಮಾಹಿತಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕಚೇರಿ (ಜಿಲ್ಲಾ ಪಂಚಾಯತ್) ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಮಹದೇವಪುರ ವಲಯದಲ್ಲಿ ಅಧಿಕ; ಮಳೆಗಾಲದಲ್ಲಿ ಮತ್ತೆ ಸಂಕಷ್ಟ!

ರಾಜಕಾಲುವೆ: ಮತ್ತಷ್ಟು ಒತ್ತುವರಿ ಪತ್ತೆ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದ ಸಂದರ್ಭದಲ್ಲಿ ಜನರನ್ನು ಸಂಕಷ್ಟಕ್ಕೀಡು ಮಾಡುವ ರಾಜಕಾಲುವೆ ಒತ್ತುವರಿ ಪ್ರಕರಣಗಳು ದಿನದಿಂದ ದಿನಕ್ಕೆ ಮತ್ತಷ್ಟು ಪತ್ತೆಯಾಗುತ್ತಲೇ ಇವೆ. ಮಳೆಗಾಲಕ್ಕೆ ಮುನ್ನ ಒತ್ತುವರಿ ತೆರವು ಕಾರ್ಯಾಚರಣೆ ಮುಗಿಯುವ ಲಕ್ಷಣ ಇಲ್ಲದಿರುವುದರಿಂದ ಮತ್ತೆ ಆತಂಕ ಎದುರಾಗಿದೆ.

ಬಿಬಿಎಂಪಿ, ರಾಜಕಾಲುವೆ ಒತ್ತುವರಿ ತೆರವು ಮಾಡಲಾಗುತ್ತಿದೆ ಎಂದು ಹೇಳುತ್ತಿದ್ದರೂ, ಇನ್ನೂ 784 ಒತ್ತುವರಿ ಪ್ರಕರಣಗಳು ತೆರವಿಗೆ ಬಾಕಿ ಇವೆ. ಈ ವರ್ಷ ಫೆ. 21ರ ನಂತರ ಒಂದೂ ಪ್ರಕರಣದಲ್ಲಿ ತೆರವು ಕಾರ್ಯಾಚರಣೆಯಾಗಿಲ್ಲ. ಜನವರಿಯಿಂದ ಫೆ.21ರವರೆಗೆ 88 ಪ್ರದೇಶದಲ್ಲಿ ಮಾತ್ರ ಒತ್ತುವರಿ ತೆರವು ಮಾಡಲಾಗಿದೆ.

ಮಳೆಗಾಲಕ್ಕೆ ಮುನ್ನ ಒತ್ತುವರಿ ತೆರವು ಕಾರ್ಯಾಚರಣೆ ಮುಗಿಸಲಾಗುತ್ತದೆ ಎಂದು ಮುಖ್ಯಮಂತ್ರಿಯಾದಿಯಾಗಿ ಬಿಬಿಎಂಪಿಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳು ಹೇಳಿದ್ದರು. ಆದರೆ, ಅವರೇ ನೀಡಿರುವ ಅಂಕಿ–ಅಂಶದ ಪ್ರಕಾರ ಈ ವರ್ಷ ತೆರವು ಕಾರ್ಯಾಚರಣೆ ನಡೆದಿಲ್ಲ. ತುರ್ತು ಕಾಮಗಾರಿಗಳನ್ನು ನಿರ್ವಹಿಸಬೇಕಿರುವುದರಿಂದ ರಾಜಕಾಲುವೆ ವಿಭಾಗದ ಸಿಬ್ಬಂದಿಗೆ ಚುನಾವಣೆ ಕೆಲಸದಿಂದಲೂ ಮುಕ್ತಗೊಳಿಸಲಾಗಿತ್ತು.

'ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಮಾಡುತ್ತಿದ್ದೇವೆ. ಒಂದು ತೆಗೆಯುವ ಸಂದರ್ಭದಲ್ಲಿ ಮತ್ತೊಂದಷ್ಟು ಪತ್ತೆಯಾಗುತ್ತಿವೆ. ಹೀಗಾಗಿ ಸಂಖ್ಯೆಗಳು ಮತ್ತೆ ಹೆಚ್ಚಾಗುತ್ತಲೇ ಇವೆ' ಎನ್ನುತ್ತಾರೆ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ.

ಒತ್ತುವರಿ ತೆರವಿಗಿಂತ ಇರುವ ರಾಜಕಾಲುವೆಗೆ ತಡೆಗೋಡೆ ನಿರ್ಮಿಸುವ ಕಾಮಗಾರಿಗೆ ಎಂಜಿನಿಯರ್‌ಗಳು ಹೆಚ್ಚು ಒತ್ತು ನೀಡಿದ್ದಾರೆ. ಇದಕ್ಕಾಗಿ ಸುಮಾರು ₹1,500 ಕೋಟಿ ವೆಚ್ಚ ಮಾಡಲಾಗುತ್ತಿದೆ. ಎಲ್ಲಿ ನಿರ್ಮಾಣವಾಗುತ್ತಿದೆ, ಎಷ್ಟು ನಿರ್ಮಾಣವಾಗುತ್ತಿದೆ ಎಂಬುದರ ವಿವರವನ್ನು ಎಂಜಿನಿಯರ್‌ಗಳು ನೀಡುತ್ತಿಲ್ಲ.ರಾಜಕಾಲುವೆಗಳ 'ಕಾಂಕ್ರೀಟ್' ಮರು ನಿರ್ಮಾಣ ಕಾರ್ಯವೂ ಇನ್ನೊಂದು ವರ್ಷ ಮುಗಿಯುವುದಿಲ್ಲ. ಆದರೆ, ಮಳೆಗಾಲದಲ್ಲಿ ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯುವ ಕೆಲಸ ಆಗಿಲ್ಲ ಎಂಬುದನ್ನು ಮೇ ಆರಂಭದಲ್ಲಿ ಸುರಿದ ಮಳೆಯೇ ಬಹಿರಂಗಪಡಿಸಿದೆ. ಮಳೆಗಾಲ ಆರಂಭವಾಗಲು ಇನ್ನೊಂದು ತಿಂಗಳಲ್ಲಿ ರಾಜಕಾಲುವೆಯಲ್ಲಿನ ಅಡೆ–ತಡೆಗಳನ್ನು ನಿವಾರಿಸುವ ಕೆಲಸವಾಗಬೇಕಿದೆ. ಯುದ್ಧೋಪಾದಿಯಲ್ಲಿ ಬಿಬಿಎಂಪಿ ಕಾರ್ಯನಿರ್ವಹಿಸುತ್ತದೆ ಎಂಬ ಭರವಸೆ ಇಲ್ಲ ಎಂದು ಪರಿಸರ ತಜ್ಞ ನಾಗೇಶ್ ಅರಸ್ ಹೇಳಿದರು.

20 ಕಡೆ ಮಾರ್ಗ ಬದಲು: ಬಿಬಿಎಂಪಿಯ ಪಶ್ಚಿಮ ವಲಯದಲ್ಲಿ 20 ಸ್ಥಳಗಳಲ್ಲಿ ರಾಜಕಾಲುವೆ ಮಾರ್ಗವನ್ನೇ ಬದಲಿಸಲಾಗಿದೆ. ಮೂಲ ರಾಜಕಾಲುವೆ ಹರಿವನ್ನು ಬದಲಿಸಿ ಹೊಸ ಮಾರ್ಗ ಮಾಡಲಾಗಿದೆ ಎಂದು ಬಿಬಿಎಂಪಿ ಅಂಕಿ–ಅಂಶದಲ್ಲೇ ತಿಳಿಸಲಾಗಿದೆ.

ರಾಜಕಾಲುವೆ ಒತ್ತುವರಿ ವಿವರ

ವಲಯ	ಒಟ್ಟು ಒತ್ತುವರಿ ಪ್ರಕರಣ	2016–17ರಲ್ಲಿ ತೆರವು	2018–19ರಿಂದ 2022ರವರೆಗೆ ತೆರವು	2022 ಆಗಸ್ಟ್–ನವೆಂಬರ್‌ವರೆಗೆ ತೆರವು	2023ರಲ್ಲಿನ ತೆರವು	ಒಟ್ಟು ತೆರವು ಬಾಕಿ	ಕೋರ್ಟ್‌ನಲ್ಲಿರುವ ಪ್ರಕರಣ	ಬಾಕಿ
ಪೂರ್ವ	237	3	124	4	3	103	0	88
ಪಶ್ಚಿಮ	52	11	1	6	9	25	0	4
ದಕ್ಷಿಣ	23	0	0	0	0	23	0	0
ಕೋರಮಂಗಲ ಕಣಿವೆ	10	7	0	0	0	3	0	3
ಯಲಹಂಕ	588	215	277	10	7	79	0	79
ಮಹದೇವಪುರ	1,446	98	867	119	57	305	62	243
ಬೊಮ್ಮನಹಳ್ಳಿ	344	40	188	20	10	86	56	30
ಆರ್.ಆರ್. ನಗರ	75	37	0	0	2	36	0	36
ದಾಸರಹಳ್ಳಿ	176	16	23	13	0	124	0	124
ಒಟ್ಟು	2,951	427	1,480	172	88	784	118	607

*39 ಒತ್ತುವರಿ ಪ್ರಕರಣಗಳು ರಾಜಕಾಲುವೆ ವ್ಯಾಪ್ತಿಯಲ್ಲಿ ಇಲ್ಲ. (ಬಿಬಿಎಂಪಿ ಅಂಕಿ- ಅಂಶ)

ಹೊಸ ರಾಜಕಾಲುವೆ ನಿರ್ಮಾಣ?

'ಕಂದಾಯ ಇಲಾಖೆಯ ದಾಖಲೆ ಗಳಲ್ಲಿ ಕಾಲುವೆಗಳು ಇಲ್ಲ. ಆದರೆ, ಕೆಲವು ಪ್ರದೇಶಗಳಲ್ಲಿ ಕಾಲುವೆಗಳ ಅಗತ್ಯವಿದ್ದು ಅದನ್ನು ನಿರ್ಮಿಸಬೇಕಿದೆ. ಹೀಗಾಗಿ, ಎಲ್ಲಿ ಕಾಲುವೆ ನಿರ್ಮಿಸಬೇಕಾದ ಅನಿವಾರ್ಯತೆ ಇದೆಯೋ ಅಲ್ಲಿ ಭೂಮಿ ವಶಪಡಿಸಿಕೊಂಡು ಟಿಡಿಆರ್ ನೀಡುವ ಆಲೋಚನೆ ಇದೆ' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ರಾಜಕಾಲುವೆಗಳಿವೆ ಎಂದರೆ ಅದಕ್ಕೆ ಬಫರ್ ಝೋನ್ ಇದ್ದೇ ಇರಬೇಕು. ಆದರೆ, ಇದೀಗ ಬಿಬಿಎಂಪಿ ಸೃಷ್ಟಿಸಲು ಹೊರಟಿರುವ ಕಾಲುವೆಗಳ ಸೃಷ್ಟಿ ಅಥವಾ ವಿಸ್ತರಣೆ ಸುತ್ತಮುತ್ತ ಬಫರ್ ಝೋನ್ ಇಲ್ಲ. ಅವುಗಳು ಕಂದಾಯ ದಾಖಲೆಯಲ್ಲಿ ಇಲ್ಲದಿರುವುದೇ ಕಾರಣ.

ಹೀಗಾಗಿ ಬಿಬಿಎಂಪಿ ಬೃಹತ್ ಕಟ್ಟಡಗಳನ್ನು ಉಳಿಸುವ ದೃಷ್ಟಿಯಿಂದ ಹೊಸ ಕಾಲುವೆ ಸೃಷ್ಟಿಸುತ್ತಿದೆ. ಟಿಡಿಆರ್ ನೀಡಿ ದೊಡ್ಡವರಿಗೆ ಅನುಕೂಲವನ್ನೂ ಮಾಡಿಕೊಡಲು ಮುಂದಾಗಿದೆ ಎಂದು ಪರಿಸರ ತಜ್ಞರು ಆರೋಪಿಸುತ್ತಿದ್ದಾರೆ.

ತೆರವು ಪೂರ್ಣಗೊಂಡಿಲ್ಲ: ತುಷಾರ್

'ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಇತ್ತೀಚೆಗೆ ಕಾಮಗಾರಿಗಳ ಪರಿಶೀಲನೆ ನಡೆದಿಲ್ಲ. ಶೀಘ್ರವೇ ಮಾಡಲಾಗುತ್ತದೆ. ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಮತ್ತಷ್ಟು ಒತ್ತುವರಿ ಪ್ರಕರಣಗಳೂ ಪತ್ತೆಯಾಗಿರುವುದು ನಿಜ. ಎಲ್ಲವನ್ನು ತೆರವುಗೊಳಿಸಲಾಗುತ್ತದೆ' ಎಂದರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ರಾಜಕಾಲುವೆ ಒತ್ತುವರಿ ತೆರವು ಇನ್ನೂ ಪೂರ್ಣಗೊಂಡಿಲ್ಲ. ರಾಜಕಾಲುವೆಗೆ ತಡೆಗೋಡೆ ಕಾಮಗಾರಿಗಳೂ ನಡೆಯುತ್ತಿವೆ. ಸದ್ಯಕ್ಕೆ ಅಂದರೆ ಮಳೆಗಾಲದ ವೇಳೆಗೆ ಪೂರ್ಣಗೊಳ್ಳುವುದಿಲ್ಲ. ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.



ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತ ಕುಮಾರ್ ಅವರ ನೇತೃತ್ವದ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

'ಸಂಪುಟ: ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಅವಕಾಶ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಕ್ಕರೆ ಕಾರ್ಖಾನೆ ಮಾಲೀಕರನ್ನು ಹೊಸ ಸಚಿವ ಸಂಪುಟಕ್ಕೆ ಸೇರುವುದನ್ನು ತಪ್ಪಿಸಿ, ರಾಜ್ಯದ 30 ಲಕ್ಷ ರೈತರ ಬದುಕು ರಕ್ಷಿಸಬೇಕು' ಎಂದು ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ರೈತ ಮುಖಂಡರು ಮಂಗಳವಾರ ಮನವಿ ಸಲ್ಲಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದ ನಿಯೋಗವು ರಾಜಭವನಕ್ಕೆ ತೆರಳಿ ಮನವಿ ಸಲ್ಲಿಸಿತು.

'ರಾಜ್ಯದ 78 ಸಕ್ಕರೆ ಕಾರ್ಖಾನೆಗಳಿಗೆ ಎಲ್ಲ ರಾಜಕೀಯ ಪಕ್ಷಗಳಲ್ಲಿರುವ ಶಾಸಕರೇ ಮಾಲೀಕರಿದ್ದಾರೆ. ಯಾವುದೇ ಸರ್ಕಾರ ಬಂದರೂ ಸಚಿವ ಸಂಪುಟದಲ್ಲಿ ಅವರು ಸೇರುತ್ತಿದ್ದಾರೆ. ಇದರಿಂದ ಕಬ್ಬು ಬೆಳೆಗಾರರಿಗೆ ತೀವ್ರ ಸಂಕಷ್ಟ ಎದುರಾಗುತ್ತಿದೆ' ಎಂದು ತಿಳಿಸಿದರು.

'ಹಿಂದಿನ ಸರ್ಕಾರವು ಕಬ್ಬಿಗೆ ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (ಎಫ್‌ಆರ್‌ಪಿ)ಯನ್ನು ₹ 150 ಏರಿಕೆ ಮಾಡಿ ಆದೇಶ ಹೊರಡಿಸಿತ್ತು. ಈ ಆದೇಶಕ್ಕೆ ಸಕ್ಕರೆ ಕಾರ್ಖಾನೆ ಮಾಲೀಕರು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಹೆಚ್ಚುವರಿ ಹಣ ಪಾವತಿಸದೆ ರೈತರನ್ನು ಸಂಕಷ್ಟಕ್ಕೆ ತಳ್ಳಿದ್ದಾರೆ' ಎಂದು ದೂರಿದರು.

'ಬ್ಯಾಂಕ್‌ಗಳು ಸಿಬಿಲ್ ಸ್ಕೋರ್ ಮಾನದಂಡ ಅನುಸರಿಸುತ್ತಿರುವ ಕಾರಣಕ್ಕೆ ರೈತರಿಗೆ ಕೃಷಿ ಸಾಲ ಸಿಗುತ್ತಿಲ್ಲ. ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಮಾನದಂಡ ಕೈಬಿಡಲು ಸೂಚನೆ ನೀಡಬೇಕು. ಹಿಂದಿನ ಸರ್ಕಾರ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದು ಮಾಡಬೇಕು. ಭೂಸುಧಾರಣಾ ತಿದ್ದುಪಡಿ ಕಾಯ್ದೆ ರದ್ದು ಮಾಡಬೇಕು' ಎಂದು ಒತ್ತಾಯಿಸಿದರು.

ರೈತ ಸಂಘದ ನಾರಾಯಣ ರೆಡ್ಡಿ, ಪ್ರಸನ್ನ ಕುಮಾರ್, ಶಿವಕುಮಾರ್, ದೇವಕುಮಾರ, ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್ ಹಾಜರಿದ್ದರು.



ಮಾನವೀಯ ಮುಖಗಳು...

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಬಳಿಯ ರಸ್ತೆ ಬದಿಯಲ್ಲಿ ಮಂಗಳವಾರ ಹಸಿವಿನಿಂದ ಕುಸಿದು ಬಿದ್ದಿದ್ದ ವೃದ್ಧರೊಬ್ಬರನ್ನು ಕಂಡ ಕೆಎಸ್‌ಆರ್‌ಪಿ ಮಹಿಳಾ ಪೊಲೀಸ್ ಸಿಬ್ಬಂದಿ ಕ್ಷಣಕಾಲ ಅವರನ್ನು ಸಂತೈಸಿ ಸ್ವಂತ ಖರ್ಚಿನಲ್ಲಿ ಊಟ, ಜ್ಯೂಸ್, ಹೊಸ ಬಟ್ಟೆ, ಪಾದರಕ್ಷೆ ತಂದು ಕೊಡುವ ಮೂಲಕ ಮಾನವೀಯತೆ ತೋರಿದರು

ಪ್ರಜಾವಾಣಿ ಚಿತ್ರಗಳು/ ರಂಜು ಪಿ.

'ಕಾರಂತ – ತೇಜಸ್ವಿ ನಾಟಕೋತ್ಸವ' 19ರಿಂದ

ಬೆಂಗಳೂರು: ನಟ, ನಿರ್ದೇಶಕ ಕೆಎಸ್‌ಡಿಎಲ್ ಚಂದ್ರು ಅವರಿಗೆ 60 ವರ್ಷ ತುಂಬಿದ್ದು, ಈ ಸಂಭ್ರಮದ ಅಂಗವಾಗಿ ರೂಪಾಂತರವು(ಕ್ರಿಯಾಶೀಲ ಜೀವಿಗಳು) ಮೇ 19 ಹಾಗೂ 20ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕಾರಂತ –ತೇಜಸ್ವಿ ನಾಟಕೋತ್ಸವ ಆಯೋಜಿಸಿದೆ. ಅಂದು ಸಂಜೆ 6ಕ್ಕೆ ನಾಟಕೋತ್ಸವ ಆರಂಭವಾಗಲಿದೆ.

ಚಂದ್ರು ಅವರು ಕಳೆದ 35 ವರ್ಷಗಳಿಂದ ರೂಪಾಂತರದ ಅವಿಭಾಜ್ಯ ಅಂಗವಾಗಿದ್ದಾರೆ. ಅನೇಕ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿದ್ದಾರೆ. ರಂಗಪ್ರಯೋಗ ನಡೆಸಿ, ರಂಗಾಸಕ್ತರ ಮೆಚ್ಚುಗೆ ಗಳಿಸಿದ್ದಾರೆ. ನಾಟಕೋತ್ಸವದಲ್ಲಿ ಶಿವರಾಮ ಕಾರಂತರ ಕಾದಂಬರಿ ಆಧಾರಿತ 'ಚೋಮನ ದುಡಿ' ಮತ್ತು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿ ಆಧಾರಿತ 'ಕರ್ವಾಲೋ' ನಾಟಕಗಳು ಪ್ರದರ್ಶನಗೊಳ್ಳಲಿವೆ. ಚಂದ್ರು ಅವರ ಸಾಂಸ್ಕೃತಿಕ ಬದುಕಿನ ಅವಲೋಕನ ಕುರಿತ 'ಚಂದ್ರಯಾನ'ಕೃತಿ ಬಿಡುಗಡೆ ಮಾಡಲಾಗುವುದು ಎಂದು ಅಧ್ಯಕ್ಷ ವಿ.ಗಂಗಾಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪುರ ತಾಲ್ಲೂಕು ಕಚೇರಿ ಸಮಸ್ಯೆಗಳ ಆಗರ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಅಧಿಕಾರಿಗಳ ನಿರಾಸಕ್ತಿಯಿಂದ ಕೆ.ಆರ್.ಪುರದ ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿಯಲ್ಲಿ ಮೂಲಸೌಕರ್ಯಗಳು ಮರೀಚಿಕೆಯಾಗಿದ್ದು, ದಿನನಿತ್ಯ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕೆ.ಆರ್.ಪುರದ ಕೇಂದ್ರ ಬಿಂದು ಪೂರ್ವ ತಾಲ್ಲೂಕು ಕಚೇರಿ ಹೆಸರಿಗಷ್ಟೇ ತಾಲ್ಲೂಕು ಎಂಬ ಹೆಗ್ಗಳಿಕೆ. ಆದರೆ ಮೂಲಸೌಕರ್ಯಗಳೇ ಇಲ್ಲ. ರೇಷ್ಮೆ ಇಲಾಖೆ, ಭೂ ದಾಖಲೆ, ತೋಟಗಾರಿಕೆ, ಆಹಾರ ಇಲಾಖೆ, ಹಕ್ಕು ದಾಖಲೆ ಪತ್ರ ಇಲಾಖೆ ಸೇರಿದಂತೆ ಹತ್ತಾರು ಇಲಾಖೆ ಒಳಗೊಂಡಿದೆ.

ತಾಲ್ಲೂಕು ಕಚೇರಿಗೆ ಭೂದಾಖಲೆ, ಪಹಣಿ, ಜಾತಿ ಮತ್ತು ಆದಾಯ ಹಾಗೂ ಪಿಂಚಣಿ ಸೌಲಭ್ಯ ಸೇರಿದಂತೆ ಒಂದಿಲ್ಲೊಂದು ಕೆಲಸಕ್ಕಾಗಿ ಮಹದೇವಪುರ, ಸರ್ವಜ್ಞನಗರ, ಸಿ.ವಿ.ರಾಮನ್ ನಗರ ಹಾಗೂ ಕೆ.ಆರ್.ಪುರದಿಂದ ಪ್ರತಿನಿತ್ಯ ನೂರಾರು ಜನರು ಕಚೇರಿಗೆ ಬಂದು ಹೋಗುತ್ತಾರೆ.

ತಾಲ್ಲೂಕು ಕಚೇರಿಯಲ್ಲಿನ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಬರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇರುತ್ತದೆ. ಆದರೆ, ಬರುವ ಸಾರ್ವಜನಿಕರಿಗೆ ಮೂಲಸೌಕರ್ಯ ಒದಗಿಸಲು ಯಾರೂ ಮುಂದೆ ಬರುತ್ತಿಲ್ಲ. ಇಲ್ಲಿ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.



ಪಟ್ಟಂದೂರು ಮಂಜುನಾಥ

'ಕಟ್ಟಡ ನಿರ್ಮಾಣಗೊಂಡು ಅನೇಕ ವರ್ಷ ಕಳೆದಿದ್ದರೂ ನೀರಿನ ವ್ಯವಸ್ಥೆ ಕಲ್ಪಿಸದಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ಪಟ್ಟಂದೂರು ಅಗ್ರಹಾರ ಮಂಜುನಾಥ್ ದೂರಿದರು.

'ದಣಿದು ಬರುವ ಸಾರ್ವಜನಿಕರ ದಾಹ ನೀಗಿಸಿಕೊಳ್ಳಲು ಕುಡಿಯುವ ನೀರಿಲ್ಲ. ಬೇಸಿಗೆ ಕಾಲದಂತೂ ಸಾರ್ವಜನಿಕರು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ನೀರಿನ ಬಾಟಲ್ ತೆಗೆದುಕೊಂಡು ಬರಬೇಕಿದೆ. ಕುಳಿತು ಕೊಳ್ಳಲು ಆಸನಗಳ ವ್ಯವಸ್ಥೆ ಇಲ್ಲ. ಅಧಿಕಾರಿಗಳನ್ನು ಭೇಟಿ ಮಾಡಲು ಬರುವ ಹಿರಿಯ ನಾಗರಿಕರಿಗೆ ಕುಳಿತುಕೊಳ್ಳಲು ಸರಿಯಾದ ಆಸನದ ವ್ಯವಸ್ಥೆ ಇಲ್ಲ. ಇದರಿಂದ ಅಂಗವಿಕಲರು ಮತ್ತು ವಯಸ್ಸಾದ ಹಿರಿಯ ನಾಗರಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ' ಎಂದು ಹೇಳಿದರು.



ದಿಲೀಪ್ ಕುಮಾರ್

'ಸಾರ್ವಜನಿಕರಿಗೆ ನಿರ್ಮಿಸಿರುವ ಶೌಚಾಲಯಗಳ ಸ್ಥಿತಿ ಕೇಳುವಂತೆಯೇ ಇಲ್ಲ. ಕೊಳಕು ಶೌಚಾಲಯದಿಂದ ಪರಿಸ್ಥಿತಿ ಹದಗೆಡುವಂತೆ ಮಾಡಿದೆ. ಇಲ್ಲಿನ ಶೌಚಾಲಯವನ್ನು ಬಳಸಲು ಜನರು ಹಿಂದೇಟು ಹಾಕುತ್ತಿದ್ದಾರೆ. ನೈಸರ್ಗಿಕ ಕರೆ ನೀಗಿಸಿಕೊಳ್ಳಲು ನಿತ್ಯವೂ ಪರದಾಡುವಂತಾಗಿದೆ. ಕಾಲ ಕಾಲಕ್ಕೆ ಶುಚಿಗೊಳಿಸುತ್ತಿಲ್ಲ. ದುರ್ನಾತ ಬೀರುತ್ತಿದ್ದು, ಪುರುಷರು ತಾಲ್ಲೂಕು ಕಚೇರಿಯ ಆವರಣದ ಗೋಡೆ, ಖಾಲಿ ಜಾಗದ ಪೊದೆಗಳನ್ನು ಅವಲಂಬಿಸಿದ್ದಾರೆ. ಆದರೆ, ಮಹಿಳೆಯರ ಪರಿಸ್ಥಿತಿ ಶೋಚನೀಯವಾಗಿದೆ' ಎಂದು ಆಮ್ ಆದ್ಮಿ ಪಕ್ಷದ ಮುಖಂಡ ದಿಲೀಪ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಡಿಪಿಐ ಕಚೇರಿಗಳ ಜಪ್ತಿ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾಗೆ (ಎಸ್‌ಡಿಪಿಐ) ಸೇರಿದ ಕಚೇರಿಗಳ ಮೇಲೆ ದಾಳಿ ನಡೆಸಿ, ಜಪ್ತಿ ಮಾಡಿ ಕಚೇರಿಗಳಿಗೆ ಬೀಗ ಹಾಕಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಎಸ್‌ಡಿಪಿಐನ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನ್ವರ್ ಸಾದತ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕಟಿಸಿದೆ.

ಮನವಿ ಏನಿತ್ತು?: 'ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಇರುವ ಎಸ್‌ಡಿಪಿಐ ಕಚೇರಿಗಳು ಹಾಗೂ ಎಸ್‌ಡಿಪಿಐನ ಪ್ರತಿನಿಧಿಗಳಾದ ಮಹಾನಗರ ಪಾಲಿಕೆಯ ಚುನಾಯಿತ ಕಾರ್ಪೊರೇಟರ್‌ಗಳ ಕಚೇರಿಗಳನ್ನು ಯಾವುದೇ ಪೂರ್ವ ಮಾಹಿತಿ ನೀಡದೆ ಮುಚ್ಚಲಾಗಿದೆ. ಎಸ್‌ಡಿಪಿಐ, ಪಿಎಫ್‌ಐ (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಜತೆ ಯಾವುದೇ ಸಂಪರ್ಕ ಹೊಂದಿಲ್ಲ. ಪಿಎಫ್‌ಐ ಮತ್ತು ಅದರ ಸಂಸ್ಥೆಗಳನ್ನು ನಿಷೇಧಿಸುವ ಸಂದರ್ಭದಲ್ಲಿ ಗೃಹ ಸಚಿವಾಲಯವು ಎಸ್‌ಡಿಪಿಐ ಹೆಸರನ್ನು ಸೇರ್ಪಡೆ ಮಾಡಿರಲಿಲ್ಲ. ಈ ಕಚೇರಿಗಳನ್ನು ದುರುದ್ದೇಶದಿಂದ ಜಪ್ತಿ ಮಾಡಲಾಗಿದೆ' ಎಂದು ಅರ್ಜಿದಾರು ದೂರಿದ್ದರು.

ವಂಡರ್ ಲಾ: 'ಸಮ್ಮರ್ ಲಾ ಫಿಯೆಸ್ಟಾ'ಗೆ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ರಜೆಯನ್ನು ವಿಶೇಷವಾಗಿಸಲು ವಂಡರ್ ಲಾ ಹಾಲಿಡೇಸ್ ಲಿಮಿಟೆಡ್ ತನ್ನ ಪಾರ್ಕ್‌ನಲ್ಲಿ ಮೇ 31ರವರೆಗೆ 'ಸಮ್ಮರ್ ಲಾ ಫಿಯೆಸ್ಟಾ' ಆಯೋಜಿಸಿದೆ.

ಈ ಬೇಸಿಗೆ ಕಾಲದಲ್ಲಿ ವಂಡರ್ ಲಾಗೆ ಭೇಟಿ ನೀಡುವ ಪ್ರವಾಸಿಗರಿಗೆ ವಿಶೇಷ ಮನೋರಂಜನೆ ನೀಡುವ ಉದ್ದೇಶದಿಂದ ಲೈವ್ ಶೋ, ಫುಡ್ ಫೆಸ್ಟಿವಲ್, ಫನ್‌ಗೇಮ್, ಅಕ್ರೋಬ್ಯಾಟಿಕ್ಸ್, ಡಿಜೆ ಸೇರಿ ಹಲವು ಕಾರ್ಯಕ್ರಮಗಳು ಇರಲಿವೆ.

ಬಿಎಂಟಿಸಿ, ವೋಲ್ವೋ ಬಸ್‌ಗಳಲ್ಲಿ ವಂಡರ್ ಲಾಗೆ ಆಗಮಿಸುವವರು ತಮ್ಮ ಟಿಕೆಟ್ ತೋರಿಸಿದ್ದಲ್ಲಿ ಪ್ರವೇಶದ ದರದ ಶೇಕಡ 15ರಷ್ಟು ರಿಯಾಯತಿ ದೊರೆಯಲಿದೆ.

10 ರಿಂದ 12ನೇ ತರಗತಿಯ ಪರೀಕ್ಷೆಗಳನ್ನು ಬರೆದಿರುವ ವಿದ್ಯಾರ್ಥಿಗಳು ಹಾಲ್ ಟಿಕೆಟ್ ತೋರಿಸಿದರೆ ಶೇಕಡ 35ರಷ್ಟು ರಿಯಾಯತಿ ಇದೆ.

ಇತರೆ ವಿದ್ಯಾರ್ಥಿಗಳು ಕಾಲೇಜಿನ ಐಡಿ ಕಾರ್ಡ್ ತೋರಿಸುವ ಮೂಲಕ ಶೇಕಡ 20ರಷ್ಟು ರಿಯಾಯತಿ ಪಡೆದುಕೊಳ್ಳಬಹುದು.

ಟಿಕೆಟ್ ಬುಕ್ಕಿಂಗ್ ಹಾಗೂ ಮಾಹಿತಿಗೆ www.wonderla.com ಅಥವಾ ಮೊಬೈಲ್ ಸಂಖ್ಯೆ 80372 30333, 80350 73966 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟವು 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ.

ದಿನಪತ್ರಿಕೆ ವಿತರಕರ ಮಕ್ಕಳು, ಹಂಚಿಕೆದಾರರ ಮಕ್ಕಳು, ಪತ್ರಿಕೆ ವಿತರಿಸುವ ಹುಡುಗರು ಅರ್ಜಿ ಸಲ್ಲಿಸಬಹುದು. ಅಂಕಪಟ್ಟಿ, ಆಧಾರ್ ಕಾರ್ಡ್‌ನ ದೃಢೀಕೃತ ಪತ್ರ ಹಾಗೂ ಫೋಟೊವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಮೇ 30ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪಿ. ಸಂಗಮ್ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೊಬೈಲ್ 9972534666, 9986327778.

ನಗರದಲ್ಲಿ ಇಂದು

'ಭವಿಷ್ಯ ರೂಪಿಸಿ' ಕಾರ್ಯಾಗಾರ: ಮಾರ್ಗದರ್ಶನ: ಬಿ.ಕೆ. ಬಸವರಾಜು, ಜಿ. ವಿಶ್ವನಾಥಪ್ಪ, ಆಯೋಜನೆ ಮತ್ತು ಸ್ಥಳ: ಶ್ರೀ ಗಾಣಿಗ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಮಹಾಲಕ್ಷ್ಮಿ ಲೇಔಟ್, ಬೆಳಿಗ್ಗೆ 10ರಿಂದ

ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಆರ್. ಕೆ. ಜೈಗೋಪಾಲ್, ತಲ್ಲಮ್ ವೆಂಕಟೇಶ್, ಎಂ.ಆರ್. ಜಯರಾಮ್, ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11

ಆರ್ಟ್ ಆಫ್ ಗಿವಿಂಗ್‌ನ 10ನೇ ವಾರ್ಷಿಕೋತ್ಸವ: ಅತಿಥಿಗಳು: ಎಂ.ವಿ. ವೆಂಕಟೇಶ್, ವೂಡೇ ಪಿ. ಕೃಷ್ಣ, ರಾಜು ಕೃಷ್ಣಮೂರ್ತಿ, 'ಮುಖ್ಯಮಂತ್ರಿ' ಚಂದ್ರು, ಬಿ.ವಿ. ಶಾಂತ ಮಾರಿಯಾ, ಆಯೋಜನೆ: ಆರ್ಟ್ ಆಫ್ ಗಿವಿಂಗ್, ಸ್ಥಳ: ಶೇಷಾದ್ರಿಪುರ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಮಧ್ಯಾಹ್ನ 3ರಿಂದ



'ಮುಖ್ಯಮಂತ್ರಿ' ಚಂದ್ರು

'ಡಾ. ಅನುಪಮಾ ನಿರಂಜನ' ಜನ್ಮದಿನ, ಪ್ರಶಸ್ತಿ ಪ್ರದಾನ, ಬಹುಮಾನ ವಿತರಣೆ ಕಾರ್ಯಕ್ರಮ: ಉದ್ಘಾಟನೆ, ಪ್ರಶಸ್ತಿ ಪ್ರದಾನ: ಡಾ. ವಸುಂಧರಾ ಭೂಪತಿ, ಅಧ್ಯಕ್ಷತೆ: ಡಾ. ಕೆ.ಆರ್. ಸಂಧ್ಯಾ ರೆಡ್ಡಿ, ಅಭಿನಂದನಾ ನುಡಿ: ಗೀತಾ ಶಿಂಧೆ, ಪ್ರಶಸ್ತಿ ಪುರಸ್ಕೃತರು: ನಿರ್ಮಲಾ ಸಿ. ಎಲಿಗಾರ್, ಕಥಾ ಸ್ಪರ್ಧೆ ವಿಜೇತರು: ವಿದ್ಯಾ ಶಿರಹಟ್ಟಿ, ಆಶಾ ನಾಗರಾಜ್, ವಿಜಯಲಕ್ಷ್ಮಿ ನುಗ್ಗೇಹಳ್ಳಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಪ್ರವಚನ ವಾಹಿನಿ: 'ಉಪನಿಷತ್ತಿನ ಕಥೆಗಳು' ಕುರಿತು ಉಪನ್ಯಾಸ: ಶಾಂತಾ ಗೋಪಾಲ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಚಾವುಂಡರಾಯ' ನಾಟಕ ಪ್ರದರ್ಶನ: ರಚನೆ: ಜಯರಾಮ ರಾಯಪುರ, ನಿರ್ದೇಶನ: ಹುಲುಗಪ್ಪ ಕಟ್ಟಿಮನಿ, ರಂಗವಿನ್ಯಾಸ: ಎಚ್.ಕೆ. ದ್ವಾರಕಾನಾಥ್, ಸಂಗೀತ: ದಿಗ್ವಿಜಯ ಗೆಗ್ಗೋಡು, ಆಯೋಜನೆ: ಸಮಾಜಮುಖಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ:
nagaradalli_indu@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

GE KAY Convent High School Requires Graduate Primary/ Nursery/ High School English and Science Teachers Immediately Contact Principal: 9880800758

JOB OPPORTUNITY

Deccan International School

- Cambridge Senior Secondary (B.Ed., Masters or PG in respective subjects)
  - Physics ▸ Biology ▸ Mathematics ▸ Economics ▸ English
- Middle & High School (B.Ed., Masters or PG in respective subjects)
  - Physics ▸ Mathematics ▸ Dance ▸ Economics ▸ Librarian
- Early Years Music Teacher (Indian Music-Minimum 2years of work exp.)
- Football & Basket Ball Coach (Minimum 3 to 5 years of relevant experience is mandatory)

Deccan PU College

- Principal
  M.Com & B.Ed (PhD will be an added advantage) 10 years of teaching experience, must have served in an administrative capacity in any recognized College/Institution of Higher education.
- Lecturer (B.Ed., & Masters in respective languages)
  - Hindi ▸ English

✓ Attractive compensation package commensurate with qualification & experience.
✓ We are equal opportunity employer.

Candidates may email their CV with photograph

work@deccan.edu.in

#11, 18th Main Rd, Brindavan Layout, Padmanabhanagar, Bengaluru, Karnataka 560061

JOB OPPORTUNITY

THE ASHRAM SCHOOL ದಿ ಆಶ್ರಮ ಸ್ಕೂಲ್

- Tailoring Teacher (Diploma in Tailoring with Minimum 5 Yrs. of work experience, Kannada speaking candidates are preferred)

✓ Attractive compensation package commensurate with qualification & experience.
✓ We are equal opportunity employer.

Candidates may email their CV with photograph

work@deccan.edu.in

The Ashram School, Uttarahalli Main Road, Chikkallasandra, Bengaluru, Karnataka 560061

HARWARD PU COLLEGE
FOR THE ACADEMIC YEAR 2023 - 24
REQUIRES LECTURERS FOR I PU & II PU
Integrated Science Faculties For JEE & K-CET Coaching
Subject: Physics, Chemistry, Mathematics & Biology
Commerce Faculties : Economics
Eligibility - Post Graduation + 5 years experience
HARWARD SCHOOL
Kannada (M.A, B.Ed) TGT
email : infoharwardints@gmail.com
Contact : 9880112833 / 9945230286
Dasanapura, Tumkur Road, Bengaluru North - 562162

NISARGA HIGH SCHOOL, Opposite to Government Hospital, Hegganahalli Bangalore-91 requires Trained TEACHERS for English Hindi, Kannada Maths Science Computer Science, Lady PE for Primary, Middle and High School. Good Communication skill is must, minimum two years of experience. OFFICE ASSISTANT with Computer Knowledge. CO_ORDINATOR: Highly Organised, excellent communication and problem solving skills & HOUSE KEEPING. Walk-in Interview on 21/5/2023 between 10 am to 12 pm. Contact: 080-28362314 7012724659 9844754318 Email: nisargahighschool@gmail.com

CAMLIN HIGH SCHOOL 6th 'C' Main Hampinagara Vijayanagar 2nd Stage, Bangalore. Requires TEACHERS MATHS, ENGLISH, SOCIAL, COMPUTER SCIENCE, DRAWING, Contact for Immediate appointment. 080-23301363

NEW HOLY Saint Primary DEd/ BEd Experienced Lady Teachers 9000-10000/- Vijayanagar Bangalore +Tuition: 7892461960

WANTED ENGLISH MEDIUM TRAINED Lady Teachers for Primary to teach all the subjects and Trained Male/ Female Graduates for High School to teach Maths/ Science/ Hindi/ Computer Science. Lady Graduates Interested in teaching can also apply. Age limit below 40 years. Attractive Salary with PF and ESI Facilities. Accommodation for out station candidates will be arranged. Contact in person (10.00 am- 3.00 pm on all working days)- Secretary, Deccan Educational Society®, No.95, 3rd Cross, Srirampuram, Bengaluru- 560021 (Near Sampige Theater, Malleswaram).

WANTED TRAINED Grduates to Teach in English Primary school, Computer Teacher, Librarian, Physical Eduction Eeacher, Driver for School Bus.Walk in interview on 20.05.2023 at 3pm. at Bharatiya Samskriti Vidyapith , #76, 1st Main Road, Chamarajpet, Bangalore – 560018, Mob :- 7899900241.

URGENTLY REQUIRED: Experienced FEMALE TEACHERS in WISDOM INTERNATIONAL SCHOOL as shown below: a) All subjects for High School, Primary and Pre-Primary. b) Computer teachers. c) Typist English, Hindi and Kannada. d) PE teacher male staff only. Walk-in interview immediately call-9243104680

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in

Invites Applications for the following Posts:

A. Assistant Teachers for Pre-Primary School : Pay Scale: Rs. 11650-32950/-
Qualification: Graduate with a minimum of 55% marks from a recognized university and NTT or Montessori Training
Desirable: Passion to teach children with care.

B. Teachers (State & ICSE Syllabus) Pay Scale: Rs. 18050-45500/-
a) For Primary School, **Subjects:** Science (PCM/CBZ)
b) For High School
Subjects: English & Social Science/Social Science & Economics/ Science (PCM/CBZ)
Qualification: Graduate / Post Graduate with a minimum of 55 % marks from a recognized university and B.Ed., with teaching methods in relevant subject(s)
Desirable: Proficient in English

C. Lady Physical Education Teacher Pay Scale: Rs. 14750-39850/-
Qualification: Graduate with a minimum of 55 % marks from a recognized university and B.PEd.,
Desirable: Basic Computer Skills.

D. Lecturers for PU Colleges : Pay Scale: Rs. 23450-56750/-
Subjects: Hindi/English//Mathematics/Biology/Computer Science/ Statistics/Psychology/ Economics/History
Qualification: Master's Degree in relevant subject from a recognized university with a minimum of 55% Marks and B.Ed., with teaching methods in relevant subject(s).

E. Assistant Professors for Degree Colleges: Pay Scale: Rs. 23450-56750/-
Subjects: Kannada/Sanskrit/Hindi/ English /Mathematics/Zoology/Computer Science/ Statistics/ Commerce/Psychology/Political Science/History/Economics
Qualification: Master's Degree in relevant subject from a recognized university with a minimum of 55% Marks and qualified in NET/SLET or PhD (with course work included as part of the doctoral programme)

F. Assistant Professors for P.G. Mathematics at Degree College: Pay Scale: Rs. 27550-56750/-
Qualification: Master's Degree in relevant subject from a recognized university with a minimum of 55% Marks and PhD.,(with course work included as part of the doctoral programme)
Desirable: Post-doctoral experience & Research Publications

G. Computer Technician: Pay Scale: Rs. 12850-36850/-
Qualification: Bachelor's Degree in Computer Science /Computer Applications from a recognized university with a minimum of 55% Marks or Bachelor's Degree from a recognized university with a minimum of 55 % marks and Diploma in Hardware Maintenance / Computer
Desirable: i) previous experience of working in computer lab/hardware maintenance in educational institution(s) ii) knowledge of software applications

H. Office Assistants (Accounts) Pay Scale: Rs. 11650-32950/-
Qualification: B.Com with Tally (ERP 9.0) operations and proficient in MS Office and other computer applications. Previous experience in office procedure & accounting and correspondence in Kannada and English.

I. Counsellor Consalidated salary of Rs. 35,000/-
Qualification: Master's Degree in Counseling Psychology / Clinical Psychology from a recognized university with a minimum of 55% Marks, **Desirable:** Basic Computer Skills.

1. The posts carry scales of pay and allowances such as HRA at 25%, Interim allowance 60%. Besides this, contribution towards PF and Gratuity as terminal benefit.
2. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 25.05.2023 duly superscribing the envelope with "Application for the post of ______________". (Download application from www.mesinstitutions.in)
3. Candidates with experience are preferred.
4. Competency in ICT enabled teaching is desirable.
5. All posts are tenable in any of the MES Institutions and are transferable.
6. Decision of the selection committee is final.
7. Resorting to any sort of influence will be deemed as a disqualification of the candidature.

Advt. No. MES/19/ADM-1/2023 Dated 17.05.2023 CHIEF EXECUTIVE

ST. JOHN'S HIGH SCHOOL
132, St. John's Church Road, Cleveland Town, Bangalore – 560 005
Email : contactus@csistjohnshighschool.edu.in
Website : johnshighedu.com :
Phone Nos. 080- 29719720/ 9739600075

VACANCIES
1) PHYSICS TEACHER – HIGH SCHOOL (ISC), M.Sc. (Physics) B.Ed.,
2) GEOGRAPHY TEACHER – HIGH SCHOOL, M.A./M.Sc.,(Geography) B.Ed.,
3) ENGLISH TEACHER – MIDDLE SCHOOL, B.A., (English) B.Ed.,
4) HISTORY & GEOGRAPHY TEACHER – MIDDLE SCHOOL, B.A., (History & Geography) B.Ed.,
5) SECRETARY TO PRINCIPAL, Graduate, Diploma in Secretarial Course
6) LAB ASSISTANT (TEMPORARY) Graduate in Science (PCM/CBZ)

The Application Forms are available in the SCHOOL OFFICE from 17.05.2023 to 22.05.2023 from 9.30 a.m to 1.00 p.m.

WANTED TEACHERS
Wanted trained and experienced teachers with good command of English for **Primary** - Social Science and English. **High School** - Computer Science and English. Send your resume to **st.thomaswfd@gmail.com Ph: 080-28452484**

GURUKULA INTERNATIONAL School Requires, NURSERY, NTT, English, Maths, EVS and Computer Teachers for Primary. 9th Cross, Near Magadi Road Metro Station, Bangalore-23. 7829338292 7676676629

WANTED POST Graduate Teachers For English medium School with Minimum 5years Experience,Good fluency in English for Highschool, Primary and Nursery with B Ed, and NTT for Maths, Science Social, English and Hindi Freshers & Retd Teachers can also apply Walk-in-interview between 10am to 12.30pm Apply to The principal/secretary Pt Jawaharlal Nehru Memorial school 6/23/1, 4th Main Road,9th cross,Chamarajpet, Near TR mill,Bangalore-18 Contact-9632315392

BEST ENGLISH/ SOCIAL SCIENCE/ MATHS/ HINDI/ GENERAL SCIENCE/ MUSIC/ B.P.Ed TEACHERS for CBSE SCHOOL. Good salary is offered 9449835744/ 9535601743.

BRILLIANCE ENGLISH SCHOOL Jayanagar 3rd Block Bangalore-11 Required B.Ed Teachers For High School: Science,English & Social Science Call 080-26630237 9845178331

REQUIRE TRAINED & Exp Lady Teachers for Primary for all Subjects. Hebbal, Kempapura Call:080-22330003, 9008981637 svsres21@gmail.com

FLORENCE HIGH SCHOOL, Viviani Road, Richards Town, Bengaluru-5 and THE BEST HIGH SCHOOL, HBR Layout, Bengaluru-43 Requires 1).Nursery Trained Teachers, 2).Computer Teachers-BCA, 3).P.E.Teachers, 4).Clerks Graduates having Computer knowledge. Salary according to merit. Apply/ walk-in/ Contact Principal 10.00-3.00 Phone: 9845583297/ 8904474400 slflorence@yahoo.co.in

WANTED IMMEDIATELY on Part-Time Basis with experience (1) ASSISTANT PROFESSOR in English: M.A in English, studied as optional in UG level to TEACH B.Com/ BBA Students (2) LECTURER- M.Com to TEACH Commerce Subjects For PU STUDENTS (3) LECTURER in Computer Science: M.Sc in Computer Science or MCA to Teach Computer Science to Degree students (4) HIGH-SCHOOL TEACHERS- (2) B.Ed to Teach Chemistry, Biology, Social-Science & Hindi to both English and Kannada medium students. Apply on or before 24/05/2023 with passport size photo. To The Secretary, BHARATHAMATHA EDUCATION SOCIETY (R) Hanumanthanagar, Bangalore-19 Phone: 080-26672836, 9110669225 Email: bharathamatha.edusoc@gmail.com

REQUIRE ENGLISH Language Teacher with MA/ BA, B.Ed to teach in Primary school section. Librarian with M.L.Sc/ B.L.Sc. & Part time Music Teacher with Classical background. Apply immediately to Hon. Secretary, Poornaprajna Education Centre, CA Site No. 48, New Thippasandra, HAL 3rd Stage, Bangalore- 75. Ph: 080-25292930 poornaprajnants@gmail.com

ST.ANN'S English School
Veerabhadranagar, Opp. PESIT, BSK 3rd Stage, Bangalore-85
REQUIRED
TEACHERS for English & Social For High School.
Walk-in: 18 to 22.05.2023
M: 9449834541, 7348894111
stannspublic2004@gmail.com

REPUTED ENGLISH Medium School requires experienced trained LADY TEACHERS for Nursery/ Primary/ Higher Secondary for teaching English, Maths, Science, E.V.S, P.E Teacher. Walk-in interview. 10:00 AM to 2:00 PM. Good salary. New Oxford English School, #129, 6th cross, Gandhinagar, Bangalore-09, Ph: 22261590/ 8884440214.

WANTED SCIENCE, English, Social Science, Computer Teachers, Clerks, Manager, Primary/ High School, J.P.Nagar: 9845042249, 9844021116.

WANTED TEACHERS, Nursery, Primary and High-school classes for all the subjects including P.E. and Computer. 'SRI VIDYA KENDRA' Peenya 1st stage, Bengaluru-58 Phone: 9900708182, 28398833, 41179155

WANTED QUALIFIED TEACHERS for Primary and High School Classes for all the subjects. Infant's Indian High School, Austin Town Layout, Bengaluru- 560047. 25300109.

Wanted Experienced Lady Teachers with excellent communication skills in English.
1. High School
Post Graduate with B.Ed. to teach Sanskrit and Mathematics
2. Art and Craft Teacher
with BFA
3. Librarian
Graduate/Post-Graduate in Library Science.
Walk-in Interview
Thursday, May 18th and Friday,19th 2023
Between 10.30 a.m. – 12.30 p.m.
Or Email your resume to **info@florence.edu.in** for an appointment.
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536693

REQUIRED EXPERIENCED & Trained Teachers to handle Primary & High School classes. A) English- Qualification: B.A/M.A.,B.Ed/M.Ed (B)P.E.Teachers (C)DTP Operator. Interested candidates contact Max Muller Public School, Mahalakshmi Layout, Bangalore-96. Ph:23376050. E-mail: maxmullerpublicschool.mlayout@gmail.com

BG NATIONAL Public School,Jakkur Layout,Opp GKVK Campus. Requires HEAD MISTRESS, Academic Co-Ordinator, Female Office Assistant, TEACHERS for Higher Primary English,Maths. Contact: 9740619796/ 8050088907 Mail: bgnps2015@gmail.com

FRANK PUBLIC HIGH SCHOOL, JP.Nagar 6thPhase, requires ENGLISH, HINDI, PE TEACHERS. rumysud@gmail.com WhatsApp7019301626

"WANTED DRIVER,COOK, OPERATOR,HOUSE KEEPING HELPER for_a Manufacturing company located_in Bommanahalli, near H.S.R.Layout, Bangalore-68. Send-CV-to: uppbangalore@gmail.com /Contact: 9449817703"

Walk-in

V.E.S. MODEL CONVENT
Affiliated to CISCE, New Delhi-KA212, No.63, Magadi Main Road, Tavarekere, Bangalore South-562130
Mob: 8296194095 / 8296185175
Email: vesmodelconvent@gmail.com www.ves.org.in
3 DECADE OLD SIGNATURE SCHOOL
WALK-IN-INTERVIEW
VES, a reputed ICSE School in the locality requires trained and experienced faculty with good command over spoken & written English for the academic year 2023-24. Candidates with min. 2 yrs exp in CISCE/CBSE affiliated schools are eligible to attend the interview.
♦ B.A., B.Ed English & Social Science ♦ B.Sc., B.Ed Mathematics, Science
ANY DEGREE WITH NTT / ECC For Nursery Section
1) Competent candidates are required to attend the interview with experience letter and all testimonials.
2) Age of the Candidate Should be less then 40 years.
3) Selected candidates will be provided good package along with PF, ESI, Gratuity and Transportation.

General

EXECUTIVE APPAREL Processors, Tumkur Road, Bangalore requires experienced DATA-ENTRY OPERATOR- Male Candidates around Peenya, Yeshwanthpur preferred Contact: 9845034556 executiveapparels@gmail.com

WANTED FOR clerical job_in transport Company Qualification PU_or_Bcom passed Location Wilson garden Bangalore Call:9535218502 9845351200

SRI RAMAKRISHNA HOTEL
No. 262, S.C.Road, Gandhinager, Bengaluru 560009
Contact No. 080-22263041
CASHIER
4 to 5 years experience in Hotel and Lodging, with Accounting & Computer knowledge.
ELECTRICIAN
ITI / Diploma in Electrical with 4 years experience
PLUMBER / PAINTER
Well Trained Plumbers and Painter for Monthly Salary
Attractive salary. Interested Candidates can send their updated CV, Qualification & Experience certificate by email with the position applied in the subject line to: sriramakrishnalodgeltd@gmail.com
Contact: Vishnu: 9901081044
Nandish: 9901434156, Suresh: 8431782204
RKL-23401

BOOKING EXECUTIVE required to manage corporate cab bookings. WhatsApp CV to 9019043325. Work from Home/ KR Puram. Salary: 16k- 24k. Good English communication.

Manager

LOOKING FOR an office manager for an immigration startup, apply with CV at dr.darshansshah@gmail.com

Part-Time Jobs

EXCELLENT GREAT Opportunity Work From Home Earn Unlimited From 35k-40k Part/ Full Time: 9886641282/ 7019215243

Marketing & Sales

WANTED MARKETING Executive for Bangalore & Davangere area Fresher or Experienced Candidate Needed Min. qualification: Any Degree Two wheeler Must Interested People Can Send Their Resume to bangalore@agsar.net or Call: 9900091609

A_REPUTED NATIONAL NGO_requires Development Executives for`Bellary, Dharwad, Mangalore & Bangalore. Male/Female Graduates`with aptitude for`Social Marketing`are preferred. Contact: 6384946556 jobforngo@gmail.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Engg/ Production Technical

URGENTLY REQUIRED
Candidates with Diploma in Electrical/Electronic Required
Suitable Remuneration as per Qualification & Experience
AURO LED
57/1, BENNIGANAHALLI, OLD MADRAS ROAD, PAI LAYOUT BENGALURU – 560 016.
Call: 80420 30356

V3 MOULDING PVT LTD (Injection Moulding Company) requires Store Assistant (2 Posts) with 2 to 3 Yrs Experience & Production Shift in Charge (2 Posts)- with minimum 5 yrs experience (Education plastic technology or PGD-PTCT or polymer technology) for Shoolagiri (TN). Please send resume to hr@v3moulding.com.

***WANTED* SSLC,** PUC,ITI, Diploma for CNC Machine Operator Company. Contact:DAS CNC Products Pvt Ltd. 9845159737

ENGINEER/ DIPLOMA holders One Year experience on marketing CAD software with a flair for mould design. Email:aftc@advancedforming.com

REQUIRED
CIVIL ENGINEER
for Leading Real Estate Development company for their Villa Project.
Should be a B.E. (Civil) / Diploma in Civil Engineering, with 2 years' experience in construction.
Should be well conversant in project planning, cost control & quality monitoring.
Apply on or before 25th May 2023
Contact : TBC HOMES INFRA CORP
+91 85532 81142
Email: madhan@tbcinfra.in
https://www.grandlacasa.com

A 27 year old Co. is looking for
AC Technicians
who have 3-4 years experience in Break down Service and Repairs
Qualification must be ITI or MRAC equivalent with atleast 3 years independent hands on experience in Service / Repairs of ACs like VRF, Split ACs all types etc.
Send CV to WhatsApp :
99724 37094

"WANTED BE Candidate from ECE, EEE and CSE, with Experience of 0/2Years only. Contact:'Yukthi Datasoft Pvt.Ltd.' 7795734869/ 9986934382"

ENGINEER/ DIPLOMA holders with One Year experience in CAD are required for Office @ Nagarbhavi, Bangalore. Email:aftc@advancedforming.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages

CONNECT ಕ್ಲಾಸಿಫೈಡ್ಸ್

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHREYA HEARING CLINIC



Our Smart Clients Use Smart Hearing Aids
Come Be part of our family
Free Test and Demo of SMART Hearing Aids
17 to 23 rd May FREE TEST and Attractive OFFERS
25ನೇ ವರ್ಷದ ಆಚರಣೆಯ ಕೊಡುಗೆಗಳು
25 YEARS
FOR YOU WITH YOU GROWING TOGETHER FOR 25 YEARS
HOME VISITS 9945633115
We believe in sound relationship...

Indiranagar 2521 4746/47	Jayanagar 2653 3055/56	Koramangala 2563 4411/12	Bannerghatta Rd 2648 6033/34
Sadashivnagar 2361 8037/38	Vijayanagar 2318 0011/12	Kammanahalli 2545 5078/79	Marathalli 2844 1062/63

ReSound GN Made for iPhone
Centers at Hyderabad, Mangalore and Mysuru
sathya@shreyahearingclinic.com
www.shreyahearingclinic.com
signia Life sounds brilliant.



ಓಂ ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ಪಂಡಿತ್ ಶ್ರೀ ರಾಮ್ ಭಟ್



ವಿದ್ಯೆ-ಉದ್ಯೋಗ,ಪ್ರೀತಿ-ಪ್ರೇಮ, ವ್ಯಾಪಾರ ಲಾಭ-ನಷ್ಟ, ಶತ್ರುಕಾಟ, ರಾಜಕೀಯ, ಆರೋಗ್ಯ, ಶಿಕ್ಷಣ, ವಿಚ್ಛೇದನ, ವಿದೇಶ ಪ್ರಯಾಣ, ಹಣಕಾಸು, ಮಕ್ಕಳ ಸಮಸ್ಯೆ, ಕೋರ್ಟ್ ಕೇಸ್, ಪ್ರಾಪರ್ಟಿ, ಮನೆಫ್ಯಾಕ್ಟರಿಗೆ ವಾಸ್ತು ದೋಷ, ಮಾನಸಿಕ ಸಮಸ್ಯೆ, ಮದುವೆ, ಸಂತಾನದಲ್ಲಿ ವಿಳಂಬ, ಸ್ತ್ರೀಪ್ರೇಮ, ಸ್ತ್ರೀ-ಪುರುಷ ವಶೀಕರಣ, ಸ್ತ್ರೀ-ಪುರುಷ ಗುಪ್ತ ಸಮಸ್ಯೆ, ಶತ್ರುಕಾಟ, ಮಾಟ-ಮಂತ್ರ ವಶೀಕರಣ, ದುಷ್ಟಶಕ್ತಿ, ಭೂತಚೇಷ್ಟೆ ನಿವಾರಣೆ ಹಾಗು ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಯಂತ್ರ-ಮಂತ್ರ ಹಾಗೂ ಕೇರಳದ ಗುಪ್ತ ವಿದ್ಯೆಯಿಂದ 11 ದಿನದಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. ಪೋನಿನ ಮೂಲಕ ಉತ್ತಮ ಸಲಹೆ ಶಾಶ್ವತ ಪರಿಹಾರ.

ವಿಳಾಸ: ನಂ.747, ಚಿನ್ಮಯ್ ಆಸ್ಪತ್ರೆ ಹತ್ತಿರ, ಕೃಷ್ಣ ದೇವಸ್ಥಾನದ ಹಿಂಭಾಗ ಇಂದಿರಾನಗರ, ಬೆಂಗಳೂರು-560038 ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ
ಸಮಯ: ಬೆಳಿಗ್ಗೆ 9 ರಿಂದ ರಾತ್ರಿ 8 ರವರೆಗೆ ಸಂಪರ್ಕಿಸಿ: 9880403406

CADD Nest® Nation | Energetic | Success | Technology
Job Oriented Software Training for
- Full Stack Developer
- C, C++, Java / Python / Data Science / AI / ML
- Data Analytics • Tally Prime / Advanced Excel
- SAP FICO / MM / SD / Civil / Architectural CADD
- Mechanical CADD / Interior Design • Digital Marketing
- Spoken English • Hardware & Networking
- Animation / Graphic / Web Designing
- Handwriting / Calligraphy

Contact: 9740444363 / 9740442121 / 080-41608308
www.caddnest.org

NavaShakthi Chits Pvt. Ltd.

Sl. No.	Chit Value	No. Of Months	Monthly Subscription
1	1,00,000	25	4,000
2	1,50,000	30	5,000
3	3,00,000	30	10,000
4	5,00,000	40	12,500
5	5,00,000	25	20,000
6	10,00,000	40	25,000
7	10,00,000	25	40,000
8	20,00,000	40	50,000
9	25,00,000	25	1,00,000
10	30,00,000	30	1,00,000
11	50,00,000	40	1,25,000
12	50,00,000	25	2,00,000
13	1,00,00,000	40	2,50,000
14	1,00,00,000	25	4,00,000

* T & C Apply
Reg. Off : No. 553/7th Cross, 3rd Main, Ayyappa Temple Road, Prakash Nagar, Bengaluru - 560 021, Karnataka
Phone : 91 80 - 234203611 / 2332 8880
Mobile : 9538277677 / 7829330324
E-mail : info@navashakthichits.com
Website : www.navashakthichits.com | www.shakthigroup.com
An Initiative of Shakthi Group

ಲೈಂಗಿಕ ಕಿರುಕುಳ, ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಆರೋಪ

ಗುಳೇದ್ ವಿರುದ್ಧದ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿ ಭೀಮಾಶಂಕರ ಎಸ್. ಗುಳೇದ್ ವಿರುದ್ಧದ ಲೈಂಗಿಕ ಕಿರುಕುಳ, ಹಣ ಅಕ್ರಮ ವರ್ಗಾವಣೆ, ಬೇನಾಮಿ ಹಾಗೂ ಭ್ರಷ್ಟಾಚಾರ ಆರೋಪದಡಿ ದಾಖಲಾಗಿದ್ದ ಎರಡು ಪ್ರತ್ಯೇಕ ಪ್ರಕರಣಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

‘ವಿಚಾರಣಾ ನ್ಯಾಯಾಲಯವು ನನ್ನ ವಿರುದ್ಧದ ಎರಡು ಖಾಸಗಿ ದೂರುಗಳನ್ನು ವಿಚಾರಣೆಗೆ ಪರಿಗಣಿಸಿರುವುದನ್ನು ವಜಾಗೊಳಿಸಬೇಕು’ ಎಂದು ಕೋರಿ ಭೀಮಾಶಂಕರ ಗುಳೇದ್ ಸಲ್ಲಿಸಿದ್ದ ಎರಡೂ ಅರ್ಜಿಗಳನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ದೂರುದಾರರ ಪತ್ನಿಯೇ ಅಕ್ರಮ ಸಂಬಂಧದ ಚಿತ್ರ ಮತ್ತು ವಿಡಿಯೊಗಳನ್ನು ರೆಕಾರ್ಡ್ ಮಾಡಿ ಅವುಗಳನ್ನು ಡಿಲಿಟ್ ಮಾಡಿದ್ದಾರೆ. ಹಾಗಾಗಿ, ಆರೋಪಿ ಗುಳೇದ್ ಅವುಗಳನ್ನು ನಾಶ ಮಾಡಿದ್ದಾರೆ ಎಂಬುದು ಸರಿಯಲ್ಲ. ಮೊಬೈಲ್‌ನಲ್ಲಿನ ಕೆಲವು ಅಹಿತಕರ ಚಿತ್ರಗಳಿಗೆ ಪತಿ-ಪತ್ನಿಯರ ನಡುವೆ ಕಲಹವಾಗಿದೆ. ಅದಕ್ಕೆ ಗುಳೇದ್ ಅವರು ಬೆದರಿಕೆ ಹಾಕಿದ್ದಾರೆ ಎನ್ನುವುದನ್ನು ಒಪ್ಪಲಾಗದು’ ಎಂದು ನ್ಯಾಯಪೀಠ ಹೇಳಿದೆ.

‘ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ಪಿಎಂಎಲ್ ಕಾಯ್ದೆಯ ಕಲಂ 45ರ ಅಡಿ ಪ್ರತಿವಾದಿಯಾಗಿರುವ ದೂರುದಾರ ಸಲ್ಲಿಸಿರುವ ದೂರು ಊರ್ಜಿತವಲ್ಲ. ವಿಚಾರಣಾ ನ್ಯಾಯಾಲಯವು ಅಪರಾಧವನ್ನು ಸಂಜ್ಞೇಯ ಎಂದು ಪರಿಗಣಿಸುವಂತಿಲ್ಲ ಮತ್ತು ಸಾಕ್ಷ್ಯ ದಾಖಲು ಮಾಡಲು ಆದೇಶಿಸಲಾಗದು. ಪಿಎಂಎಲ್ ಕಾಯ್ದೆಯ ಕಲಂ 3, 4 ಮತ್ತು 5ರ ಅಡಿ ಜಾರಿ ನಿರ್ದೇಶನಾಲಯದ ನಿರ್ದೇಶಕರೇ ದೂರು ದಾಖಲಿಸಬೇಕು’ ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ದೂರುದಾರರು ಮಾಡಿರುವ ಆರೋಪ ಏನು?

‘ದಾವಣಗೆರೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಭೀಮಾಶಂಕರ ಗುಳೇದ್ ಕಾರ್ಯಕ್ರಮವೊಂದಕ್ಕೆ ಫೋಟೊಗ್ರಾಫರ್ ಸೇವೆ ಕೋರಲು ದೂರುದಾರ ಎಂಜಿನಿಯರ್ ಸ್ಥಾಪಿಸಿದ್ದ ಸ್ಟುಡಿಯೊಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸ್ಟುಡಿಯೊದ ಸಹ ಪಾಲುದಾರೆಯಾದ ಪತ್ನಿ ಜೊತೆಗೆ ಗುಳೇದ್ ಅವರು ಸ್ನೇಹ ಬೆಳೆಸಿ, ಲೈಂಗಿಕ ಸಂಪರ್ಕ ಹೊಂದಿದ್ದರು. ಇದನ್ನು ಪತ್ನಿಯ ಮೊಬೈಲ್‌ನಲ್ಲಿ ಗುಳೇದ್ ಸೆರೆ ಹಿಡಿದಿದ್ದರು. ಇದು ನನಗೆ ಗೊತ್ತಾಗಿತ್ತು. ಫೋಟೊಗಳನ್ನು ಡಿಲಿಟ್ ಮಾಡುವಂತೆ ಗುಳೇದ್ ನನಗೆ ಬೆದರಿಕೆ ಹಾಕಿದ್ದರು’ ಎಂದು ಆರೋಪಿಸಿದ್ದ ದೂರುದಾರ ಪತಿ ಬೆಂಗಳೂರಿನ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಮತ್ತೊಂದು ಪ್ರಕರಣದಲ್ಲಿ, ‘ಗುಳೇದ್ ಮತ್ತು ಕರ್ನಾಟಕ ರಾಜ್ಯ ಹಣಕಾಸು ಆಯೋಗದ (ಕೆಎಸ್‌ಎಫ್‌ಸಿ) ಇಬ್ಬರು ಅಧಿಕಾರಿಗಳು ಸೇರಿಕೊಂಡು ಪತ್ನಿಗೆ ಸಾಲ ಕೊಡಿಸಿದ್ದರು. ಆ ಮೂಲಕ ಹಣ ಅಕ್ರಮ ವರ್ಗಾವಣೆ ಮಾಡಿದ್ದು, ಬೇನಾಮಿ ಹೆಸರಿನಲ್ಲಿ ‘ನ್ಯೂ ಪ್ರೊ ಸ್ಟುಡಿಯೊ’ ಮತ್ತು ‘ಈವೆಂಟ್ಸ್’ ಉದ್ಯಮ ಆರಂಭಿಸಿದ್ದರು’ ಎಂದು ಆಕ್ಷೇಪಿಸಿ ಖಾಸಗಿ ದೂರನ್ನು ಸಲ್ಲಿಸಲಾಗಿತ್ತು. ಈ ಎರಡೂ ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲು ವಿಶೇಷ ನ್ಯಾಯಾಲಯ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರ ಗುಳೇದ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಪುನೀತ್ ಕೆರೆಹಳ್ಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನುವಾರು ಸಾಗಣೆ ಸಂದರ್ಭದಲ್ಲಿ ಇದ್ರೀಷ್ ಪಾಷ (45) ಎಂಬುವವರ ಅನುಮಾನಾಸ್ಪದ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ಹಾಗೂ ಇತರ ನಾಲ್ವರು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಆರೋಪಿಗಳು ಪ್ರತ್ಯೇಕವಾಗಿ ಸಲ್ಲಿಸಿದ್ದ ಮೂರು ಅರ್ಜಿಗಳನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ. ಜಿ. ಉಮಾ ಅವರು ಮಂಗಳವಾರ ವಿಚಾರಣೆ ನಡೆಸಿ, ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ, ಗೋಪಿ, ಸುರೇಶ್, ಎ.ಎನ್. ಪವನ್ ಕುಮಾರ್, ಪಿ. ಲಿಂಗಪ್ಪ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದಾರೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್, ‘ಮರಣೋತ್ತರ ಪರೀಕ್ಷೆಯಲ್ಲಿ ಇದ್ರೀಷ್ ಪಾಷ ದೇಹದಲ್ಲಿ ತರಚಿದ ಗಾಯಗಳ ಬಗ್ಗೆ ಮಾತ್ರ ಉಲ್ಲೇಖವಿದೆ. ಗಂಭೀರ ಗಾಯಗಳ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಪ್ರಕರಣವು ಸಾತನೂರು ಠಾಣೆಯ 100 ಮೀಟರ್ ವ್ಯಾಪ್ತಿಯಲ್ಲಿ ನಡೆದಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಈಗಾಗಲೇ ತನಿಖೆ ಪೂರ್ಣಗೊಂಡಿದೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಪೂರ್ಣಗೊಳಿಸಲಾಗಿದೆ. ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕಿದ್ದು ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು. ನ್ಯಾಯಪೀಠ ಈ ವಾದಾಂಶವನ್ನು ಪುರಸ್ಕರಿಸಿದೆ.

ಪ್ರಕರಣವೇನು?: ‘ಪುನೀತ್ ಕೆರೆಹಳ್ಳಿ ಹಾಗೂ ಆತನ ಸಹಚರರು 2022ರ ಮಾರ್ಚ್ 31ರಂದು ಮಂಡ್ಯದ ಕಡೆಯಿಂದ ಬರುತ್ತಿದ್ದ ಜಾನುವಾರು ಸಾಗಣೆ ವಾಹನವೊಂದನ್ನು ಸಾತನೂರು ಪೊಲೀಸ್ ಠಾಣೆ ಸಮೀಪ ಅಡ್ಡಗಟ್ಟಿ ವಾಹನದಲ್ಲಿದ್ದವರ ಮೇಲೆ ಹಲ್ಲೆ ನಡೆಸಿದ್ದರು’ ಎಂದು ಆರೋಪಿಸಲಾಗಿತ್ತು. ಏಪ್ರಿಲ್ 1ರಂದು ಬೆಳಗ್ಗೆ ಘಟನಾ ಸ್ಥಳದಿಂದ ಅಂದರೆ ಪೊಲೀಸ್ ಠಾಣೆಯಿಂದ 100 ಮೀಟರ್ ದೂರದಲ್ಲಿ ಇದ್ರೀಷ್ ಪಾಷ ಶವ ಪತ್ತೆಯಾಗಿತ್ತು. ‘ಪುನೀತ್ ಮತ್ತು ಸಹಚರರಿಂದ ಪಾಷ ಮೇಲೆ ಹಲ್ಲೆ ನಡೆದಿದೆ’ ಎಂದು ಆರೋಪಿಸಿ ಇದ್ರೀಷ್ ಪಾಷ ಅವರ ಸಹೋದರ ಯೂನುಸ್ ಪಾಷ ದೂರು ನೀಡಿದ್ದರು. ಇದನ್ನು ಆಧರಿಸಿ ಆರೋಪಿಗಳ ವಿರುದ್ಧ ಸಾತನೂರು ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 302, 324, 341, 504, 506 ಜೊತೆಗೆ 34 ಅಡಿ ಪ್ರಕರಣ ದಾಖಲಾಗಿತ್ತು. ಆರೋಪಿಗಳನ್ನು ರಾಜಸ್ಥಾನದ ಬಾನ್ಸ್‌ವಾಡಾ ಬಳಿಯ ರಾಮನಗರ ಎಂಬಲ್ಲಿ ಪೊಲೀಸರು ಏಪ್ರಿಲ್ 5ರಂದು ಬಂಧಿಸಿದ್ದರು.

ಡ್ಯಾಗರ್ ತೋರಿಸಿ ಕಿರುಕುಳ: ಯುವತಿ ರಕ್ಷಿಸಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಯುವತಿಯೊಬ್ಬರನ್ನು ಹಿಂಬಾಲಿಸಿದ್ದ ದುಷ್ಕರ್ಮಿಯೊಬ್ಬ ಡ್ಯಾಗರ್ ತೋರಿಸಿ ಕಿರುಕುಳ ನೀಡಿದ್ದು, ಕೃತ್ಯದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಪುಲಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಮೇ 15ರಂದು ಈ ಘಟನೆ ನಡೆದಿದ್ದು, ಸದ್ಯಕ್ಕೆ ಯಾವುದೇ ದೂರು ದಾಖಲಾಗಿಲ್ಲ.

‘ವಿವೇಕಾನಂದ ರೆಸಿಡೆನ್ಸಿ ಕಟ್ಟಡದ ಬಳಿ ಮೇ 15ರಂದು ಯುವತಿಯೊಬ್ಬರು ನಡೆದುಕೊಂಡು ಹೊರಟಿದ್ದರು. ಅದೇ ವೇಳೆ ಯುವತಿಯನ್ನು ಹಿಂಬಾಲಿಸಿದ್ದ ದುಷ್ಕರ್ಮಿಯೊಬ್ಬ ಡ್ಯಾಗರ್ ತೋರಿಸಿ ಬೆದರಿಸಿ ಮೊಬೈಲ್ ಕಿತ್ತುಕೊಳ್ಳಲು ಮುಂದಾಗಿದ್ದ’ ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

‘ತಪ್ಪಿಸಿಕೊಂಡಿದ್ದ ಯುವತಿ, ಸ್ಥಳದಿಂದ ಓಡಲಾರಂಭಿಸಿದ್ದರು. ಅವರನ್ನು ಪುನಃ ಹಿಂಬಾಲಿಸಿದ್ದ ಆರೋಪಿ, ಮಾರ್ಗಮಧ್ಯೆ ಅಡ್ಡಗಟ್ಟಿದ್ದ. ಯುವತಿಯ ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡುತ್ತಿದ್ದ. ಅದೇ ಸಂದರ್ಭದಲ್ಲಿ ರಸ್ತೆಯಲ್ಲಿ ಹೊರಟಿದ್ದ ಮಹಿಳೆಯೊಬ್ಬರು ಯುವತಿ ಸಹಾಯಕ್ಕೆ ಹೋಗಿದ್ದರು. ಅವರನ್ನು ಕಂಡು ಆರೋಪಿ ಸ್ಥಳದಿಂದ ಹೊರಟು ಹೋಗಿದ್ದಾನೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ತಿಳಿಸಿದರು.

‘ಯುವತಿಗೆ ಲೈಂಗಿಕ ಕಿರುಕುಳ ನೀಡಿ, ಹಲ್ಲೆ ಮಾಡಿ ಮೊಬೈಲ್ ಕಿತ್ತೊಯ್ಯುವ ಉದ್ದೇಶ ಆರೋಪಿಯದ್ದಾಗಿತ್ತು. ಮಹಿಳೆ ಧೈರ್ಯ ತೋರಿದ್ದರಿಂದ, ಅದೃಷ್ಟವಶಾತ್ ಯುವತಿಗೆ ಏನೂ ಆಗಿಲ್ಲ. ಪರಾರಿಯಾಗಿರುವ ಆರೋಪಿ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದೆ’ ಎಂದರು.



ನಗರದ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ‘ಅಡ್ವಾನ್ಸ್‌ಸ್ ಇನ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಫಾರ್ ಇಂಟೆಲಿಜೆಂಟ್ ಸಿಸ್ಟಮ್ಸ್’ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಇಸ್ರೊದ ಟೆಲಿಮೆಟ್ರಿ ಟ್ರ್ಯಾಕಿಂಗ್ ಆ್ಯಂಡ್ ಕಮಾಂಡ್ ನೆಟ್‌ವರ್ಕ್ ಕೇಂದ್ರದ ನಿರ್ದೇಶಕ ಬಿ.ಎನ್. ಬಾಲಕೃಷ್ಣ, ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ಕುಲಪತಿ ಡಾ. ಕುಲದೀಪ್ ರೈನಾ, ಕಾಲೇಜಿನ ಜಂಟಿ ಕಾರ್ಯದರ್ಶಿ ತಿಂತಿಶಾ ಎಚ್. ಸಾಗರ್, ಪ್ರಾಂಶುಪಾಲ ಬಿ.ಜಿ. ಪ್ರಸಾದ್, ಪ್ರಾಧ್ಯಾಪಕ ಅಂಜು ವಿ. ಕುಲಕರ್ಣಿ ಇದ್ದಾರೆ

ಹೊಟ್ಟೆಯಲ್ಲಿ ಕೊಕೇನ್ ಸಾಗಣೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘ಕೊಕೇನ್’ ಮಾದಕ ವಸ್ತುವನ್ನು ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಯೊಬ್ಬರನ್ನು ಕೇಂದ್ರ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

‘40 ವರ್ಷದ ಆರೋಪಿ, ಇತ್ತೀಚೆಗೆ ವಿಮಾನದಲ್ಲಿ ನಗರದ ನಿಲ್ದಾಣಕ್ಕೆ ಬಂದಿಳಿದಿದ್ದ. ಈತನ ನಡೆಯಿಂದ ಅನುಮಾನಗೊಂಡು ಪರಿಶೀಲಿಸಿದಾಗ, ಹೊಟ್ಟೆಯಲ್ಲಿ ₹ 11 ಕೋಟಿ ಮೌಲ್ಯದ 1 ಕೆ.ಜಿ ಕೊಕೇನ್ ಪತ್ತೆಯಾಗಿದೆ. ವೈದ್ಯರ ಸಹಾಯದಿಂದ ಕೊಕೇನ್ ಹೊರಗೆ ತೆಗೆಸಿ, ಜಪ್ತಿ ಮಾಡಲಾಗಿದೆ’ ಎಂದು ಡಿಆರ್‌ಐ ಮೂಲಗಳು ಹೇಳಿವೆ.

‘64 ಮಾತ್ರೆಗಳ ಒಳಭಾಗದಲ್ಲಿ ಕೊಕೇನ್ ತುಂಬಲಾಗಿತ್ತು. ಅದೇ ಮಾತ್ರೆಗಳನ್ನು ನುಂಗಿ ಹೊಟ್ಟೆಯಲ್ಲಿಟ್ಟುಕೊಂಡಿದ್ದ ಆರೋಪಿ, ವೈದ್ಯಕೀಯ ಚಿಕಿತ್ಸೆ ವೀಸಾದಡಿ ಇಥಿಯೋಪಿಯಾ ಮೂಲಕ ವಿಮಾನದಲ್ಲಿ ನಗರದ ನಿಲ್ದಾಣಕ್ಕೆ ಬಂದಿಳಿದಿದ್ದ.’

‘ಆರೋಪಿ ನಡೆಯಿಂದ ಸಂಶಯಗೊಂಡು ತಪಾಸಣೆ ನಡೆಸಲಾಗಿತ್ತು. ಹೊಟ್ಟೆಯಲ್ಲಿ ಅನುಮಾನಾಸ್ಪದ ವಸ್ತು ಇರುವುದು ಗೊತ್ತಾಗಿತ್ತು. ತಿನ್ನಲು ಆಹಾರ ಹಾಗೂ ಕುಡಿಯಲು ನೀರು ಕೊಡಲಾಗಿತ್ತು. ಅದನ್ನು ಆರೋಪಿ ತಿರಸ್ಕರಿಸಿದ್ದ. ಹೀಗಾಗಿ, ಆತನ ಮೇಲೆ ಹೆಚ್ಚಿನ ಅನುಮಾನ ಬಂದಿತ್ತು’ ಎಂದು ಮೂಲಗಳು ತಿಳಿಸಿವೆ.

‘ಆಸ್ಪತ್ರೆಗೆ ಕರೆದೊಯ್ದು ಎಕ್ಸ್-ರೇ ಮಾಡಿಸಿದಾಗ, ಆರೋಪಿ ಹೊಟ್ಟೆಯಲ್ಲಿ ಮಾತ್ರೆಗಳು ಇರುವುದು ಗೊತ್ತಾಯಿತು. ನಂತರ, ಶಸ್ತ್ರಚಿಕಿತ್ಸೆ ಮೂಲಕ ವೈದ್ಯರು 64 ಮಾತ್ರೆಗಳನ್ನು ಹೊರಗೆ ತೆಗೆದರು. ಆರೋಪಿ ಇದೇ ರೀತಿ ಹಲವು ಬಾರಿ ಡ್ರಗ್ಸ್ ಸಾಗಣೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.



ನೈಜೀರಿಯಾ ಪ್ರಜೆಯ ಹೊಟ್ಟೆಯಿಂದ ತೆಗೆದಿರುವ ಕೊಕೇನ್ ಮಾತ್ರೆಗಳು

ವಿಮಾನದಲ್ಲಿ ಧೂಮಪಾನ: ಬಂಧನ

ಬೆಂಗಳೂರು: ವಿಮಾನದಲ್ಲಿ ಸಿಗರೇಟ್ ಸೇದಿದ ಆರೋಪದಡಿ ಪ್ರವೀಣ್‌ಕುಮಾರ್ (56) ಎಂಬುವವರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಪ್ರವೀಣ್‌ಕುಮಾರ್, ಅಹಮದಾಬಾದ್‌ನಿಂದ ಬೆಂಗಳೂರಿಗೆ ಮಂಗಳವಾರ ವಿಮಾನದಲ್ಲಿ ಪ್ರಯಾಣಿಸಿದ್ದರು. ಮಾರ್ಗಮಧ್ಯೆ ವಿಮಾನದೊಳಗೆ ಆರೋಪಿ ಸಿಗರೇಟ್ ಸೇದಿದ್ದರು. ವಿಮಾನದ ಸಿಬ್ಬಂದಿ ನೀಡಿದ ದೂರು ಆಧರಿಸಿ ಪ್ರವೀಣ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿಮಾನದಲ್ಲಿ ಧೂಮಪಾನ ನಿಷೇಧಿಸಲಾಗಿದೆ. ಅದು ಗೊತ್ತಿದ್ದರೂ ಆರೋಪಿ, ಸಿಗರೇಟ್ ಸೇದಿದ್ದ. ಅದನ್ನು ಪ್ರಶ್ನಿಸಿದ್ದ ಸಿಬ್ಬಂದಿಗೂ ಬೆದರಿಸಿದ್ದ. ಬಂಧಿತ ವ್ಯಾಪಾರಿ ಎಂದು ಗೊತ್ತಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಇಬ್ಬರು ಸದಸ್ಯರ ಅವಧಿ ಮುಕ್ತಾಯ: ಕಾಂಗ್ರೆಸ್‌ಗೆ ಬಹುಮತ ಇನ್ನೂ ದೂರ

ಪರಿಷತ್: ಬಹುಮತ ಕಳೆದುಕೊಂಡ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಸೋತ ಬಿಜೆಪಿ, ವಿಧಾನ ಪರಿಷತ್‌ನ ಹಲವು ಸದಸ್ಯರು ರಾಜೀನಾಮೆ ನೀಡಿದ್ದರಿಂದಾಗಿ ಅಲ್ಲಿಯೂ ಬಹುಮತ ಕಳೆದುಕೊಂಡಿದೆ.

ಸದ್ಯ ಯಾವ ಪಕ್ಷಕ್ಕೂ ವಿಧಾನ ಪರಿಷತ್‌ನಲ್ಲಿ ಸ್ಪಷ್ಟ ಬಹುಮತ ಇಲ್ಲ. ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಬಹುಮತ ಪಡೆದು ಸರ್ಕಾರ ರಚಿಸಲಿರುವ ಕಾಂಗ್ರೆಸ್, ಮಸೂದೆಗಳ ಅನುಮೋದನೆ ಪಡೆಯಲು ಜೆಡಿಎಸ್ ಮೇಲೆಯೇ ಅವಲಂಬನೆಯಾಗಬೇಕಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಪ್ರತಿನಿಧಿಸುತ್ತಿದ್ದ ಐವರು ಸದಸ್ಯರು ತಮ್ಮ ಸ್ಥಾನಗಳಿಗೆ ಈಗಾಗಲೇ ರಾಜೀನಾಮೆ ನೀಡಿದ್ದಾರೆ. ಪುಟ್ಟಣ್ಣ, ಆಯನೂರು ಮಂಜುನಾಥ್, ಲಕ್ಷ್ಮಣ ಸವದಿ, ಆರ್. ಶಂಕರ್ ಹಾಗೂ ಬಾಬುರಾವ್ ಚಿಂಚನಸೂರ ಅವರು ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ವಿವಿಧ ಪಕ್ಷಗಳಿಂದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಲಕ್ಷ್ಮಣ ಸವದಿ ಮಾತ್ರ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

75 ಸದಸ್ಯರನ್ನು ಒಳಗೊಂಡ ಮೇಲ್ಮನೆಯಲ್ಲಿ ಸದ್ಯ ಕಾಂಗ್ರೆಸ್ 26 ಸದಸ್ಯರಿದ್ದಾರೆ. ಬಿಜೆಪಿಯಲ್ಲಿ ಅಧಿಕೃತವಾಗಿ 34 ಸದಸ್ಯರಿದ್ದಾರೆ. ಇವರಲ್ಲಿ ಎಚ್. ವಿಶ್ವನಾಥ್ ಈಗಾಗಲೇ ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದಾರೆ. ಹೀಗಾಗಿ, ಬಿಜೆಪಿ ಸದಸ್ಯಬಲ 33ಕ್ಕೆ ಇಳಿದಿದೆ. ಜೆಡಿಎಸ್ 8 ಸದಸ್ಯರಿದ್ದಾರೆ. ಬಿಜೆಪಿ ಟಿಕೆಟ್ ಪಡೆದು ಆಯ್ಕೆಯಾದ ಬಸವರಾಜ ಹೊರಟ್ಟಿ ಅವರು ಸಭಾಪತಿಯಾಗಿದ್ದಾರೆ.

ವಿಧಾನ ಪರಿಷತ್‌ನ ನಾಮನಿರ್ದೇಶಿತ ಸದಸ್ಯರಾದ ಮೋಹನ್ ಕುಮಾರ್ ಕೊಂಡಜ್ಜಿ ಮತ್ತು ಪಿ.ಆರ್. ರಮೇಶ್ ಅವರ ಅವಧಿ ಬುಧವಾರ ಮುಕ್ತಾಯವಾಗಲಿದೆ. ಮತ್ತೊಬ್ಬ ನಾಮನಿರ್ದೇಶಿತ ಸದಸ್ಯರಾದ ಸಿ.ಎಂ. ಲಿಂಗಪ್ಪ ಅವರ ಅವಧಿಯು ಜೂನ್ 8ರಂದು ಮುಕ್ತಾಯವಾಗಲಿದೆ. ಹೊಸ ಕಾಂಗ್ರೆಸ್ ಸರ್ಕಾರ ಈ ಸ್ಥಾನಗಳಿಗೆ ನಾಮನಿರ್ದೇಶನ ಮಾಡಬಹುದಾಗಿದೆ.

ಖಾಲಿ ಉಳಿದಿರುವ ಐದು ಸ್ಥಾನಗಳಿಗೂ ಉಪಚುನಾವಣೆ ನಡೆಯಬೇಕಾಗಿದೆ. ಒಂದು ಶಿಕ್ಷಕರ ಕ್ಷೇತ್ರ, ಒಂದು ಪದವೀಧರ ಕ್ಷೇತ್ರ ಹಾಗೂ ಮೂರು ಸ್ಥಾನಗಳಿಗೆ ವಿಧಾನಸಭಾ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ ನಡೆಯಬೇಕಾಗಿದೆ. ವಿಧಾನಸಭೆಯಿಂದ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಸಂಖ್ಯಾ ಬಲಾಬಲದ ಮೇಲೆ ಕಾಂಗ್ರೆಸ್‌ಗೆ ಎರಡು ಸ್ಥಾನಗಳು ದೊರೆಯುವುದು ಖಚಿತ.

ಈ ಚುನಾವಣೆಗಳು ನಡೆಯುವ ವರೆಗೂ ಕಾಂಗ್ರೆಸ್‌ಗೆ ಬಹುಮತ ದೊರೆಯುವುದು ಕಷ್ಟಸಾಧ್ಯ. 2024ರ ಜೂನ್ 17ಕ್ಕೆ 11 ಮಂದಿ ಪರಿಷತ್‌ನಿಂದ ನಿವೃತ್ತರಾಗಲಿದ್ದಾರೆ. ಆಗ ಸ್ಪಷ್ಟ ಬಹುಮತ ದೊರೆಯುವ ಸಾಧ್ಯತೆ ಇದೆ.

ಪಕ್ಷಗಳ ಬಲಾಬಲ

ಬಿಜೆಪಿ	34
ಕಾಂಗ್ರೆಸ್	26
ಜೆಡಿಎಸ್	8
ಸ್ವತಂತ್ರ	1
ಖಾಲಿ	5
ಸಭಾಪತಿ	1
ಒಟ್ಟು ಸದಸ್ಯರು	75

‘ತೃಪ್ತಿ ತಂದಿದೆ; ಉತ್ತಮ ಅನುಭವ’

‘ವಿಧಾನ ಪರಿಷತ್ ಸದಸ್ಯನಾಗಿ ಕಾರ್ಯನಿರ್ವಹಿಸಿರುವುದು ತೃಪ್ತಿ ತಂದಿದೆ. ಸರ್ಕಾರ ಮಂಡಿಸಿದ ಕೆಲವು ಮಸೂದೆಗಳನ್ನು ಸಂಪಾದಿಸಿದ್ದೇನೆ. ಜನರ ಹಲವಾರು ಸಮಸ್ಯೆಗಳ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಿದ್ದೇನೆ. ವಿಧಾನಸಭೆಗಿಂತಲೂ ವಿಧಾನ ಪರಿಷತ್‌ನಲ್ಲಿ ಚರ್ಚೆಗಳು ಹೆಚ್ಚು ಅವಕಾಶ ಇದೆ’ ಎಂದು ಪಿ.ಆರ್. ರಮೇಶ್ ಪ್ರತಿಕ್ರಿಯಿಸಿದರು.

ಮರುನಾಮನಿರ್ದೇಶನ ಬೇಡ: ‘ಪರಿಷತ್ ಸದಸ್ಯನಾಗಿ ಅರ್ಜಿಗಳ ಸಮಿತಿಯಲ್ಲಿ ಕಾರ್ಯನಿರ್ವಹಿಸಿದ್ದು ಉತ್ತಮ ಅನುಭವವಾಯಿತು. ಪರಿಷತ್‌ಗೆ ಮತ್ತೊಮ್ಮೆ ನಾಮನಿರ್ದೇಶನ ಮಾಡದಂತೆ ಈಗಾಗಲೇ ಪಕ್ಷದ ಅಧ್ಯಕ್ಷರಿಗೆ ಮತ್ತು ಮುಖಂಡರಿಗೆ ತಿಳಿಸಿದ್ದೇನೆ. ಇನ್ನೊಬ್ಬರಿಗೆ ಅವಕಾಶ ನೀಡುವಂತೆ ಕೋರಿದ್ದೇನೆ’ ಎಂದು ಮೋಹನ್ ಕೊಂಡಜ್ಜಿ ತಿಳಿಸಿದರು.

ಬಿಜೆಪಿ ಒಳ್ಳೆಯ ವಿರೋಧ ಪಕ್ಷವಾಗಲಿದೆ: ಶೋಭಾ

ಪ್ರಜಾವಾಣಿ ವಾರ್ತೆ



ವಿಧಾನಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದವರಿಗೆ ಶುಭವಾಗಲಿ. ಕೊಟ್ಟಿರುವ ಭರವಸೆಗಳನ್ನು ಈಡೇರಿಸುವ ಶಕ್ತಿ ಸಿಗಲಿ

ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ

ಮೈಸೂರು: ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು– ಗೆಲುವು ಸಾಮಾನ್ಯ. ಸೋಲನ್ನು ಸ್ವೀಕರಿಸಿದ್ದೇವೆ. ಒಳ್ಳೆಯ ವಿರೋಧ ಪಕ್ಷವಾಗಿ ಬಿಜೆಪಿ ಕೆಲಸ ಮಾಡಲಿದೆ’ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಶೇ 95ರಷ್ಟು ಹಳ್ಳಿಗಳನ್ನು ತಲುಪಿವೆ. ಮುಖ್ಯಮಂತ್ರಿಗಳಾಗಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಉತ್ತಮ ಕೆಲಸ ಮಾಡಿದ್ದರು’ ಎಂದರು.

‘ದೇಶದಾದ್ಯಂತ 71,206 ಮಂದಿಗೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ನೀಡಲಾಗುತ್ತಿದೆ. ಬರುವ ದಿನಗಳಲ್ಲೂ ಅರ್ಹರನ್ನು ಗುರುತಿಸಿ ಉದ್ಯೋಗ ನೀಡಲಾಗುವುದು. ಆರ್ಥಿಕ ಬಿಕ್ಕಟ್ಟಿನಿಂದ ಉದ್ಯೋಗ ನೇಮಕ ಪ್ರಕ್ರಿಯೆ ನಡೆದಿರಲಿಲ್ಲ. ಹಿಂದಿನ ಸರ್ಕಾರಗಳೂ ಯುವ ಸಮುದಾಯದ ಬಗ್ಗೆ ಕಾಳಜಿ ಹೊಂದಿರಲಿಲ್ಲ. ಇದೀಗ ಕೇಂದ್ರವು ರಾಜ್ಯ ಸರ್ಕಾರಗಳಿಗೂ ಉದ್ಯೋಗ ಭರ್ತಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದೆ’ ಎಂದರು.

‘ಎಲ್ಲ ಇಲಾಖೆಗಳಲ್ಲೂ ಸಿಬ್ಬಂದಿ ಕೊರತೆ ಇರುವುದರಿಂದ ಕೆಲಸಗಳು ವೇಗವಾಗಿ ನಡೆಯುತ್ತಿರಲಿಲ್ಲ. ಉದ್ಯೋಗ ಮೇಳವನ್ನು ಆಯೋಜಿಸದೆ ಅರ್ಹರಿಗೆ ಉದ್ಯೋಗವೂ ಸಿಗುತ್ತಿರಲಿಲ್ಲ. ಇದೀಗ ಪಾರದರ್ಶಕವಾಗಿ ನೇಮಕಾತಿ ನಡೆಯುತ್ತಿದೆ. ನಿರುದ್ಯೋಗ ಸಮಸ್ಯೆ ಬಗೆಹರಿಯಲಿದೆ’ ಎಂದರು.

ಹಂಗಾಮಿ ಮುಖ್ಯಮಂತ್ರಿಯಿಂದ ಅಧಿಕಾರಿಗಳಿಗೆ ಚಹಾಕೂಟ

‘ಕಹಿ ಮರೆತುಬಿಡಿ, ಸಹಕಾರಕ್ಕೆ ಧನ್ಯವಾದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು (ರಾಜಕಾರಣಿಗಳು) ಐದು ವರ್ಷಕ್ಕೆ ಬರುವವರು. ನೀವು (ಅಧಿಕಾರಿಗಳು) ಸುದೀರ್ಘ ಅಧಿಕಾರದಲ್ಲಿ ಇರುವವರು. ಏನೇ ಒತ್ತಡಗಳಿದ್ದರೂ ರಾಜ್ಯದ ಹಿತ ಮತ್ತು ಅಭ್ಯುದಯಕ್ಕಾಗಿ ಕಾರ್ಯ ನಿರ್ವಹಿಸಿ’ ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿರಿಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಹಿರಿಯ ಅಧಿಕಾರಿಗಳಿಗೆ ಚಹಾ ಕೂಟ ಏರ್ಪಡಿಸಿ ಮಾತನಾಡಿದರು.

‘ಕೆಲಸ ಬೇಗ ಆಗಲಿ ಎಂದು ಕೆಲವು ಸಭೆಗಳಲ್ಲಿ ನಾನು ಗಟ್ಟಿ ಧ್ವನಿಯಲ್ಲಿ ಮಾತನಾಡಿರಬಹುದು. ಆದರೆ, ಅದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿ. ನನ್ನ ಆಡಳಿತ ಅವಧಿಯಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಸಹಕಾರ ನೀಡಿದ್ದೀರಿ’ ಎಂದರು.



ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳ ಜೊತೆ ಗೃಹ ಕಚೇರಿ ಕೃಷ್ಣಾದಲ್ಲಿ ಸೌಹಾರ್ದಯುತ ಮಾತುಕತೆ ನಡೆಸಿದರು

‘ಆಡಳಿತದಲ್ಲಿ ಕಾರ್ಯಾಂಗ, ಶಾಸಕಾಂಗ ಎರಡೂ ಪ್ರಮುಖ ಪಾತ್ರ ವಹಿಸುತ್ತವೆ. ನಾವು ಅದರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಾನು ಅಧಿಕಾರಕ್ಕೆ ಬಂದಾಗ ಕೋವಿಡ್, ಪ್ರವಾಹದಂತಹ ಸಂಕಷ್ಟ ಎದುರಾಯಿತು. ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸಿದ್ದೇವೆ. ನಮ್ಮ ಆಡಳಿತದಲ್ಲಿ ಯಾವುದೇ ಹಿಂಸಾತ್ಮಕ ಚಟುವಟಿಕೆ ನಡೆಯಲಿಲ್ಲ. ಚುನಾವಣೆ ಸಂದರ್ಭದಲ್ಲಿಯೂ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಇದಕ್ಕಾಗಿ ಗೃಹ ಇಲಾಖೆಯನ್ನು ಅಭಿನಂದಿಸುತ್ತೇನೆ’ ಎಂದರು.

‘ನಾವು ಅನೇಕ ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಮೀಸಲಾತಿ ಹೆಚ್ಚಳ, ಹೊಸ ನೀತಿಗಳನ್ನು ಜಾರಿಗೆ ತಂದಿದ್ದೇವೆ. ಉದ್ಯೋಗ ನೀತಿ, ಕೈಗಾರಿಕಾ ನೀತಿ ಎಲ್ಲ ಹೊಸ ಯೋಜನೆಗಳ ಜಾರಿಯಲ್ಲಿ ಅಧಿಕಾರಿಗಳ ಪಾತ್ರ ಮಹತ್ವದ್ದು’ ಎಂದು ಬೊಮ್ಮಾಯಿ ಹೇಳಿದರು.

‘ಕರ್ನಾಟಕ ಹಲವಾರು ವಿಚಾರದಲ್ಲಿ ಮುಂಚೂಣಿಯಲ್ಲಿದೆ. ಜಿಎಸ್‌ಟಿ ಸಂಗ್ರಹ, ಬಂಡವಾಳ ಹೂಡಿಕೆಯನ್ನು ಸೆಳೆಯುವಲ್ಲಿ ಮೊದಲ ಸ್ಥಾನದಲ್ಲಿದ್ದೇವೆ. ರಾಜ್ಯದ ಅಭಿವೃದ್ಧಿಗಾಗಿ ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ’ ಎಂದು ಅವರು ತಿಳಿಸಿದರು.

ಸೋತವರ ಮನೆಗೆ ಬೊಮ್ಮಾಯಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ನಾಯಕರಾದ ವಿ.ಸೋಮಣ್ಣ ಮತ್ತು ಡಾ.ಕೆ.ಸುಧಾಕರ್ ಅವರನ್ನು ಭೇಟಿ ಮಾಡಿ ಧೈರ್ಯ ತುಂಬಿದರು.

ಇಬ್ಬರ ಮನೆಗೂ ಮಂಗಳವಾರ ಭೇಟಿ ನೀಡಿ ಬೊಮ್ಮಾಯಿ ಚರ್ಚೆ ನಡೆಸಿದರು.

ಸೋಮಣ್ಣ ಅವರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ‘ಸೋಮಣ್ಣ ಅವರಿಗೆ ಯಾವಾಗ ಹಿನ್ನಡೆಯಾದರೂ ಮತ್ತೆ ಪುಟಿದೇಳುತ್ತಾರೆ. ಬರುವ ದಿನಗಳಲ್ಲಿ ಅವರಿಗೆ ಒಳ್ಳೆಯ ಅವಕಾಶ ಸಿಗಲಿದೆ. ನಾವು ಅವರ ಜತೆ ನಿಂತಿದ್ದೇವೆ’ ಎಂದರು.

‘ಸೋಮಣ್ಣ ನಮ್ಮ ಹಿರಿಯ ನಾಯಕರು. ಸುಮಾರು 40 ವರ್ಷ ಜನ ಸೇವೆ ಮಾಡಿದವರು. ವಸತಿ ಸಚಿವರಾಗಿ ಬೆಂಗಳೂರಿನ ಅಭಿವೃದ್ಧಿಗೆ ಅನೇಕ ಕೊಡುಗೆ ಕೊಟ್ಟಿದ್ದಾರೆ. ಗೋವಿಂದರಾಜ ನಗರವನ್ನು ಮಾದರಿ ಕ್ಷೇತ್ರ ಮಾಡಿದ್ದಾರೆ. ಸೋಲು ಗೆಲುವು ರಾಜಕಾರಣದಲ್ಲಿ ಇದ್ದಿದ್ದೆ. ಅದನ್ನು ಮೀರಿ ಮೇಲೆ ಬರಬೇಕು. ಸೋಮಣ್ಣ ಮತ್ತು ಪಕ್ಷ ಎರಡೂ ಕೂಡ ಆ ಕೆಲಸ ಮಾಡಲಿದೆ’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ತಿಳಿದ ಮೇಲಷ್ಟೇ ಮಾತನಾಡಬಹುದು. ನಾಳೆ ಅಥವಾ ನಾಡಿದ್ದು ಅಧ್ಯಕ್ಷರು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಮಾಡಬಹುದು’ ಎಂದರು.

ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನದ ಹಗ್ಗ ಜಗ್ಗಾಟದ ಕುರಿತ ಪ್ರಶ್ನೆಗೆ ಉತ್ತರಿಸಿ, ‘ಅದು ಅವರ ಪಕ್ಷದ ಆಂತರಿಕ ವಿಚಾರ. ಮುಖ್ಯಮಂತ್ರಿ ಯಾರು ಆಗುತ್ತಾರೆ ಎನ್ನುವುದನ್ನು ಕಾದು ನೋಡೋಣ’ ಎಂದು ಹೇಳಿದರು.

ಫೋನ್ ಮಾಡದ ಬಿಎಸ್‌ವೈ: ಸೋಮಣ್ಣ

‘ಚುನಾವಣೆ ಮುಗಿದ ಮೇಲೆ ಬಿ.ಎಸ್.ಯಡಿಯೂರಪ್ಪ ಅವರು ಫೋನ್ ಮಾಡಿ ಮಾತನಾಡಿಸಿಲ್ಲ’ ಎಂದು ವಿ.ಸೋಮಣ್ಣ ಬೇಸರ ವ್ಯಕ್ತಪಡಿಸಿದರು.

ಬೊಮ್ಮಾಯಿ ಭೇಟಿಯ ಬಳಿಕ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಚುನಾವಣೆ ಸಂದರ್ಭದಲ್ಲಿ ಪ್ರತಿ ದಿನ ಕರೆ ಮಾಡುತ್ತಿದ್ದರು. ಚುನಾವಣೆ ಮುಗಿದ ನಂತರ ಕರೆ ಮಾಡಿ ಮಾತನಾಡಿಸಿಲ್ಲ’ ಎಂದರು.

‘ಬೊಮ್ಮಾಯಿ ಸ್ನೇಹಿತರಾಗಿ ಬಂದಿದ್ದಾರೆ. ನಾನು ಯಾವುದೇ ಅವಕಾಶ ನಿರೀಕ್ಷೆ ಮಾಡಿದವನಲ್ಲ. ಪಕ್ಷ ಏನು ಹೇಳಿತ್ತೋ ಅದನ್ನು ಮಾಡಿದ್ದೇನೆ. ಯಾರೂ ತೆಗೆದುಕೊಳ್ಳದ ರಿಸ್ಕ್ ತೆಗೆದುಕೊಂಡೆ. ಒಂದೊಂದು ಸಲ ಒಳ ಏಟು ಬಿದ್ದಾಗ ಈ ರೀತಿ ಆಗುತ್ತದೆ. ಎಲ್ಲದಕ್ಕೂ ಕಾಲವೇ ಉತ್ತರಿಸುತ್ತದೆ’ ಎಂದರು.

‘ಪಕ್ಷ ಹೇಳಿದ ಕಾರಣಕ್ಕೆ ಚಿನ್ನದಂತಹ ಕ್ಷೇತ್ರವನ್ನು ಬಿಟ್ಟು ಹೋದೆ. ಸೋಲನ್ನು ಅರಗಿಸಿಕೊಳ್ಳುವ ಶಕ್ತಿ ಇದೆ. ಪಕ್ಷ ನನಗಿಂತ ದೊಡ್ಡದು. ಪಕ್ಷ ಹೇಳಿದ್ದನ್ನು ನನ್ನಂತಹವರು ಮಾಡದೇ ಇನ್ಯಾರು ಮಾಡಲು ಆಗುತ್ತದೆ’ ಎಂದೂ ಸೋಮಣ್ಣ ತಿಳಿಸಿದರು.

ಗ್ಯಾರಂಟಿಗಳಿಗೆ ಷರತ್ತುಗಳು ಇರಲಿವೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಪಕ್ಷ ಘೋಷಿಸಿರುವ ಐದು ಗ್ಯಾರಂಟಿಗಳಿಗೆ ಷರತ್ತುಗಳು ಇರಲಿವೆ’ ಎಂದು ಕಾಂಗ್ರೆಸ್ ಶಾಸಕ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಎಲ್ಲ ಐದೂ ಗ್ಯಾರಂಟಿಗಳನ್ನು ಈಡೇರಿಸುವ ಭರವಸೆ ಕೊಟ್ಟಿದ್ದೇವೆ. ಅದಕ್ಕೆ ನಾವು ಬದ್ಧರಾಗಿರುತ್ತೇವೆ’ ಎಂದರು.

‘ಆಯಾ ಇಲಾಖೆಗಳ ಹೊಣೆ ವಹಿಸಲಿರುವ ಸಚಿವರು ಈ ಗ್ಯಾರಂಟಿಗಳ ಜಾರಿಗೂ ಮೊದಲು ಪ್ರಾಯೋಗಿಕವಾಗಿ ಕೆಲಸ ಮಾಡಲಿದ್ದಾರೆ. ಗ್ಯಾರಂಟಿಗಳಿಗೆ ಮಾನದಂಡಗಳು ಇರಲಿವೆ’ ಎಂದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಧ್ಯಕ್ಷರಿಗೆ ಶಾಸಕಾಂಗ ಪಕ್ಷದ ನಾಯಕ ಸ್ಥಾನ ಕೊಡುವುದು ಹಿಂದಿನಿಂದಲೂ ಇರುವ ಪದ್ಧತಿ. ಈ ಬಾರಿ ನಾವು ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆಗೆ ಹೋಗಿದ್ದೆವು. ಈಗ ಅಧಿಕಾರ ಬಂದಿದೆ. ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯಲಿದೆ. ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರು ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ’ ಎಂದರು.

ಅವಮಾನಿಸಿದ್ದರಿಂದ ಬಿಜೆಪಿಗೆ ಅಧಿಕಾರ ನಷ್ಟ: ‘ಲಿಂಗಾಯತರನ್ನು ಅವಮಾನಿಸಿದ ಕಾರಣಕ್ಕೆ ಬಿಜೆಪಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಬಿ.ಎಲ್. ಸಂತೋಷ್‌ನಂಥವರಿಂದ ಬಿಜೆಪಿಗೆ ಈ ದುಃಸ್ಥಿತಿ ಬಂದಿದೆ’ ಎಂದು ಜಗದೀಶ ಶೆಟ್ಟರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನನ್ನನ್ನು ಬಿಜೆಪಿಯವರು ಗುರಿ ಮಾಡಿದರು. ನಾನು ಕಾಂಗ್ರೆಸ್ ಸೇರಿದ್ದರಿಂದಲೂ ಲಿಂಗಾಯತರ ಮತಗಳು ಕಾಂಗ್ರೆಸ್‌ಗೆ ಬಂದಿವೆ. ಜಿ. ಪರಮೇಶ್ವರ, ದಿನೇಶ್ ಗುಂಡೂರಾವ್ ನನ್ನನ್ನು ಭೇಟಿ ಮಾಡಿ ಈ ಬಗ್ಗೆ ಮಾತನಾಡಿದ್ದಾರೆ’ ಎಂದರು.

‘ಇನ್ನು ಮುಂದೆ ನಾನು ಯಾವುದೇ ಕಾರಣಕ್ಕೂ ಬಿಜೆಪಿಗೆ ಹೋಗುವುದಿಲ್ಲ. ಕಾಂಗ್ರೆಸ್‌ನಲ್ಲೇ ಮುಂದುವರಿಯುತ್ತೇನೆ’ ಎಂದೂ ಹೇಳಿದರು.

‘ತಪ್ಪು ನಿರ್ಧಾರಗಳೇ ಸೋಲಿಗೆ ಕಾರಣ’

ಪ್ರಜಾವಾಣಿ ವಾರ್ತೆ



ರೇಣುಕಾಚಾರ್ಯ

ಹೊನ್ನಾಳಿ (ದಾವಣಗೆರೆ ಜಿಲ್ಲೆ): ಪಕ್ಷದ ವರಿಷ್ಠರ ತಪ್ಪು ನಿರ್ಧಾರಗಳೇ ರಾಜ್ಯದಲ್ಲಿ ಬಿಜೆಪಿ ಸೋಲಿಗೆ ಪ್ರಮುಖ ಕಾರಣ ಎಂದು ಹೊನ್ನಾಳಿಯ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅಭಿಪ್ರಾಯಪಟ್ಟರು.

‘ರಾಜ್ಯದಲ್ಲಿ ಗುಜರಾತ್ ಮಾದರಿಯ ಪ್ರಯೋಗ ನಡೆಸಿದ್ದು ಸೋಲಿಗೆ ಪ್ರಮುಖ ಕಾರಣ. ಪಕ್ಷದ ಹಿರಿಯ ನಾಯಕರನ್ನು ನಿರ್ಲಕ್ಷಿಸಿದ್ದೂ ಮುಳುವಾಯಿತು. ಗೆಲ್ಲಿಸುವ ಶಕ್ತಿ ಇರುವ ಬಿ.ಎಸ್. ಯಡಿಯೂರಪ್ಪ ಅವರನ್ನು ತೆರೆಮರೆಗೆ ಸರಿಸಲಾಯಿತು. ಮೀಸಲಾತಿ ವಿಷಯಕ್ಕೆ ಕೈ ಹಾಕಿದ್ದು ದುರಂತ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರ ಪಡಿತರ ವ್ಯವಸ್ಥೆಯಡಿ ನೀಡುತ್ತಿದ್ದ ಅಕ್ಕಿಯನ್ನು 7 ಕೆ.ಜಿ.ಗೆ ಬದಲು 5 ಕೆ.ಜಿ.ಗೆ ಇಳಿಸಿದ್ದು ಬಡಜನರ ಆಕ್ರೋಶಕ್ಕೆ ಕಾರಣವಾಯಿತು. ‘ಬಡವರ ಹೊಟ್ಟೆ ಮೇಲೆ ಹೊಡೆಯಲಾಯಿತು’ ಎಂಬ ಅಭಿಪ್ರಾಯ ಜನರಿಂದ ಕೇಳಿ ಬಂದ ದಿನದಿಂದಲೇ ಬಿಜೆಪಿಗೆ ಸೋಲು ನಿಶ್ಚಿತವಾಯಿತು’ ಎಂದರು.

‘ಜಾತಿ ಸಮೀಕರಣ ಬಿಜೆಪಿಯಲ್ಲಿ ನಡೆಯಲಿಲ್ಲ. ದಲಿತ ಸಮುದಾಯಕ್ಕೆ ಖರ್ಗೆ, ಕುರುಬ ಸಮಾಜಕ್ಕೆ ಸಿದ್ದರಾಮಯ್ಯ, ವಾಲ್ಮೀಕಿ ಸಮಾಜಕ್ಕೆ ಸತೀಶ್ ಜಾರಕಿಹೊಳಿ ಅವರಂತೆ ಪ್ರತಿ ಸಮುದಾಯದ ನಾಯಕರನ್ನು ಕಾಂಗ್ರೆಸ್‌ನಲ್ಲಿ ಬಿಂಬಿಸಲಾಗಿದೆ. ಈ ರೀತಿ ಬಿಜೆಪಿಯಲ್ಲಿ ನಡೆಯಲಿಲ್ಲ’ ಎಂದು ಅವರು ವಿಶ್ಲೇಷಿಸಿದರು.

‘ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗಳು ಜನರ ಮೇಲೆ ಪ್ರಭಾವ ಬೀರಿದವು. ನಮ್ಮ ಸೋಲಿಗೆ ಕಾರಣವಾದವು. ನಮ್ಮಲ್ಲಿ ಅಂಥ ಯಾವ ಯೋಜನೆಗಳೂ ಇರಲಿಲ್ಲ. ನಾನು ಕ್ಷೇತ್ರದಲ್ಲಿ ಕೆಲಸ ಮಾಡಿದ ಮೇಲೂ ಸೋಲುಂಟಾಗಿರುವುದು ತೀವ್ರ ಬೇಸರವನ್ನು ಉಂಟು ಮಾಡಿದೆ. ಮುಂದೆ ಯಾವುದೇ ಕಾರಣಕ್ಕೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸಿದ್ದರಾಮಯ್ಯ ಸಿ.ಎಂ ಆಗಲಿ’

ಬೆಂಗಳೂರು: ‘ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು’ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘವು ಕಾಂಗ್ರೆಸ್ ಹೈಕಮಾಂಡನ್ನು ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಡಿ. ವೆಂಕಟೇಶ ಮೂರ್ತಿ, ‘ಕುರುಬ ಸಮುದಾಯದ ಶೇ 90ರಷ್ಟು ಜನರು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ ಬರಲು ಕುರುಬರು ಕಾರಣ. ಅಲ್ಲದೆ, ಸಿದ್ದರಾಮಯ್ಯ ಅವರಿಗೆ ಇದು ಕಡೆಯ ಚುನಾವಣೆ ಆಗಿದೆ. ಅವರಿಗೆ 13 ಬಾರಿ ಬಜೆಟ್ ಮಂಡಿಸಿದ ಅನುಭವ ಇದೆ’ ಎಂದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಾರೆ. ಹೀಗಾಗಿ, ಕಾಂಗ್ರೆಸ್‌ಗೆ ಮತ ನೀಡುವಂತೆ ಸಮುದಾಯದವರ ಬಳಿ ಮತ ಯಾಚನೆ ಮಾಡಿದ್ದೆವು. ಅವರನ್ನು ಮುಖ್ಯಮಂತ್ರಿ ಮಾಡಲೇಬೇಕು’ ಎಂದು ಸಂಘದ ಕಾರ್ಯಾಧ್ಯಕ್ಷ ಬಿ. ಸುಬ್ರಮಣ್ಯ ಆಗ್ರಹಿಸಿದರು. ‘ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಎಲ್ಲ ಭರವಸೆಗಳನ್ನು ಸಿದ್ದರಾಮಯ್ಯ ಈಡೇರಿಸಿದ್ದರು. ಆರ್ಥಿಕ ತಜ್ಞರಾಗಿರುವ ಅವರು ಕಾಂಗ್ರೆಸ್ ಘೋಷಿಸಿದ ಗ್ಯಾರಂಟಿಗಳನ್ನು ಈಡೇರಿಸುತ್ತಾರೆ’ ಎಂದರು.

ಸಿಇಟಿ: ಅರ್ಜಿ ತಿದ್ದುಪಡಿಗೆ ಕೊನೆಯ ಅವಕಾಶ

ಬೆಂಗಳೂರು: ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಗೆ ಆನ್‌ಲೈನ್ ಮೂಲಕ ಸಲ್ಲಿಸಿದ್ದ ಅರ್ಜಿಗಳಲ್ಲಿನ ಮಾಹಿತಿ ತಿದ್ದುಪಡಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕೊನೆಯ ಅವಕಾಶ ನೀಡಿದೆ.

ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮೇ 21ರ ಸಂಜೆ 6ರಿಂದ 24ರ ರಾತ್ರಿ 12ರ ಒಳಗೆ ಮಾಹಿತಿ ತಿದ್ದುಪಡಿ ಮಾಡಬಹುದು. ಸಿಇಟಿ ಫಲಿತಾಂಶದ ನಂತರ ತಿದ್ದುಪಡಿಗೆ, ಮೀಸಲಾತಿ ಬೇಡಿಕೆಗೆ ಅವಕಾಶ ಇರುವುದಿಲ್ಲ. ಹಾಗಾಗಿ ನೀಡಿರುವ ಅವಕಾಶ ಸದುಪಯೋಗ ಮಾಡಿಕೊಳ್ಳಬೇಕು ಎಂದು ಕೆಇಎ ಕಾಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದ್ದಾರೆ.

ವಿವರಕ್ಕೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನೋಡಬಹುದು.

ಮರುಮತ ಎಣಿಕೆ: ಹೈಕೋರ್ಟ್‌ಗೆ ಮೊರೆ

ಮಾಲೂರು (ಕೋಲಾರ): ಮಾಲೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವೈ.ನಂಜೇಗೌಡ ವಿರುದ್ಧ ಕೇವಲ 248 ಮತಗಳ ಅಂತರದಿಂದ ಸೋಲು ಕಂಡಿರುವ ಬಿಜೆಪಿ ಅಭ್ಯರ್ಥಿ ಮಂಜುನಾಥಗೌಡ ಅವರು ಮರು ಮತ ಎಣಿಕೆ ಕೋರಿ ಮಂಗಳವಾರ ಹೈಕೋರ್ಟ್ ಮೊರೆ ಹೋಗಿದ್ದಾರೆ.

‘ಮತ ಎಣಿಕೆ ಮುಗಿದ ನಂತರ ನನಗೆ ಕರೆ ಮಾಡಿದ್ದ ಚುನಾವಣಾ ಅಧಿಕಾರಿಗಳು, ನೀವು ಗೆಲುವು ಸಾಧಿಸಿದ್ದೀರಿ ಎಂದು ತಿಳಿಸಿದ್ದರು.

ಬಳಿಕ ಕೆ.ವೈ.ನಂಜೇಗೌಡ 248 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ ಎಂದು ಘೋಷಿಸಿದರು. ಇದು ಸಂಶಯಕ್ಕೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ಮರು ಮತ ಎಣಿಕೆ ಕೋರಿ ಹೈಕೋರ್ಟ್ ಮೊರೆ ಹೋಗಿದ್ದೇನೆ’ ಎಂದು ಬಿಜೆಪಿ ಅಭ್ಯರ್ಥಿ ಮಂಜುನಾಥಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜಕೀಯ ನಿವೃತ್ತಿ: ರಮಾನಾಥ್ ರೈ

ಮಂಗಳೂರು: ಬಂಟ್ವಾಳ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡಿರುವ ಪಕ್ಷದ ನಾಯಕ ರಮಾನಾಥ ರೈ ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುವುದಾಗಿ ಪ್ರಕಟಿಸಿದರು.

‘ನನಗೀಗ 71 ವರ್ಷ. ಇಷ್ಟು ವರ್ಷ ಪಕ್ಷವು ನನಗೆ ಎಲ್ಲ ರೀತಿಯ ಅವಕಾಶಗಳನ್ನು ನೀಡಿದೆ. ನಾನು ಅಭ್ಯರ್ಥಿಯಾಗುವ ಬಗ್ಗೆ ಪಕ್ಷದಲ್ಲೇ ಭಿನ್ನಸ್ವರಗಳಿದ್ದವು. ಇನ್ನು ಮುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಆದರೆ, ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೇನೆ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಬಂಟ್ವಾಳ ಕ್ಷೇತ್ರದಿಂದ ಒಟ್ಟು ಒಂಬತ್ತು ಸಲ ಸ್ಪರ್ಧಿಸಿರುವ ರಮಾನಾಥ ರೈ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು.

ಚುನಾವಣಾ ರಾಜಕೀಯ ನಿವೃತ್ತಿ ಬೇಡ ಎಂದು ಸಂಸದ ಪ್ರಜ್ವಲ್ ರೇವಣ್ಣ ಸಲಹೆ

‘ಪ್ರಾಯಶ್ಚಿತ್ತ ಪಾದಯಾತ್ರೆ’ಗೆ ದತ್ತ ನಿರ್ಧಾರ

ಪ್ರಜಾವಾಣಿ ವಾರ್ತೆ



ವೈ.ಎಸ್.ವಿ.ದತ್ತ

ಕಡೂರು (ಚಿಕ್ಕಮಗಳೂರು): ವೈಎಸ್‌ವಿ ದತ್ತ ಅವರು ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸುವ ನಿರ್ಧಾರಕ್ಕೆ ಸಂಸದ ಪ್ರಜ್ವಲ್ ರೇವಣ್ಣ ವಿರೋಧ ವ್ಯಕ್ತಪಡಿಸಿದರು. ಈ ಮಧ್ಯೆ, ಜೂನ್ 24ರಿಂದ ತಾವು ಕ್ಷೇತ್ರದಲ್ಲಿ ‘ಪ್ರಾಯಶ್ಚಿತ್ತ ಪಾದಯಾತ್ರೆ’ ಮಾಡುವುದಾಗಿ ದತ್ತ ಪ್ರಕಟಿಸಿದರು.

ಮಂಗಳವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ದತ್ತ, ‘ಇದು ನನ್ನ ಕಡೆಯ ಚುನಾವಣೆ ಎಂದು ಪ್ರಚಾರ ಸಮಯದಲ್ಲಿ ಹೇಳಿದ್ದೆ. ಆದ್ದರಿಂದ, ಚುನಾವಣಾ ರಾಜಕೀಯದಿಂದ ಹಿಂದೆ ಸರಿದು ಇನ್ನು ಪಕ್ಷ ಸಂಘಟಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತೇನೆ’ ಎಂದರು.

ಸಭೆಯಲ್ಲಿದ್ದ ಹಾಸನ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಮಾತನಾಡಿ, ‘ನಿವೃತ್ತಿಯ ಮಾತನ್ನು ಆಡಬೇಡಿ, ನಿವೃತ್ತಿ ಪಡೆಯಿರಿ ಎಂದು ನಿಮಗೆ ಹೇಳಿದವರು ಯಾರು? ದೇವೇಗೌಡರು ಅಥವಾ ಇನ್ಯಾವುದಾದರೂ ನಾಯಕರು ಹೇಳಿದರೇ? ನಿವೃತ್ತಿಯಾಗಬೇಕೇ ಬೇಡವೇ ಎಂಬುದನ್ನು ಪಕ್ಷ ನಿರ್ಧರಿಸುತ್ತದೆ. ಮುಂದಿನ ಚುನಾವಣೆಯಲ್ಲಿಯೂ ನೀವೇ ನಮ್ಮ ಅಭ್ಯರ್ಥಿ. ನಾನು ಇರುವ ತನಕ ನಿವೃತ್ತಿಯ ಮಾತನ್ನಾಡಬಾರದು’ ಎಂದರು.

‘ಕಡೂರಿನಲ್ಲಿ ಕೇವಲ ದತ್ತ ಅವರ ಸೋಲಲ್ಲ. ನನ್ನದು, ನಮ್ಮೆಲ್ಲರ ಸೋಲು ಇದು. ಎಲ್ಲರೂ ಸೇರಿ ದತ್ತ ಅವರಿಗೆ ಸಹಕಾರ ನೀಡೋಣ’ ಎಂದು ಅವರು ಕಾರ್ಯಕರ್ತರಿಗೆ ಮನವಿ ಮಾಡಿದರು.

ಪ್ರಾಯಶ್ಚಿತ್ತ ಯಾತ್ರೆ: ‘ನನ್ನ ತಪ್ಪುಗಳಿಗೆ ಜನರು ಸರಿಯಾದ ಶಿಕ್ಷೆ ನೀಡಿದ್ದಾರೆ. ತಪ್ಪು ಮಾಡಿದ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಿರ್ಧರಿಸಿದ್ದೇನೆ. ಜೂನ್ 24 ನನ್ನ ಜನ್ಮದಿನ. ಅಂದಿನಿಂದ ಕ್ಷೇತ್ರದ ಪ್ರತಿ ಹಳ್ಳಿಗೆ ಪಾದಯಾತ್ರೆ ನಡೆಸಿ ಜನರ ಕ್ಷಮೆ ಕೋರುತ್ತೇನೆ. ಗ್ರಾಮವಾಸ್ತವ್ಯವನ್ನೂ ಮಾಡುವೆ. ಚುನಾವಣಾ ದೃಷ್ಟಿಯಿಂದ ಇದನ್ನು ಮಾಡುತ್ತಿಲ್ಲ, ಇದು ನನ್ನ ಆತ್ಮಾವಲೋಕನ’ ಎಂದು ದತ್ತ ಹೇಳಿದರು.

‘ನೀವು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿಲ್ಲ. ಆ ಯೋಚನೆ ಕೈ ಬಿಡಬೇಕು’ ಎಂದು ಕಾರ್ಯಕರ್ತರು ಒತ್ತಾಯಿಸಿದರು. ಜೊತೆಗೆ ‘ಇದಕ್ಕೆ ನೀವೂ ಒಪ್ಪಬಾರದು’ ಎಂದು ಪ್ರಜ್ವಲ್ ಅವರನ್ನೂ ಆಗ್ರಹಿಸಿದರು. ಆದರೆ ದತ್ತ, ‘ನನ್ನ ಸಂಕಲ್ಪ ಅಚಲ’ ಎಂದು ಹೇಳಿ ಹೊರಟರು.

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ಸಿಇಟಿ ಪುಸ್ತಕ ಖರೀದಿ



ಪ್ರಥಮ ಪಿಯುಸಿ ಮುಗಿದ ತಕ್ಷಣ ಸಿಇಟಿ ತರಬೇತಿ ಪಡೆಯುತ್ತಿದ್ದೇನೆ. ಈ ಸಮಯದಲ್ಲಿ ಅಗತ್ಯ ಪುಸ್ತಕಗಳ ಖರೀದಿಗೆ ‘ಪ್ರಜಾವಾಣಿ’ ವಿದ್ಯಾರ್ಥಿ ವೇತನ ಸಹಾಯವಾಯಿತು. ತರಬೇತಿ ಸಮಯದಲ್ಲಿ ಹಲವು ಪುಸ್ತಕಗಳನ್ನು ಖರೀದಿ ಮಾಡಬೇಕಾಗುತ್ತದೆ. ಕಷ್ಟದ ಸಂದರ್ಭದಲ್ಲಿ ಬ್ಯಾಂಕ್‌ಗೆ ಹಣ ಪಾವತಿಸಿದ್ದು, ತುಂಬಾ ನೆರವಾಯಿತು.

– **ವರ್ಷಿತಾ,** ತುರುವೇಕೆರೆ

ಟ್ಯೂಷನ್ ಶುಲ್ಕ ಪಾವತಿ



ಕಾಲೇಜು ಮುಗಿದ ನಂತರ ಟ್ಯೂಷನ್‌ಗೆ ಹೋಗುತ್ತಿದ್ದು, ಅದರ ಶುಲ್ಕ ಪಾವತಿಗೆ ‘ಪ್ರಜಾವಾಣಿ’ ವಿದ್ಯಾರ್ಥಿ ವೇತನ ಬಳಕೆ ಮಾಡಿಕೊಂಡಿದ್ದೇನೆ. ಜೆಇಇ ತರಬೇತಿ ಪಡೆಯುತ್ತಿದ್ದು, ಅಗತ್ಯ ಪುಸ್ತಕ ಖರೀದಿಗೂ ನೆರವಾಯಿತು. ಕಷ್ಟದ ಸಮಯದಲ್ಲಿ ಬಂದಿದ್ದರಿಂದ ವಿದ್ಯಾರ್ಥಿ ವೇತನ ತುಂಬಾ ಸಹಕಾರಿಯಾಯಿತು. ಪತ್ರಿಕೆಯಿಂದ ಮತ್ತಷ್ಟು ವಿದ್ಯಾರ್ಥಿಗಳಿಗೆ ಈ ನೆರವು ಸಿಗಲಿ. ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಸಹಾಯ ದೊರೆಯಲಿ.

– **ಎಸ್.ಕವನಶ್ರೀ,** ತುಮಕೂರು

ಬಿಜೆಪಿ ಮುಖಂಡರಿಂದ ಕಾಂಗ್ರೆಸ್ ಅಧಿಕಾರಕ್ಕೆ: ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: ‘ಬಿಜೆಪಿಯ ರಾಷ್ಟ್ರೀಯ ಮುಖಂಡರು ಹಳೇ ಮೈಸೂರಿಗೆ ಬಂದು ಪ್ರಾದೇಶಿಕ ಪಕ್ಷ ಮುಗಿಸಲು ಕಾಂಗ್ರೆಸ್‌ಗೆ ಸಹಾಯ ಮಾಡಿ ಅಧಿಕಾರ ತಂದು ಕೊಟ್ಟಿದ್ದಾರೆ. ಅವರಿಗೆ ಕಾಂಗ್ರೆಸ್ ಮುಖಂಡರು ಧನ್ಯವಾದ ಹೇಳಬೇಕು’ ಎಂದು ಶಾಸಕ ಎಚ್.ಡಿ. ರೇವಣ್ಣ ಪ್ರತಿಪಾದಿಸಿದರು

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹಳೆಯ ಮೈಸೂರು ಭಾಗದಲ್ಲಿ ಬಿಜೆಪಿಯು ನಮ್ಮ ಮತಗಳ ಪೈಕಿ ಶೇ 5ರಷ್ಟನ್ನು ಪಡೆದಿದೆ. ಹಾಗಾಗಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವಂತಾಯಿತು’ ಎಂದರು.

‘ಯಾರೇ ಮುಖ್ಯಮಂತ್ರಿಯಾದರೂ ಸ್ವಾಗತ. ರಾಜ್ಯದ ಅಭಿವೃದ್ಧಿ ಮಾಡಬೇಕಷ್ಟೇ. ಬಿಜೆಪಿಯವರು ಅಧಿಕಾರದಿಂದ ಇಳಿಯುವಾಗ ವಿದ್ಯುತ್ ದರ ಹೆಚ್ಚಿಸಿ, ಶಾಕ್ ಕೊಟ್ಟಿದ್ದಾರೆ. ಹೊಸ ಸರ್ಕಾರ ದರ ಇಳಿಸಿ, ಗ್ಯಾರಂಟಿಗಳನ್ನು ಈಡೇರಿಸಲಿ. ನನಗೆ ಸಿದ್ದರಾಮಯ್ಯ ಅವರ ಬಗ್ಗೆ ವೈಯಕ್ತಿಕವಾಗಿ ಗೌರವವಿದೆ, ಆದರೆ ರಾಜಕೀಯವೇ ಬೇರೆ’ ಎಂದರು.

‘ಲೋಕಸಭೆ ಚುನಾವಣೆಗೆ ತಯಾರಿ ನಡೆಸುತ್ತೇವೆ. ಎಚ್.ಡಿ. ದೇವೇಗೌಡ, ಪ್ರಜ್ವಲ್ ರೇವಣ್ಣ ಸ್ಪರ್ಧಿಸಲಿದ್ದು, ಯಾವ ಕ್ಷೇತ್ರವೆಂಬುದನ್ನು ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು’ ಎಂದರು.

‘ಹಿಜಾಬ್– ಸಾಮರಸ್ಯ ಕಾಯುವಂಥ ತೀರ್ಮಾನ’

ಪ್ರಜಾವಾಣಿ ವಾರ್ತೆ



ಖಾದರ್

ಮಂಗಳೂರು: ‘ಶಾಲಾ- ಕಾಲೇಜುಗಳಲ್ಲಿ ಹಿಜಾಬ್ ನಿಷೇಧದ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿದೆ. ನ್ಯಾಯಾಲಯದ ತೀರ್ಪು ಆಧರಿಸಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಾಮರಸ್ಯ ಕಾಪಾಡುವಂತಹ ನಿರ್ಧಾರವನ್ನು ಹೊಸ ಸರ್ಕಾರ ತೆಗೆದುಕೊಳ್ಳಲಿದೆ’ ಎಂದು ಶಾಸಕ ಯು.ಟಿ.ಖಾದರ್ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮುಸ್ಲಿಮರ ಶೇ 4ರಷ್ಟು ಮೀಸಲಾತಿ ರದ್ದತಿ ಕುರಿತು ಪ್ರತಿಕ್ರಿಯಿಸಿದ ಅವರು, ‘ಈ ವಿಚಾರದಲ್ಲಿ ಹಿಂದಿನ ಸರ್ಕಾರ ದುರುದ್ದೇಶಪೂರಿತ ಹಾಗೂ ರಾಜಕೀಯ ಪ್ರೇರಿತ ನಿರ್ಧಾರ ತೆಗೆದುಕೊಂಡಿದೆ. ಅವರಂತೆ ಒಂದು ಸಮುದಾಯದವರಿಗೆ ಕಣ್ಣೀರು ತರಿಸುವಂತಹ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಳ್ಳುವುದಿಲ್ಲ’ ಎಂದರು.

‘ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿಯನ್ನೇ ಪಡೆಯದೇ ಒಳಮೀಸಲಾತಿ ಕುರಿತು ಸರ್ಕಾರ ಆದೇಶ ಹೊರಡಿಸಿತ್ತು. ಅದನ್ನು ಜಾರಿಗೊಳಿಸುವುದಿಲ್ಲ ಎಂದು ನಂತರ ನ್ಯಾಯಾಲಯದಲ್ಲಿ ಪ್ರಮಾಣಪತ್ರ ಸಲ್ಲಿಸಿತ್ತು. ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತಾರದೆಯೇ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಿಸುವ ಕುರಿತು ಆದೇಶ ಪ್ರಕಟಿಸಿತ್ತು. ಅದು ಒಂದು ಸರ್ಕಾರವೇ’ ಎಂದು ಅವರು ಪ್ರಶ್ನಿಸಿದರು.

ಹೋರಾಟ ನಿಲ್ಲುವುದಿಲ್ಲ: ಡಿ. ಕೆಂಪಣ್ಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಅತಿಯಾದ ಭ್ರಷ್ಟಾಚಾರದಿಂದ ರಾಜ್ಯದಲ್ಲಿ ಬಿಜೆಪಿ ಅಧಿಕಾರದಿಂದ ಕೆಳಕ್ಕೆ ಇಳಿದಿದೆ. ಗುತ್ತಿಗೆದಾರರ ಸಂಘವು ಹೊಸ ಸರ್ಕಾರದ ಅವಧಿಯಲ್ಲೂ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಮುಂದುವರಿಸಲಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ತಿಳಿಸಿದ್ದಾರೆ.

ಚುನಾವಣಾ ಫಲಿತಾಂಶದ ಕುರಿತು ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ನಾವು ಬಿಜೆಪಿ ಸರ್ಕಾರದ ವಿರುದ್ಧ ಸುಖಾಸುಮ್ಮನೆ ಶೇಕಡ 40ರಷ್ಟು ಕಮಿಷನ್ ಆರೋಪ ಮಾಡಿರಲಿಲ್ಲ. ಗುತ್ತಿಗೆದಾರರ ಜತೆ ಚರ್ಚಿಸಿ, ಅವರ ಸಂಕಷ್ಟ ಅರಿತ ಬಳಿಕವೇ ದೂರು ನೀಡಿದ್ದೆವು. ಪ್ರಧಾನಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆದಿದ್ದೆವು. ಅವರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿ, ಭ್ರಷ್ಟಾಚಾರ ನಿಯಂತ್ರಿಸಿದ್ದರೆ ಈ ಪರಿಯ ಆಡಳಿತ ವಿರೋಧಿ ಅಲೆಯನ್ನು ಅನುಭವಿಸುವ ಪರಿಸ್ಥಿತಿ ಎದುರಾಗುತ್ತಿರಲಿಲ್ಲ’ ಎಂದು ಹೇಳಿದ್ದಾರೆ.

‘ರಾಜ್ಯದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರಲು ಭ್ರಷ್ಟಾಚಾರವೇ ಕಾರಣ. ನಮ್ಮ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲ ವ್ಯಕ್ತವಾದರೂ ಹಿಂದಿನ ಸರ್ಕಾರದ ಸಚಿವರು ಅಡ್ಡಿಪಡಿಸಿದ್ದರು. ಸಚಿವರೊಬ್ಬರು ನಮ್ಮನ್ನು ಜೈಲಿಗೆ ಕಳಿಸುವುದಕ್ಕೂ ಪ್ರಯತ್ನಿಸಿದ್ದರು. ಆದರೂ ನಾವು ಎದೆಗುಂದದೆ ಹೋರಾಟ ಮಾಡಿದ್ದೆವು’ ಎಂದಿದ್ದಾರೆ.

‘ಒಂದು ಪಕ್ಷ ಅಧಿಕಾರ ಕಳೆದುಕೊಂಡ ಮಾತ್ರಕ್ಕೆ ಭ್ರಷ್ಟಾಚಾರ ನಿಂತಿದೆ ಎಂದು ನಾವು ಭಾವಿಸುವುದಿಲ್ಲ. ಭ್ರಷ್ಟಾಚಾರ ಮುಂದುವರಿದರೆ ಹೊಸ ಸರ್ಕಾರದ ವಿರುದ್ಧವೂ ನಮ್ಮ ಹೋರಾಟ ಮುಂದುವರಿಯುತ್ತದೆ. ವ್ಯವಸ್ಥೆ ಸರಿಹೋಗುವವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ’ ಎಂದು ಎಚ್ಚರಿಸಿದ್ದಾರೆ.

ಮಳೆ ಕೊರತೆಯೇ ಕಾರಣ • ತಿಂಗಳ ಕೊನೆಗೆ ಪಾತಾಳಕ್ಕೆ ಕುಸಿಯುವ ಭೀತಿ

ಜಲಾಶಯಗಳಲ್ಲಿ ನೀರು ಸಂಗ್ರಹ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಪ್ರಮಾಣ ಕಡಿಮೆಯಾಗಿದ್ದು, ತಿಂಗಳ ಅಂತ್ಯದ ವೇಳೆಗೆ ಇನ್ನಷ್ಟು ಕುಸಿಯುವ ಭೀತಿ ಎದುರಾಗಿದೆ.

ರಾಜ್ಯದ ಪ್ರಮುಖ 13 ಜಲಾಶಯಗಳ ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 865.20 ಟಿಎಂಸಿ ಅಡಿಗಳಿದ್ದು, ಈಗ 202.95 ಟಿಎಂಸಿ ಅಡಿಗಳಷ್ಟಿದೆ. ಕಳೆದ ವರ್ಷ ಇದೇ ವೇಳೆಗೆ 246.24 ಟಿಎಂಸಿ ಅಡಿಗಳಷ್ಟು ಸಂಗ್ರಹ ಇತ್ತು. ಒಟ್ಟು ಸಾಮರ್ಥ್ಯದ ಶೇ 23 ರಷ್ಟು ಮಾತ್ರ ನೀರು ಲಭ್ಯವಿದೆ.

ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಪ್ರಮುಖ ಜಲಾಶಯಗಳಾದ ಹಾರಂಗಿ, ಹೇಮಾವತಿ, ಕೆಆರ್‌ಎಸ್ ಮತ್ತು ಕಬಿನಿಯ ಒಟ್ಟು ಸಾಮರ್ಥ್ಯ 114.57 ಟಿಎಂಸಿ ಅಡಿ ಇದ್ದು, ಈಗ ಶೇ 38.66 ಟಿಎಂಸಿ ಅಡಿ ಇದ್ದು, ಕಳೆದ ವರ್ಷ ಇದೇ ವೇಳೆಯಲ್ಲಿ 56.44 ಟಿಎಂಸಿ ಅಡಿ ಇತ್ತು.

ಕೃಷ್ಣಾ ಜಲಾನಯನ ಪ್ರದೇಶದ ಭದ್ರಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣಪುರ ಜಲಾಶಯಗಳ ಒಟ್ಟು ಸಾಮರ್ಥ್ಯ 422.45 ಟಿಎಂಸಿ ಅಡಿ ಇದ್ದು, ಈಗ 88.57 ಟಿಎಂಸಿ ಅಡಿ ನೀರು ಇದೆ. ಕಳೆದ ವರ್ಷ ಇದೇ ವೇಳೆ 123.25 ಟಿಎಂಸಿ ಅಡಿ ನೀರು ಇತ್ತು ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಂಗಳವಾರ ಬಿಡುಗಡೆ ಮಾಡಿದ ವರದಿ ತಿಳಿಸಿದೆ.

ನೀರಿನ ಸಂಗ್ರಹ ಕುಸಿತಕ್ಕೆ ಕಾರಣ?: 2021ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲೂ ಭಾರಿ ಮಳೆ ಆಗಿತ್ತು. ಆದರೆ, 2022 ರ ಜೂನ್ – ಜುಲೈ ಬಳಿಕ ಅಂದರೆ, ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮಳೆ ಆಗಲಿಲ್ಲ. ಇದರಿಂದ ಜಲಾಶಯಗಳಿಗೆ ನೀರಿನ ಹರಿವಿನ ಪ್ರಮಾಣ ಕುಸಿತವಾಯಿತು. ಇದರಿಂದಾಗಿ, ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹವೂ ಕಡಿಮೆ ಆಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಜಲಾಶಯದ ನೀರಿನ ಮಟ್ಟ

ಅಣೆಕಟ್ಟೆಗಳು	ಈಗಿನ ನೀರಿನ ಸಂಗ್ರಹ	ಕಳೆದ ವರ್ಷದ ಸಂಗ್ರಹ (ಟಿಎಂಸಿ ಅಡಿ)
ಲಿಂಗನಮಕ್ಕಿ	23.79	32.02
ಸೂಪ	48.70	31.21
ವಾರಾಹಿ	3.23	3.06
ಹಾರಂಗಿ	2.66	5.47
ಹೇಮಾವತಿ	17.48	20.65
ಕೆಆರ್‌ಎಸ್	13.69	22.82
ಕಬಿನಿ	4.83	7.50
ಭದ್ರಾ	27.56	33.08
ತುಂಗಭದ್ರಾ	3.58	12.87
ಘಟಪ್ರಭಾ	7.91	8.42
ಮಲಪ್ರಭಾ	9.46	11.46
ಆಲಮಟ್ಟಿ	24.00	35.12
ನಾರಾಯಣಪುರ	16.04	22.34

(ಮೇ 16 ರ ಮಾಹಿತಿ)

ಈ ವರ್ಷದಿಂದ ಬರ?

ಈ ವರ್ಷ ಎಲ್‌ನಿನೋ ವಿದ್ಯಮಾನ ಆರಂಭವಾಗಿರುವುದರಿಂದ ರಾಜ್ಯದಲ್ಲಿ ಮಳೆ ಕಡಿಮೆಯಾಗಿ ಬರ ಕಾಲಿಡುವ ಸಾಧ್ಯತೆಯೂ ಇದೆ.

ಎಲ್‌ನಿನೋ ವಿದ್ಯಮಾನ ಈಗಾಗಲೇ ಆರಂಭವಾಗಿದ್ದು, ಇದರ ಪ್ರಭಾವ ಜೂನ್– ಆಗಸ್ಟ್ ವೇಳೆಗೆ ಶೇ 70 ರಷ್ಟಕ್ಕೂ, ಜುಲೈ– ಸೆಪ್ಟೆಂಬರ್ ವೇಳೆಗೆ ಶೇ 80 ಕ್ಕೆ ತಲುಪಲಿದೆ ಎಂದು ವಿಶ್ವ ಹವಾಮಾನ ಸಂಸ್ಥೆ ಹೇಳಿದೆ.

ಪಶ್ಚಿಮ ಉಷ್ಣವಲಯದ ಪೆಸಿಫಿಕ್ ಮಹಾಸಾಗರದಲ್ಲಿ ಬಿಸಿ ನೀರು ಭೂಮಧ್ಯೆ ರೇಖೆಯ ಉದ್ದಕ್ಕೂ ದಕ್ಷಿಣ ಅಮೆರಿಕಾದ ಕರಾವಳಿಯತ್ತ ಪೂರ್ವದ ಕಡೆಗೆ ಸ್ಥಳಾಂತರವಾದಾಗ ಈ ಆವರ್ತನವು ಆರಂಭವಾಗುತ್ತದೆ. ಈ ವಿದ್ಯಮಾನಕ್ಕೆ ಎಲ್‌ನಿನೋ ಎನ್ನಲಾಗುತ್ತದೆ. ಇದರಿಂದ ಮಳೆ ಕಡಿಮೆಯಾಗುತ್ತದೆ ಹಾಗೂ ಒಣ ಹವೆ ಹೆಚ್ಚುತ್ತದೆ. ಮೂರರಿಂದ ನಾಲ್ಕು ವರ್ಷ ಈ ವಿದ್ಯಮಾನ ಇರುತ್ತದೆ.

'ಈಗಾಗಲೇ ಎಲ್‌ನಿನೋ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಜೂನ್– ಜುಲೈನಲ್ಲಿ ವಾಡಿಕೆಯಷ್ಟು ಮಳೆ ಬಿದ್ದರೂ ಆ ಬಳಿಕ ಮಳೆ ಪ್ರಮಾಣ ಕಡಿಮೆಯಾಗುತ್ತದೆ. ರಾಜ್ಯದಲ್ಲಿ ಮಳೆಯ ಹಂಚಿಕೆ ವ್ಯಾಪ್ತಿಯೂ ಕಡಿಮೆ ಆಗುವುದರಿಂದ ರಾಜ್ಯದ ಬಹುಭಾಗ ಬರಕ್ಕೆ ತುತ್ತಾಗಲಿದೆ. ಕಳೆದ ಮೂರು– ನಾಲ್ಕು ವರ್ಷಗಳಲ್ಲಿ ಉತ್ತಮ ಮಳೆ ಆಗಿತ್ತು. ಕೆರೆ– ಕಟ್ಟೆಗಳು ತುಂಬಿದ್ದವು. ಎಲ್‌ನಿನೋ ಕಾರಣ ಮಳೆ ಕಡಿಮೆ ಆಗಲಿದೆ' ಎಂದು ಶ್ರೀನಿವಾಸ ರೆಡ್ಡಿ ಹೇಳಿದರು.

ಕಳೆದ 90 ಎಲ್‌ನಿನೋ ವರ್ಷಗಳನ್ನು ಪರಿಶೀಲಿಸಿದಾಗ 70 ಎಲ್‌ನಿನೋ ವರ್ಷಗಳಲ್ಲಿ ಬರ ಇತ್ತು. ರಾಜ್ಯದ ಮಟ್ಟಿಗೆ ಬರ ಇದ್ದ ಎಲ್ಲ ವರ್ಷಗಳಲ್ಲೂ ಎಲ್‌ನಿನೋ ವಾತಾವರಣವಿತ್ತು. ಈ ಬಾರಿ ಎನ್‌ನಿನೋ ವಾತಾವರಣ ಜೂನ್ ಬಳಿಕ ಹೆಚ್ಚಾಗುತ್ತಲೇ ಹೋಗುತ್ತದೆ ಎಂದು ಅವರು ತಿಳಿಸಿದರು.

ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಆಸ್ಪತ್ರೆಗಳ ಪಟ್ಟಿಗೆ ಸೇರಿಸಿ ಆದೇಶ

ತುರ್ತು ಚಿಕಿತ್ಸೆ: ಪಟ್ಟಿಗೆ 16 ಆಸ್ಪತ್ರೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಪಘಾತ ವಲಯಗಳಲ್ಲಿ ತುರ್ತು ಚಿಕಿತ್ಸೆಗಾಗಿ 16 ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳನ್ನು ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ (ಎಬಿ-ಎಆರ್‌ಕೆ) ಸಂಯೋಜಿತ ಆಸ್ಪತ್ರೆಗಳ ಪಟ್ಟಿಗೆ ಸೇರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೇ 11ರಂದು ಆದೇಶ ಹೊರಡಿಸಿದೆ.

ಮುಖ್ಯಾಂಶಗಳು

- 9 ಜಿಲ್ಲೆಗಳ 25 ಸ್ಥಳಗಳು ಅಪಘಾತ ವಲಯಗಳು
- 'ಬ್ಲ್ಯಾಕ್ ಸ್ಪಾಟ್'ಗಳಿಗೆ ಸಮೀಪದ ಆಸ್ಪತ್ರೆಗಳ ಸೇರ್ಪಡೆ
- 74 ವಿಧದ ಚಿಕಿತ್ಸೆ

ರಾಜ್ಯದ ಒಂಬತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ 25 ಸ್ಥಳಗಳನ್ನು ಅತ್ಯಧಿಕ ಅಪಘಾತ ಸಂಭವಿಸುವ ವಲಯಗಳೆಂದು (ಬ್ಲ್ಯಾಕ್ ಸ್ಪಾಟ್) ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ಅಪಘಾತ ಸಂಭವಿಸಿದರೆ ತುರ್ತು ಚಿಕಿತ್ಸೆ ಒದಗಿಸಲು ಎಬಿ-ಎಆರ್‌ಕೆ ಯೋಜನೆ ವ್ಯಾಪ್ತಿಗೆ ಖಾಸಗಿ ಆಸ್ಪತ್ರೆಗಳನ್ನು ಸೇರಿಸುವ ಪ್ರಸ್ತಾವ ಇಲಾಖೆಯ ಮುಂದಿತ್ತು.

ಅಪಘಾತ ಸಂತ್ರಸ್ತರ ನೆರವು ಯೋಜನೆ ಅಡಿಯಲ್ಲಿ 'ಬ್ಲ್ಯಾಕ್ ಸ್ಪಾಟ್'ಗಳಿಗೆ ಸಮೀಪದ ಆಸ್ಪತ್ರೆಗಳನ್ನು ಎಬಿ-ಎಆರ್‌ಕೆ ಸಂಯೋಜಿತ ಆಸ್ಪತ್ರೆಗಳ ಪಟ್ಟಿಗೆ ಸೇರಿಸಲು ನಿರ್ಧರಿಸಲಾಗಿತ್ತು. ಆರು ಜಿಲ್ಲೆಗಳಲ್ಲಿ 16 ಆಸ್ಪತ್ರೆಗಳನ್ನು ಪಟ್ಟಿಗೆ ಸೇರಿಸಿ ಆದೇಶ ಹೊರಡಿಸಲಾಗಿದೆ. 25 'ಬ್ಲಾಕ್ ಸ್ಪಾಟ್'ಗಳಿಗೂ ಸಮೀಪದಲ್ಲಿರುವ ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಆಸ್ಪತ್ರೆಗಳನ್ನೂ ಈ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಎಬಿ-ಎಆರ್‌ಕೆ ಸಂಯೋಜಿತ ಆಸ್ಪತ್ರೆಗಳ ಪಟ್ಟಿಯಲ್ಲಿರುವ ಆಸ್ಪತ್ರೆಗಳಲ್ಲಿ ಅಪಘಾತ ಪ್ರಕರಣಗಳ ಸಂತ್ರಸ್ತರಿಗೆ 74 ವಿಧದ ಚಿಕಿತ್ಸೆಗಳನ್ನು ತುರ್ತು ಚಿಕಿತ್ಸೆಯ ಭಾಗವಾಗಿ ನೀಡಲಾಗುತ್ತದೆ.

ಸಂಯೋಜಿತ ಆಸ್ಪತ್ರೆಗಳ ವಿವರ: ಬಳ್ಳಾರಿ– ಬಳ್ಳಾರಿ ಹೆಲ್ತ್ ಸಿಟಿ ಆಸ್ಪತ್ರೆ; ಬೆಳಗಾವಿ– ಜವಾಹರಲಾಲ್ ನೆಹರೂ ವೈದ್ಯಕೀಯ ಕಾಲೇಜು, ಕೆಎಲ್‌ಇ; ಬೆಂಗಳೂರು ಗ್ರಾಮಾಂತರ– ಪ್ರಕ್ರಿಯಾ ಆಸ್ಪತ್ರೆ (ತುಮಕೂರು ರಸ್ತೆ), ಎಂಎಸ್‌ಎಂಸಿ, ಆನೇಕಲ್, ಈಸ್ಟ್ ಪಾಯಿಂಟ್ ವೈದ್ಯಕೀಯ ಕಾಲೇಜು, ಆವಲಹಳ್ಳಿ; ಬೆಂಗಳೂರು ನಗರ– ಬ್ಯಾಪ್ಟಿಸ್ಟ್ ಆಸ್ಪತ್ರೆ, ಇಎಸ್‌ಐ ವೈದ್ಯಕೀಯ ಕಾಲೇಜು, ರಾಜಾಜಿನಗರ; ದಕ್ಷಿಣ ಕನ್ನಡ– ಕ್ಷೇಮ ಆಸ್ಪತ್ರೆ, ದೇರಳಕಟ್ಟೆ; ಕಲಬುರಗಿ– ಇಎಸ್‌ಐ ಆಸ್ಪತ್ರೆ ಮತ್ತು ಎಂಆರ್‌ಎಂಸಿ, ಸೇಡಂ ರಸ್ತೆ; ಉಡುಪಿ– ಚಿನ್ಮಯ ಆಸ್ಪತ್ರೆ, ವಿವೇಕ್ ಆಸ್ಪತ್ರೆ, ಹೈಟೆಕ್ ಆಸ್ಪತ್ರೆ; ಉತ್ತರ ಕನ್ನಡ– ಹೈಟೆಕ್ ಆಸ್ಪತ್ರೆ, ಕುಮಟಾ, ಕೆಎಲ್‌ಇ (ಕಮಲ್ ಆರ್. ನಾಯಕ್ ಆಸ್ಪತ್ರೆ), ಅಂಕೋಲಾ ಮತ್ತು ಆರ್‌ಎನ್‌ಎಸ್ ಆಸ್ಪತ್ರೆ– ಮಾವಳ್ಳಿ.



ತಂಪು..ತಂಪು.. ಬಿರುಬಿಸಿಲಿನಿಂದ ಕಂಗೆಟ್ಟ ಯುವಕರು ಉತ್ತರ ಪ್ರದೇಶ ಪ್ರಯಾಗರಾಜ್‌ನಲ್ಲಿರುವ 'ಸಂಗಮ'ದಲ್ಲಿ (ಗಂಗಾ, ಯುಮುನಾ ಮತ್ತು ಸರಸ್ವತಿ ನದಿಗಳು ಕೂಡುವ ಸ್ಥಳ) ಮಿಂದೆದ್ದರು –ಎಎಫ್‌ಪಿ ಚಿತ್ರ

ಹೈಕಮಾಂಡ್‌ಗೂ ಬಾಗದ ಹಟ

ಒಂದನೇ ಪುಟದಿಂದ...

ಸೋನಿಯಾ ಗಾಂಧಿ ಅವರು ಮಂಗಳವಾರ ರಾತ್ರಿ ದೆಹಲಿಗೆ ಮರಳಿದರು. ಸೋನಿಯಾ ಅವರನ್ನು ಶಿವಕುಮಾರ್ ಬುಧವಾರ ಭೇಟಿ ಮಾಡಿ ಅಹವಾಲನ್ನು ಹೇಳಿಕೊಳ್ಳಲಿದ್ದಾರೆ ಎಂದು ಶಿವಕುಮಾರ್ ಅವರ ಆಪ್ತ ಮೂಲಗಳು ತಿಳಿಸಿವೆ.

ರಾಹುಲ್ ಜತೆಗೆ ಖರ್ಗೆ ಚರ್ಚೆ: ಮಲ್ಲಿಕಾರ್ಜುನ ಖರ್ಗೆ ಅವರು ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಸುಮಾರು ಒಂದೂವರೆ ತಾಸು ಸಭೆ ನಡೆಸಿದರು. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಜತೆಗೆ ಪ್ರತ್ಯೇಕವಾಗಿ ಸಭೆ ನಡೆಸಿ ಮನವೊಲಿಸುವಂತೆ ರಾಹುಲ್ ಅವರು ಖರ್ಗೆ ಅವರಿಗೆ ಸಲಹೆ ನೀಡಿದ್ದರು. ಬಳಿಕ ರಾಹುಲ್ ಹಾಗೂ ಕೆ.ಸಿ.ವೇಣುಗೋಪಾಲ್ ಅವರು ಪ್ರತ್ಯೇಕ ಸಭೆ ನಡೆಸಿದರು.

ಎಐಸಿಸಿ ಅಧ್ಯಕ್ಷರು ಶಿವಕುಮಾರ್ ಅವರೊಂದಿಗೆ ಸುಮಾರು ಅರ್ಧ ಗಂಟೆ ಸಭೆ ನಡೆಸಿದರು. ನಂತರ ಸಿದ್ದರಾಮಯ್ಯ ಜತೆಗೆ ಒಂದೂವರೆ ಗಂಟೆ ಚರ್ಚಿಸಿದರು. ಇಬ್ಬರೂ ನಾಯಕರು ತಮ್ಮ ಹಕ್ಕನ್ನು ಬಲವಾಗಿ ಪ್ರತಿಪಾದಿಸಿದರು. ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಸೂತ್ರಕ್ಕೆ ಇಬ್ಬರೂ ಒಪ್ಪಲಿಲ್ಲ. ಉಪಮುಖ್ಯಮಂತ್ರಿ ಸ್ಥಾನ ನೀಡುವ ಭರವಸೆಯನ್ನು ಶಿವಕುಮಾರ್ ತಿರಸ್ಕರಿಸಿದರು ಎಂದು ಗೊತ್ತಾಗಿದೆ. ಇಬ್ಬರು ನಾಯಕರು ಸಹ ಮಾಧ್ಯಮಗಳ ಜತೆಗೆ ಮಾತನಾಡಲಿಲ್ಲ.

ಹಲವು ಶಾಸಕರ ಭೇಟಿ: ಖರ್ಗೆ ಅವರನ್ನು ಹಿರಿಯ ಶಾಸಕರಾದ ಆರ್.ವಿ.ದೇಶಪಾಂಡೆ, ಎಚ್.ಕೆ.ಪಾಟೀಲ ಸೇರಿದಂತೆ ಹಲವು ಶಾಸಕರು ಮಂಗಳವಾರ ಭೇಟಿ ಮಾಡಿ ಚರ್ಚಿಸಿದರು.

'ಮನೆ ಮಗನೋ ದತ್ತು ಪುತ್ರನೋ'

ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಒತ್ತಾಯಿಸಿ ಯುವ ಕಾಂಗ್ರೆಸ್‌ನ ಕೆಲವು ಮುಖಂಡರು ಒತ್ತಾಯಿಸಿದರು.

ಮಲ್ಲಿಕಾರ್ಜುನ ಖರ್ಗೆ ನಿವಾಸದ ಹೊರಗೆ ಸೇರಿದ ಅವರು, 'ಮನೆ ಮಗನಿಗೆ ಅವಕಾಶ ನೀಡಿ. ದತ್ತು ಪುತ್ರನಿಗೆ ಹುದ್ದೆ ಬೇಡ. ಸಿದ್ದರಾಮಯ್ಯ ಅವರು ಈಗಾಗಲೇ ಸಾಕಷ್ಟು ಅಧಿಕಾರ ಅನುಭವಿಸಿದ್ದಾರೆ. ಈ ಸಲದ ಗೆಲುವಿನಲ್ಲಿ ಅವರ ಪಾತ್ರ ಕಡಿಮೆ. ಈಗಿನ ಗೆಲುವಿಗೆ ಶಿವಕುಮಾರ್ ಅವರೇ ಕಾರಣ. ಅವರಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ಡಿಕೆಶಿ ಪರ ಸಹೋದರ ಲಾಬಿ

'ನನ್ನ ಅಣ್ಣ ಬಹಳ ಕಷ್ಟಪಟ್ಟಿದ್ದಾರೆ. ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಪಕ್ಷ ಸಂಕಷ್ಟದಲ್ಲಿದ್ದಾಗ ಸತತ ಮೂರು ವರ್ಷ ಸಂಘಟನೆ ಮಾಡಿ ಅಧಿಕಾರಕ್ಕೆ ತಂದಿದ್ದಾರೆ. ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೀಡಿದ ಮಾತನ್ನು ಉಳಿಸಿಕೊಂಡಿದ್ದಾರೆ. ಸಹಜವಾಗಿ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಬೇಕು' ಎಂದು ಪ್ರತಿಪಾದಿಸಿದರು.

ಎಸ್‌ಎಸ್‌ಎಲ್‌ಸಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಸಂಖ್ಯೆಯವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಗಳ ಛಾಯಾಪ್ರತಿ ಪಡೆಯುತ್ತಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಮೇ 18ರವರೆಗೆ ವಿಸ್ತರಿಸಿದೆ.

ಫಲಿತಾಂಶ ಪ್ರಕಟವಾದ ದಿನದಿಂದ ಮೇ 14ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಉತ್ತರ ಪತ್ರಿಕೆಗಳ ಛಾಯಾಪ್ರತಿಗಳನ್ನು ಕೋರಿ 72,686 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದುವರೆಗೂ ಮಂಡಳಿ 40 ಸಾವಿರ ಪ್ರತಿಗಳನ್ನು ಅಪ್‌ಲೋಡ್ ಮಾಡಿದೆ.

ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಳನ್ನು ಪಡೆದ ವಿದ್ಯಾರ್ಥಿಗಳು ಮೌಲ್ಯಮಾಪನದಲ್ಲಿ ಸಾಕಷ್ಟು ತಪ್ಪುಗಳಾಗಿವೆ ಎಂದು ದೂರಿದ್ದಾರೆ. ಬೆಂಗಳೂರಿನ ಖಾಸಗಿ ಶಾಲೆಯ ವಿದ್ಯಾರ್ಥಿನಿಯೊಬ್ಬರಿಗೆ ಇಂಗ್ಲಿಷ್ ವಿಷಯದಲ್ಲಿ 32 ಅಂಕಗಳು ಬಂದಿದ್ದವು. ಛಾಯಾಪ್ರತಿ ಪಡೆದ ನಂತರ 92 ಅಂಕಗಳಿಗೆ ಉತ್ತರ ಬರೆದಿರುವುದು ದೃಢಪಟ್ಟಿದೆ. ಇನ್ನೊಬ್ಬ ವಿದ್ಯಾರ್ಥಿಗೆ ಗಣಿತ ವಿಷಯದಲ್ಲಿ 71 ಅಂಕಗಗಳು ಬಂದಿದ್ದವು. ಈಗ ಹೆಚ್ಚುವರಿ 17 ಅಂಕಗಳು ಸಿಗಲಿವೆ. ಚುನಾವಣೆಗೂ ಮುನ್ನವೇ ಫಲಿತಾಂಶ ನೀಡಲು ತರಾತುರಿಯಲ್ಲಿ ಮೌಲ್ಯಮಾಪನ ಮಾಡಿದ ಪರಿಣಾಮ ಇಂತಹ ಲೋಪಗಳಾಗಿವೆ ಎಂದು ಪೋಷಕರು ದೂರಿದ್ದಾರೆ.

'ಮೌಲ್ಯಮಾಪನದಲ್ಲಿ ಲೋಪ ಎಸಗಿದ ಶಿಕ್ಷಕರಿಗೆ ದಂಡ ವಿಧಿಸಲಾಗುವುದು. ವಿದ್ಯಾರ್ಥಿಗಳು ಸಲ್ಲಿಸಿದ ಮರುಮೌಲ್ಯಮಾಪನದ ಶುಲ್ಕವನ್ನು ಹಿಂದಿರುಗಿಸಲಾಗುವುದು' ಎಂದು ಮಂಡಳಿ ನಿರ್ದೇಶಕ ಗೋಪಾಲಕೃಷ್ಣ ಹೇಳಿದ್ದಾರೆ.

'ಮೌಲ್ಯಮಾಪನದಲ್ಲಿ 6 ಅಂಕಗಳಿಗಿಂತ ಹೆಚ್ಚು ವ್ಯತ್ಯಾಸವಾದರೆ ದಂಡವಿಧಿಸುತ್ತಾರೆ. ಆದರೆ, ಉತ್ತರ ಪತ್ರಿಕೆಯ ಛಾಯಾಪ್ರತಿ ನೀಡಲು ನಿರಾಕರಿಸುತ್ತಾರೆ. ಶಿಕ್ಷಕರು ಮಾಡಿದ ತಪ್ಪು ಏನಿದೆ ಎನ್ನುವುದು ಅವರಿಗೆ ತಿಳಿಯಬಾರದೆ? ಮಂಡಳಿಯ ಇಂತಹ ನೀತಿ ಸರಿಯಲ್ಲ' ಎಂದು ಮೌಲ್ಯಮಾಪನದಲ್ಲಿ ಭಾಗಿಯಾದ ಶಿಕ್ಷಕರೊಬ್ಬರು ದೂರಿದರು.

ವಿದ್ಯಾರ್ಥಿಗಳು ಮರುಎಣಿಕೆ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಮೇ 21ರವರೆಗೆ ಅವಕಾಶ ನೀಡಲಾಗಿದೆ.

71 ಸಾವಿರ ಜನರಿಗೆ ನೇಮಕಾತಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಅಂಚೆ ಇಲಾಖೆ, ಗೃಹ ಸಚಿವಾಲಯ, ರೈಲ್ವೆ ಸಚಿವಾಲಯ, ನಿಮ್ಹಾನ್ಸ್, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಸಹಯೋಗದಲ್ಲಿ ಮಂಗಳವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳದಲ್ಲಿ 71 ಸಾವಿರ ಯುವಕ-ಯುವತಿಯರಿಗೆ ವಿವಿಧ ಹುದ್ದೆಗಳ ನೇಮಕಾತಿ ಪತ್ರ ನೀಡಲಾಯಿತು.

ವರ್ಚುವಲ್ ಮೂಲಕ ಮೇಳಕ್ಕೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸರ್ಕಾರ ಆನ್‌ಲೈನ್ ಮೂಲಕ ನೇರ ನೇಮಕಾತಿ ಯೋಜನೆ ಜಾರಿಗೊಳಿದ ನಂತರ ಉದ್ಯೋಗ ಪ್ರಕ್ರಿಯೆಗಳು ಭ್ರಷ್ಟಾಚಾರ ಮುಕ್ತವಾಗಿವೆ. ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ದೊರಕುತ್ತಿವೆ ಎಂದರು.

ಕೆಲ ದಿನಗಳ ಹಿಂದೆ ಗುಜರಾತ್‌ನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಅಲ್ಲೂ ಲಕ್ಷಾಂತರ ಯುವಕರಿಗೆ ಉದ್ಯೋಗ ಲಭಿಸಿದೆ. ಭಾರತ ಸರ್ಕಾರದ ಮಹತ್ವಪೂರ್ಣವಾದ ಈ ಪರಂಪರೆ ಮುಂದುವರಿಯಲಿದೆ. ಸರ್ಕಾರಿ ಉದ್ಯೋಗದ 'ಸಿ' ಮತ್ತು 'ಡಿ' ಗ್ರೂಪ್ ಹುದ್ದೆಗಳ ನೇಮಕಾತಿಯಲ್ಲಿ ಜನರು ಅನುಭವಿಸುತ್ತಿದ್ದ ಸಮಸ್ಯೆಗಳನ್ನು ಸಂಪೂರ್ಣ ನಿವಾರಿಸಲಾಗಿದೆ ಎಂದು ವಿವರಿಸಿದರು.

ಎಲ್ಲರ ಶ್ರೇಯೋಭಿವೃದ್ಧಿ ಗಮನದಲ್ಲಿಟ್ಟುಕೊಂಡು ಗ್ರಾಮೀಣ ಅಭಿವೃದ್ಧಿ ಜೀವನದ ವಿಸ್ತಾರಕ್ಕೆ ಭಾರತ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಹಿಂದೆ ಅಲೆದಾಡಬೇಕಿತ್ತು. ಸರದಿ ನಿಲ್ಲಬೇಕಿತ್ತು. ದಾಖಲೆಗಳಿಗಾಗಿ ಪರದಾಡಬೇಕಿತ್ತು. ಆನ್‌ಲೈನ್ ವ್ಯವಸ್ಥೆ ಜಾರಿಗೆ ಬಂದ ನಂತರ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರೆತಿದೆ ಎಂದು ಹೇಳಿದರು.

ಕೇಂದ್ರ ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಬಿಜೆಪಿ 9 ವರ್ಷಗಳಿಂದ ದೇಶಕ್ಕೆ ಸುಸ್ಥಿರ ಸರ್ಕಾರ ನೀಡಿದೆ. ರಾಜ್ಯದಲ್ಲಿ ಮೇಳಗಳ ಮೂಲಕ 2 ಲಕ್ಷ ಜನರಿಗೆ ಉದ್ಯೋಗ ನೀಡಲಾಗಿದೆ. ಮೇಕ್ ಇನ್ ಇಂಡಿಯಾದಿಂದಾಗಿ ಮೊಬೈಲ್ ತಯಾರಿಕೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಚೀನಾವನ್ನು ಹಿಂದಿಕ್ಕಿದ್ದೇವೆ. ಕರ್ನಾಟಕದ ಅಭಿವೃದ್ಧಿಗೂ ಆದ್ಯತೆ ನೀಡಲಾಗಿದೆ. ಹೊಸ ಸರ್ಕಾರವೂ ಒಳ್ಳೆಯ ಕೆಲಸ ಮಾಡಲಿ' ಎಂದು ಹೇಳಿದರು.

ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಉಪಸ್ಥಿತರಿದ್ದರು.

ಕಾಂಗ್ರೆಸ್ ತೀವ್ರ ಟೀಕೆ

ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ನೀಡುವ ಭರವಸೆ ನೀಡಿದ್ದ ಪ್ರಧಾನಿ ಮೋದಿ ಅವರು ಕಳೆದ ಒಂಬತ್ತು ವರ್ಷಗಳಲ್ಲಿ 18 ಕೋಟಿ ಯುವ ಜನತೆಯ ನೆಮ್ಮದಿ ಕಸಿದುಕೊಂಡಿದ್ದಾರೆ. ಸರ್ಕಾರಿ ಇಲಾಖೆಗಳಲ್ಲಿ 30 ಲಕ್ಷ ಉದ್ಯೋಗಗಳು ಖಾಲಿ ಉಳಿದಿವೆ. ಆದರೆ ಇಂದು ಕೇವಲ 71,000 ಜನರಿಗೆ ನೇಮಕಾತಿ ಪತ್ರ ವಿತರಿಸಲಾಗುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟ್ವೀಟ್ ಮಾಡಿದ್ದಾರೆ. ಯುವಜನರಿಗೆ ಆದ ಈ ವಂಚನೆಗೆ ಕಾಂಗ್ರೆಸ್ ತಕ್ಕ ಉತ್ತರ ನೀಡಲಿದೆ ಎಂದೂ ಅವರು ಹೇಳಿದ್ದಾರೆ.

ಪಾಕಿಸ್ತಾನ್ ಜಿಂದಾಬಾದ್: ಸ್ಟೇಟಸ್ ಹಾಕಿದ್ದ ಯುವಕನ ಬಂಧನ

ವಿಜಯಪುರ: 'ಪಾಕಿಸ್ತಾನ್ ಜಿಂದಾಬಾದ್, ಓನ್ಲಿ ಮುಸ್ಲಿಂ ರಾಷ್ಟ್ರ' ಎಂದು ಇನ್‌ಸ್ಟಾಗ್ರಾಂನಲ್ಲಿ ಮೇ 15ರಂದು ಸ್ಟೇಟಸ್ ಹಾಕಿದ್ದ ಯುವಕನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ತಾಳಿಕೋಟೆ ತಾಲ್ಲೂಕಿನ ಹಿರೂರು ಗ್ರಾಮದ ಇಬ್ರಾಹಿಂ ಮುರ್ತುಜಸಾಬ್ ಮುಲ್ಲಾ (21) ಬಂಧಿತ ಆರೋಪಿ.

ಈತನ ಇನ್‌ಸ್ಟಾಗ್ರಾಂ ಖಾತೆಯನ್ನು ವೀಕ್ಷಿಸಿದ ಸ್ಥಳೀಯರಿಂದ ತಾಳಿಕೋಟೆ ಪೊಲೀಸರು ಮಾಹಿತಿ ಪಡೆದು, ಸ್ವಯಂ ಪ್ರೇರಿತ ದೂರು ದಾಖಲು ಮಾಡಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.


ಬಿರುಗಾಳಿ ಸಹಿತ ಮಳೆ: ಬೆಳೆ ಹಾನಿ

ಪಿರಿಯಾಪಟ್ಟಣ: ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಂಗಳವಾರ ಬಿರುಗಾಳಿ ಸಹಿತ ಮಳೆಯಿಂದ ಬೆಳೆ ಹಾನಿಯಾಗಿದೆ. ಒಂದು ಗಂಟೆಗೂ ಹೆಚ್ಚು ಕಾಲ ಮಳೆಯಾಗಿದ್ದು, ತಾಲ್ಲೂಕಿನ ಕೆ.ಜಿ. ಕೋಡಿಹಳ್ಳಿಯಲ್ಲಿ ಜಮೀನಿಗೆ ನೀರು ನುಗ್ಗಿ ತಂಬಾಕು, ಶುಂಠಿ ಕೊಚ್ಚಿ ಹೋಗಿದೆ.

ಹಬಟೂರು ಗ್ರಾಮದಲ್ಲಿ ವಿದ್ಯುತ್ ಕಂಬ ಬಿದ್ದಿದೆ. ಪಟ್ಟಣದ ಗ್ರಾಮಾಂತರ ಪೊಲೀಸ್ ಕಚೇರಿ ಆವರಣಕ್ಕೆ ನೀರು ನುಗ್ಗಿದ್ದು, ಕಚೇರಿಗೆ ತೆರಳಲು ಸಿಬ್ಬಂದಿಗಳಿಗೆ ಅಡ್ಡಿಯಾಗಿತ್ತು. ಯಂತ್ರವಾಹನ ತರಿಸಿ ಸಮಸ್ಯೆಯನ್ನು ಪರಿಹರಿಸಲಾಯಿತು. ಬೆಟ್ಟದಪುರ ರಸ್ತೆಯಲ್ಲೂ ನೀರು ನಿಂತು ಜನ ಸಂಚಾರಕ್ಕೆ ತೊಂದರೆಯಾಯಿತು.

ನಾಲ್ಕು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸಾಧ್ಯತೆ (ಬೆಂಗಳೂರು ವರದಿ): ರಾಜ್ಯದ ದಕ್ಷಿಣ ಒಳನಾಡು ವ್ಯಾಪ್ತಿಯ ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಬುಧವಾರ ಸಾಧಾರಣ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು, ಕರಾವಳಿ ಹಾಗೂ ಉತ್ತರ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ. ಈ ಭಾಗದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.



ಇ-ಕಾಮರ್ಸ್‌ನಲ್ಲಿ ಮೌನಕ್ರಾಂತಿ



ಕೃಷ್ಣ ಭಟ್

ಏಳು ವರ್ಷಗಳ ಹಿಂದೆ ಭಾರತೀಯ ರಾಷ್ಟ್ರೀಯ ಪಾವತಿ ಕಾರ್ಪೊರೇಶನ್ ಸಂಸ್ಥೆಯು 'ಯುಪಿಐ' ಎಂಬ ಹೊಸ ಪಾವತಿ ವಿಧಾನವನ್ನು ಘೋಷಿಸಿ, ಇಡೀ ಡಿಜಿಟಲ್ ಪಾವತಿ ಕ್ಷೇತ್ರದಲ್ಲೊಂದು ಕ್ರಾಂತಿಯನ್ನು ಎಬ್ಬಿಸಿತ್ತೋ ಅಂಥದ್ದೇ ಕ್ರಾಂತಿಯೊಂದು ನಿಧಾನವಾಗಿ ಇ-ಕಾಮರ್ಸ್ ಕ್ಷೇತ್ರದಲ್ಲಿ ಸದ್ದಿಲ್ಲದೇ ನಡೆಯುತ್ತಿದೆ. ಅದೇ 'ಒನ್‌ಡಿಸಿ'. ಅಂದರೆ 'ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್'.

ಇದೇನು ಎಂಬುದನ್ನು ನೋಡುವುದಕ್ಕೂ ಮೊದಲು ನಾವು ಈಗ ಇ-ಕಾಮರ್ಸ್ ಕ್ಷೇತ್ರ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಗಮನಿಸಬೇಕು. ಸಾಮಾನ್ಯವಾಗಿ ನಾವು ಬಳಸುವ ಅಮೆಜಾನ್, ಫ್ಲಿಪ್‌ಕಾರ್ಟ್ ಇತ್ಯಾದಿ ಆ್ಯಪ್‌ಗಳು ಕೇವಲ ಪ್ಲಾಟ್‌ಫಾರಂ. ಅವು ಅಂಗಡಿಗಳಿದ್ದ ಹಾಗೆ. ಅಲ್ಲಿ ಯಾವುದೇ ವಸ್ತು ಉತ್ಪಾದನೆಯಾಗುವುದಿಲ್ಲ. ಅವು ಬೇರೆ ಬೇರೆ ಉತ್ಪಾದಕರಿಂದ ಸಾಮಗ್ರಿಗಳನ್ನು ತಂದು ತಮ್ಮ ಗೋಡೌನ್‌ನಲ್ಲಿ ಇಟ್ಟುಕೊಳ್ಳುತ್ತವೆ. ನಂತರ ಅದನ್ನು ಅವರ ಆ್ಯಪ್‌ನಲ್ಲಿ ಲಿಸ್ಟ್ ಮಾಡಿರುತ್ತಾರೆ. ಗ್ರಾಹಕ ಅದನ್ನು ನೋಡಿದೊಡನೆ ಖರೀದಿ ಮಾಡಬೇಕು ಎನಿಸಿದಾಗ ಅಲ್ಲಿಗೆ, ಪೇಮೆಂಟ್ ಮಾಡುವ ಸೌಲಭ್ಯ ಒದಗಿಸುವವರ ಬಳಿ ಗ್ರಾಹಕರನ್ನು ಕಳುಹಿಸುತ್ತಾರೆ. ಅಲ್ಲಿ ಪಾವತಿ ಮಾಡಿದ ನಂತರ, ಆ ಖರೀದಿ ಮಾಡಿದ ವಸ್ತುವನ್ನು ಗ್ರಾಹಕನ ಮನೆ ಬಾಗಿಲಿಗೆ ತಲುಪಿಸುವುದಕ್ಕೆ ಕೊರಿಯರ್ ಸೇವೆ ಬೇಕಲ್ಲ. ಅದನ್ನು ನಿರ್ವಹಿಸುವವರೂ ಬೇರೆಯವರು. ಅಲ್ಲಿಗೆ ಗ್ರಾಹಕ ಖರೀದಿ ಮಾಡಿದ ಐಟಂ ತೆರಳುತ್ತದೆ. ಇವೆಲ್ಲವೂ ಸಂಕೀರ್ಣ ಪ್ರಕ್ರಿಯೆಯಾಗಿದ್ದರೂ, ಕೆಲವೇ ಕ್ಲಿಕ್‌ಗಳಲ್ಲಿ ನಡೆದುಹೋಗುವುದರಿಂದ ಗ್ರಾಹಕನಿಗೆ ಇದರ ಹಿಂದಿರುವ ಹಕೀಕತ್ತು ಗೊತ್ತಾಗುವುದಿಲ್ಲ.

ಇಲ್ಲಿ, ದೊಡ್ಡ ದೊಡ್ಡ ಕಂಪನಿಗಳು ತಮ್ಮದೇ ಪೇಮೆಂಟ್ ಇಂಟರ್‌ಫೇಸ್ ಅನ್ನೂ, ಲಾಜಿಸ್ಟಿಕ್ಸ್ ಸೇವೆಯನ್ನೂ, ದೊಡ್ಡ ದೊಡ್ಡ ಕಂಪನಿಗಳ ಜೊತೆಗೆ ನೇರವಾಗಿ ಒಪ್ಪಂದವನ್ನೂ ಮಾಡಿಕೊಳ್ಳುವುದರಿಂದ ಕಡಿಮೆ ದರದಲ್ಲಿ ಗ್ರಾಹಕನಿಗೆ ವಸ್ತುಗಳನ್ನು ಕೊಡಲು ಸಾಧ್ಯವಾಗುತ್ತದೆ. ಇದರಿಂದ ನಿಧಾನವಾಗಿ ದೊಡ್ಡ ಇಕಾಮರ್ಸ್ ಕಂಪನಿಗಳಿಗೆ ಹೆಚ್ಚಿನ ಏಕಸ್ವಾಮ್ಯ ಲಭಿಸುತ್ತದೆ. ಆದರೆ, ಸಣ್ಣ ಕಂಪನಿಗಳು ಲಾಜಿಸ್ಟಿಕ್ಸ್ ಸೇವೆ, ಪೇಮೆಂಟ್ ಸೌಲಭ್ಯ ಇತ್ಯಾದಿಯನ್ನು ಹೊರಗುತ್ತಿಗೆ ನೀಡುವ ಅಗತ್ಯ ಉಂಟಾಗುವುದರಿಂದ ಲಾಭಾಂಶ ಕಡಿಮೆಯಾಗಿ, ಅವು ನಿಧಾನವಾಗಿ ಮಾರುಕಟ್ಟೆಯಿಂದ ಹೊರಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ.

ಇದನ್ನು ತಡೆಯುವುದಕ್ಕಾಗಿಯೇ ಸರ್ಕಾರ ಇಂಥದ್ದೊಂದು 'ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್' ಅನ್ನು ಆರಂಭಿಸಿದೆ. ಇದೊಂದು ಮುಕ್ತ ವೇದಿಕೆ! ಇದರಲ್ಲಿ ಲಾಜಿಸ್ಟಿಕ್ಸ್ ಸೇವೆಯನ್ನು ಒದಗಿಸುವವರು ಸೇರಿಕೊಂಡು, ಲಾಜಿಸ್ಟಿಕ್ಸ್ ಸೇವೆಯನ್ನಷ್ಟೇ ಒದಗಿಸಬಹುದು. ಇನ್ನು, ವಿವಿಧ ಉತ್ಪನ್ನಗಳನ್ನು ತಯಾರಿಸುವವರೂ ಈ ವೇದಿಕೆಗೆ ಸೇರಿಕೊಂಡು ಇಲ್ಲಿನ ಎಲ್ಲ ಸೇವೆಗಳನ್ನು ಬಳಸಿಕೊಳ್ಳಬಹುದು.

ಇದರ ಅನುಕೂಲ ಏನೆಂದರೆ, ಹೆಚ್ಚು ಹೆಚ್ಚು ಸಂಸ್ಥೆಗಳು ಇದರ ವ್ಯಾಪ್ತಿಗೆ ಬಂದಷ್ಟೂ ಸೇವೆಯ ವೆಚ್ಚ ಕಡಿಮೆಯಾಗುತ್ತದೆ. ಉದಾಹರಣೆಗೆ, ಒಬ್ಬ ಲಾಜಿಸ್ಟಿಕ್ ಸೇವೆ ಒದಗಿಸುವವನಿಗೆ ಒಂದು ಬೀದಿಯಲ್ಲಿ ಒಂದು ಪಾರ್ಸೆಲ್ ಡೆಲಿವರಿಯನ್ನು ಮಾಡುವ ವೆಚ್ಚಕ್ಕೂ, 10 ಡೆಲಿವರಿ ಮಾಡುವ ವೆಚ್ಚಕ್ಕೂ ವ್ಯತ್ಯಾಸವಾಗುತ್ತದೆ. ಒಂದು ಬೀದಿಗೆ ಒಂದು ಪಾರ್ಸೆಲ್ ಡೆಲಿವರಿ ಮಾಡಿದರೆ, ಅವನಿಗೆ ಖರ್ಚು ಹೆಚ್ಚು. ಅದೇ ಬೀದಿಯಲ್ಲಿನ 10 ಮನೆಗಳಿಗೆ ಹತ್ತು ಪಾರ್ಸೆಲ್ ಡೆಲಿವರಿ ಮಾಡಿದರೆ, ಅವನಿಗೆ ಓಡಾಟ, ಸಮಯದ ವೆಚ್ಚ ಉಳಿತಾಯವಾಗುತ್ತದೆ. ಆ ಉಳಿತಾಯವೇ ಈ ಒಎನ್‌ಡಿಸಿ ವೇದಿಕೆಯ ಅನುಕೂಲ! ಎಲ್ಲ ಸಣ್ಣ ಸಣ್ಣ ವ್ಯಾಪಾರಿಗಳೂ, ಲಾಜಿಸ್ಟಿಕ್ಸ್ ಸೇವೆ ಸಲ್ಲಿಸುವವರೂ ಒಟ್ಟಾದರೆ, ಆಗ ವಹಿವಾಟಿನ ಮೊತ್ತ ಅಧಿಕವಾಗುತ್ತದೆ. ಅವರೆಲ್ಲರೂ ಒಂದೇ ಲಾಜಿಸ್ಟಿಕ್ಸ್ ಸೇವೆ, ಪೇಮೆಂಟ್ ಇಂಟರ್‌ಫೇಸ್ ಇತ್ಯಾದಿಯನ್ನು ಬಳಸಿದಾಗ ಎಲ್ಲರಿಗೂ ಲಾಭದ ಪ್ರಮಾಣ ಹೆಚ್ಚುತ್ತದೆ. ಆಗ ಸುಲಭವಾಗಿಯೇ ದೊಡ್ಡ ದೊಡ್ಡ ಕಂಪನಿಗಳನ್ನು ಎದುರಿಸುವ ಸಾಮರ್ಥ್ಯವೊಂದು ನಿರ್ಮಾಣವಾಗುತ್ತದೆ.

ಈ ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ ಎಂಬ ವೇದಿಕೆಯನ್ನು ಸ್ಥಾಪಿಸಿದ್ದು, ಕೇಂದ್ರ ಸರ್ಕಾರದ ಉದ್ಯಮ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ. 2021ರಲ್ಲಿ ಇದು ಆರಂಭವಾಯಿತು. ಆರಂಭವಾದಾಗ ಇದರ ಬಗ್ಗೆ ಸುದ್ದಿಯಾಗಿದ್ದು, ಸದ್ದು ಮೂಡಿದ್ದು ಕಡಿಮೆ. ಆದರೆ, ಈ ಸಂಸ್ಥೆಯ ಅವಿರತ ಪರಿಶ್ರಮದಿಂದ ಈಗ ಒಂದು ಹಂತಕ್ಕೆ ಇ-ಕಾಮರ್ಸ್ ವಲಯದಲ್ಲಿ ಸದ್ದು ಮಾಡುತ್ತಿದೆ. ಹೊಸ ಹೊಸ ಕಂಪನಿಗಳು ತಮ್ಮ ಸೇವೆಯನ್ನು ಈ ಪ್ಲಾಟ್‌ಫಾರಂ ಅಡಿಯಲ್ಲಿ ಒದಗಿಸುತ್ತಿವೆ. ಆರಂಭದ ದಿನಗಳಲ್ಲಿ ಸಹಜವಾಗಿಯೇ ಇದಕ್ಕೆ ಅಪಾರ ಉತ್ತೇಜನ, ಪ್ರೋತ್ಸಾಹ ಅಗತ್ಯವಿದೆ. ಒಮ್ಮೆ ಒಂದು ಹಂತಕ್ಕೆ ಬೆಳೆದು ನಿಂತ ಮೇಲೆ ಈ ಉತ್ತೇಜನದ ಅಗತ್ಯವಿರುವುದಿಲ್ಲ. ಏಕೆಂದರೆ, ಇದರಲ್ಲಿ ತೊಡಗಿಸಿಕೊಂಡ ಸಂಸ್ಥೆಗಳು ಸ್ವತಃ ಲಾಭದ ರುಚಿ ನೋಡುತ್ತವೆ.

ಸದ್ಯ ಇಕಾರ್ಟ್, ಡುನ್‌ಜೋ, ಪೇಟಿಎಂ ಹಾಗೂ ಫೋನ್‌ಪೆ ಸೇರಿದಂತೆ ಹಲವು ಸಂಸ್ಥೆಗಳು ತಮ್ಮ ಸೇವೆಯನ್ನು ಈ ಪ್ಲಾಟ್‌ಫಾರಂ ಅಡಿಯಲ್ಲಿ ಒದಗಿಸುತ್ತಿವೆ. ಕಳೆದ ಐದಾರು ತಿಂಗಳಲ್ಲಿ 20ಕ್ಕೂ ಹೆಚ್ಚು ಸಂಸ್ಥೆಗಳ ಜೊತೆಗೆ ಒನ್‌ಡಿಸಿ ಸಿಇಒ ಥಂಪಿ ಕೋಶಿ ಮಾತುಕತೆ ನಡೆಸುತ್ತಿದ್ದು, ಅವರನ್ನು ಈ ಪ್ಲಾಟ್‌ಫಾರಂ ಅಡಿಯಲ್ಲಿ ತರುವ ಬಗ್ಗೆ ಚರ್ಚೆ ನಡೆಯುತ್ತಿದೆ.

ಒನ್‌ಡಿಸಿ ಉದ್ದೇಶ ಆರಂಭದಲ್ಲಿ ಸಣ್ಣ ಸಣ್ಣ ಕಂಪನಿಗಳನ್ನು ಈ ಪ್ಲಾಟ್‌ಫಾರಂ ಅಡಿಯಲ್ಲಿ ತರುವುದೇ ಆಗಿದ್ದರೂ, ಕೆಲವು ದೊಡ್ಡ ದೊಡ್ಡ ಕಂಪನಿಗಳೂ ಈ ಪ್ಲಾಟ್‌ಫಾರಂಗೆ ಬರದ ಹೊರತು ಈ ಸೌಲಭ್ಯ ನಿರೀಕ್ಷಿಸಿದ ಮಟ್ಟಕ್ಕೆ ತಲುಪದು ಎಂಬುದು ಸಂಸ್ಥೆಗೆ ಅರ್ಥವಾದಂತಿದೆ. ಹೀಗಾಗಿ, ಈಗ ದೊಡ್ಡ ದೊಡ್ಡ ಕಂಪನಿಗಳ ಜೊತೆಗೂ ಮಾತುಕತೆ ನಡೆದಿದೆ. ಒಂದು ವೇಳೆ ಒಎನ್‌ಡಿಸಿ ಇದೇ ವೇಗದಲ್ಲಿ ಮುನ್ನಡೆದರೆ ಮುಂದಿನ ಕೆಲವು ವರ್ಷಗಳಲ್ಲಿ ಇಡೀ ದೇಶದಲ್ಲಿ ಯುಪಿಐ ರೀತಿಯಲ್ಲಿ, ಇ-ಕಾಮರ್ಸ್ ವಲಯದಲ್ಲೊಂದು ಮಹತ್ವದ ಮೈಲಿಗಲ್ಲು ಆಗುವ ಎಲ್ಲ ಸಾಧ್ಯತೆಯೂ ಇದೆ.



ಮರಳಿ ಬಂದೀತೆ ವಯಸ್ಸು!



ಅಮೃತೇಶ್ವರಿ ಬಿ.

ಸಮಯ ಯಾರಿಗಾಗಿಯೂ ನಿಲ್ಲುವುದಿಲ್ಲ. ಮುನ್ನಡೆದ ಸಮಯ ಎಂದಿಗೂ ಹಿಂದಿರುಗುವುದಿಲ್ಲ. ಹಾಗೆಯೇ ನಮ್ಮ ವಯಸ್ಸು ಕೂಡ ಇಳಿಯುವುದಿಲ್ಲ. ಇದು ನಮ್ಮೆಲ್ಲರಿಗೂ ತಿಳಿದಿರುವ ಸಾರ್ವಕಾಲಿಕ ಸತ್ಯ. ಸಮಯವೇ ಹಾಗೆ ಸದಾ ಏರುತ್ತಲೇ ಸಾಗುತ್ತದೆ. ನಮಗೆ ಕೆಲವೊಮ್ಮೆ ಇನ್ನೂ ಚಿಕ್ಕವರಾಗಿದ್ದಿದ್ದರೆ ಅಥವಾ ಮತ್ತೆ ಮಕ್ಕಳಾಗಿಬಿಡುವಂತಿದ್ದರೆ ಎಷ್ಟು ಚಂದವಿರುತ್ತಿತ್ತು ಅನ್ನಿಸುವುದುಂಟು. ಆದರೆ ಅದು ಅಸಾಧ್ಯ ಎನ್ನುವುದೂ ಸರಿ.

ಒಮ್ಮೆ ಕಲ್ಪಿಸಿಕೊಂಡು ನೋಡಿ, ದೇಹಕ್ಕೆ ವಯಸ್ಸಾಗುತ್ತಿದ್ದರೂ, ಎಳೆಯರಂತೆ ಕಾಣಿಸಿಕೊಳ್ಳಬಲ್ಲರಾದರೆ, ನಾವು ನಮ್ಮ ಮನಸ್ಸನ್ನು ಮಕ್ಕಳಷ್ಟೇ ತಾಜಾ, ಕ್ರಿಯಾಶೀಲ ಹಾಗೂ ಕುತೂಹಲಿಗಳಾಗಿ ಇರಿಸಿಕೊಳ್ಳಬಲ್ಲರಾದರೆ ಎಷ್ಟು ಚೆನ್ನ? ಇದೋ ಸಾಧ್ಯವಿದೆ ಎನ್ನುತ್ತಿದ್ದಾರೆ, 'ಬ್ರೈಗ್ಯಾಮ್ಸ್ ಡಿವಿಷನ್ ಆಫ್ ಜೆನಿಟಿಕ್ಸ್'ನ ಸಂಶೋಧಕರಾದ ಜೆಸ್ಸಿ ಪೊಗಾನಿಕ್. ಇತ್ತೀಚೆಗೆ 'ಸೆಲ್ ಮೆಟಬಾಲಿಸಮ್' ಪತ್ರಿಕೆಯಲ್ಲಿ ವರದಿಯಾಗಿರುವ ಈ ಸಂಶೋಧನೆಯು, ಮಾನಸಿಕ ಒತ್ತಡದಿಂದ ನಮ್ಮ ಜೈವಿಕ ವಯಸ್ಸು ಏರುತ್ತದಾದರೂ, ಮೊದಲಿನಂತಾಗಿಸಿಕೊಳ್ಳಬಹುದು ಎನ್ನುತ್ತಿದೆ.

ಇತ್ತೀಚೆಗೆ ಕೊರೊನಾ ವೈರಸ್ಸು ಇಡೀ ಮನುಕುಲವನ್ನೇ ಬಳಲಿಸಿತ್ತು. ಸೋಂಕಿಗೆ ತುತ್ತಾಗದೇ ಮನೆಯೊಳಗೆ ಬಂಧಿಯಾಗಿದ್ದವರು ಮತ್ತು ಸೋಂಕಿಗೆ ತುತ್ತಾಗಿದ್ದವರ ಮಾನಸಿಕ ಒತ್ತಡ ಬೇರೆಬೇರೆಯಾಗಿತ್ತು, ಜೊತೆಗೆ ಇತರೆ ಯಾವುದೇ ಶಸ್ತ್ರಚಿಕಿತ್ಸೆಗೆ ಒಳಗಾದವರು ಅಥವಾ ಗರ್ಭಿಣಿಯರ ಖಿನ್ನತೆ ಹಾಗೂ ಜೀವನಶೈಲಿಯಿಂದ ಉಂಟಾಗುತ್ತಿರುವ ಒತ್ತಡ ಮತ್ತೊಂದು ಕಡೆ. ಈ ಮನೋವ್ಯಾಧಿಗೆ ಕಾರಣ ಸಾಕಷ್ಟು, ಪರಿಣಾಮ ಒಂದೇ. ಒಟ್ಟಾರೆ ಕಾರಣ ಏನೇ ಇರಲಿ, ನಾವು ಖಿನ್ನತೆಗೊಳಗಾದರೆ ನಾವು ಜೈವಿಕವಾಗಿ ವೃದ್ಧರಾಗಿಬಿಡುತ್ತೇವೆ; ಮಾಡುವ ಕಾರ್ಯದಲ್ಲಿ ಕ್ಷಮತೆಯಿರದೆ, ನಿರುತ್ಸಾಹಿಗಳಾಗಿಬಿಡುತ್ತೇವೆ ಎನ್ನುವುದು ಸರಿಯಷ್ಟೇ. ಈ ಒತ್ತಡವನ್ನು ಸರಿಯಾಗಿ ನಿರ್ವಹಿಸಿದರೆ ನಾವು ಮತ್ತೆ ಎಳೆಯರಂತಾಗಬಹುದು ಎನ್ನುತ್ತಾರೆ, ಜೆಸ್ಸಿ.

ನಮ್ಮ ದೇಹಕ್ಕೆ ಗಡಿಯಾರದ ಅವಶ್ಯಕತೆಯಿಲ್ಲ. ಅದು ತನ್ನಷ್ಟಕ್ಕೆ ತಾನೇ ಎಲ್ಲ ಕಾರ್ಯವನ್ನೂ ನಿರ್ವಹಿಸುತ್ತಿರುತ್ತದೆ. ಬೆಳಗಾಗುತ್ತಿದ್ದಂತೆ ಏಳುವ, ಕತ್ತಲಾಗುತ್ತಿದ್ದಂತೆ ಮಲಗಿಸುವ, ನಮ್ಮ ಜೀವಿತಾವಧಿಯನ್ನು ನಿಯಂತ್ರಿಸುವವುದು ವಯಸ್ಸಾಗುತ್ತಿದ್ದಂತೆ ಸಂತಾನೋತ್ಪತ್ತಿ ಶಕ್ತಿ ಕುಗ್ಗುವುದು – ಎಲ್ಲವೂ ತಂತಾನೇ ಯಾರ ಆದೇಶವೂ ಇಲ್ಲದೆ ನಡೆಯುತ್ತಿದೆ. ಇದನ್ನೇ ಜೈವಿಕ ಗಡಿಯಾರ ಎನ್ನುತ್ತೇವೆ. ಈ ಜೈವಿಕ ಗಡಿಯಾರ ನಮ್ಮ ದೇಹದ ಪ್ರತಿ ಕೋಶದ ಆರೋಗ್ಯ ಮತ್ತು ಕಾರ್ಯವೈಖರಿಯನ್ನು ನಿರ್ಧರಿಸುತ್ತದೆ. ಡಿ. ಎನ್. ಎ.ದಲ್ಲಾಗುವ ಆಣ್ವಿಕ ಬದಲಾವಣೆಯನ್ನು ತಿಳಿಸುತ್ತದೆ, ಹಾಗೂ ಅದರಿಂದ ಅನಾರೋಗ್ಯ ಅಥವಾ ಸಾವಿನ ಅಪಾಯ ಮುನ್ಸೂಚನೆಯನ್ನು ನೀಡುತ್ತದೆ.



ಆ ಮೂಲಕ ನಮ್ಮ ಜೈವಿಕ ವಯಸ್ಸನ್ನೂ ತಿಳಿಸುತ್ತದೆ. ಜೆಸ್ಸಿ ಮತ್ತು ತಂಡದವರು, ರಕ್ತ, ಮೂತ್ರ ಅಥವಾ ಅಂಗಾಂಶಗಳನ್ನು ಜೈವಿಕ ಗುರುತುಗಳನ್ನಾಗಿ ಬಳಸಿಕೊಂಡು ಜೈವಿಕ ವಯಸ್ಸಾಗುವಿಕೆಯನ್ನು ಹಾಗೂ ಪರಿಣಾಮಗಳನ್ನು ಅಂದಾಜಿಸಿದ್ದಾರೆ. ಇದಕ್ಕಾಗಿ ಜೆಸ್ಸಿ ಮತ್ತು ಸಂಗಡಿಗರು, ಮೂರು ಬಗೆಯ ರೋಗಿಗಳನ್ನು ಪರೀಕ್ಷಿಸಿದ್ದಾರೆ. ಮೊದಲನೆಯದಾಗಿ ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾದ ಹಿರಿಯ ರೋಗಿಗಳ ರಕ್ತವನ್ನು, ಶಸ್ತ್ರಚಿಕಿತ್ಸೆಗೂ ಮುನ್ನ, ನಂತರ ಹಾಗೂ ಆಸ್ಪತ್ರೆಯಿಂದ ಮನೆಗೆ ಹೊರಡುವ ಹಂತದಲ್ಲಿ ಪರೀಕ್ಷೆ ಮಾಡಿದ್ದಾರೆ. ಹಾಗೂ ಗರ್ಭಿಣಿಯರು ಹಾಗೂ ಗರ್ಭಧರಿಸಿದ ಇಲಿಗಳ ರಕ್ತವನ್ನೂ, ಗರ್ಭಾವಸ್ಥೆಯ ಆರಂಭಿಕ ದಿನ, ಕಡೆಯ ದಿನಗಳು ಹಾಗೂ ಹೆರಿಗೆಯ ನಂತರ ಪರೀಕ್ಷಿಸಿದ್ದಾರೆ. ಕೊನೆಯದಾಗಿ ಕೊರೊನಾ ಸೋಂಕು ತಗುಲಿ ತೀವ್ರ ನಿಗಾ ಘಟಕ ಸೇರಿದ್ದ ರೋಗಿಗಳ ರಕ್ತವನ್ನೂ ಪರೀಕ್ಷಿಸಿದ್ದಾರೆ.

ಈ ಪರೀಕ್ಷೆಗಳ ಫಲಿತಾಂಶಗಳ ಪ್ರಕಾರ, ಅಪಘಾತವಾಗಿ ಶಸ್ತ್ರಚಿಕಿತ್ಸೆಗೊಳಗಾದ ರೋಗಿಗಳ ಮಾನಸಿಕ ಒತ್ತಡ ಒಂದು ವಾರದಲ್ಲೇ ಮೊದಲಿನ ಸ್ಥಿತಿಗೆ ಬಂದಿತ್ತು. ಆದರೆ ಇತರೆ ಶಸ್ತ್ರಚಿಕಿತ್ಸೆಯಾದ ರೋಗಿಗಳ ಮನಃಸ್ಥಿತಿ ಹೀಗೆ ಶೀಘ್ರವಾಗಿ ಗುಣವಾಗಲಿಲ್ಲವಂತೆ. ಗರ್ಭಿಣಿಯರೂ ಹೆರಿಗೆಯ ನಂತರ ಮಾನಸಿಕ ಸ್ತಿಮಿತಕ್ಕೆ ಬಂದು, ಜೈವಿಕವಾಗಿ ವಯಸ್ಸಾದಂತೆ ಕಾಣಿಸುತ್ತಿದ್ದ ಸಮಸ್ಯೆ ಕ್ರಮೇಣ ಬಗಹರಿಯಿತಂತೆ. ಕೊರೊನಾ ಸೋಂಕಿತರಲ್ಲಿಯೂ ಈ ರೀತಿಯ ಧನಾತ್ಮಕ ಬದಲಾವಣೆ ಕಂಡಿತ್ತಂತೆ. ಆದರೆ ಎಲ್ಲ ರೋಗಿಗಳೂ ಒಂದೇ ರೀತಿಯಲ್ಲಿ, ಒಂದೇ ವೇಗದಲ್ಲಿ ಚೇತರಿಸಿಕೊಳ್ಳದೇ, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಆ್ಯಂಟಿ-ಏಜಿಂಗ್‌ನ ಬಗೆಗಿನ ಸಂಶೋಧನೆಗಳ ಫಲಿತಾಂಶಗಳನ್ನು ಹೋಲಿಸಿ ನೋಡಿದಾಗ ಜೈವಿಕವಾಗಿ ವಯಸ್ಸಾಗುವಿಕೆಯನ್ನು ಇನ್ನಷ್ಟು ಅರ್ಥಮಾಡಿಕೊಳ್ಳಬಹುದು ಎನ್ನುವುದು ಇವರ ಅಭಿಪ್ರಾಯ. ಮುಂದಿನ ಸಂಶೋಧನೆಯಲ್ಲಿ ಚೇತರಿಕೆಯನ್ನು ಇನ್ನಷ್ಟು ವೇಗವಾಗಿಸುವ ಬಗ್ಗೆ ಕೆಲಸ ಮಾಡಲಿದ್ದೇವೆ ಎನ್ನುತ್ತಾರೆ, ಜೆಸ್ಸಿ.

ಒಮ್ಮೆ ಮನಸ್ಸು-ದೇಹಕ್ಕೆ ವಯಸ್ಸಾಗಿಬಿಟ್ಟರೆ ಅದನ್ನು ಮರಳಿ ಪಡೆಯಲು ಅಥವಾ ಕಡಿಮೆ ಮಾಡಲು ಸಾಧ್ಯವೇ ಇಲ್ಲ ಎನ್ನುವ ವಾದಕ್ಕೆ ಜೆಸ್ಸಿ ಅವರ ಸಂಶೋಧನೆ ಉತ್ತರ ನೀಡಿದೆ. ಒತ್ತಡವನ್ನು ಕಡಿಮೆ ಮಾಡಿಕೊಂಡರೆ ಮತ್ತೆ ಎಳೆಯರಾಗಬಹುದು. ತರುಣರಂತೆ ಕಾಣಬಹುದು. ಹಾಗಾಗಿ ಒತ್ತಡವನ್ನು ಹೇಗೆ ನಿರ್ವಹಿಸಬೇಕು ಎನ್ನುವುದಕ್ಕೆ ಪರಿಹಾರ ಕಂಡುಕೊಂಡರೆ ದೀರ್ಘಾಯುಷಿಗಳಾಗಬಹುದು ಎನ್ನುತ್ತಾರೆ, ಸಂಶೋಧಕರು.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

157) On addition of small amount of $KMNO_4$ to concentrated H_2SO_4, a green oily compound is obtained which is highly explosive in nature. Identify the compound from the following-

a) Mn_2O_7 b) MnO_2
c) $MnSO_4$ d) Mn_2O_3

Ans:- a

158) The magnetic nature of elements depends on the presence of unpaired electrons. Identify the configuration of transition element, which shows highest magnetic moment.

a) $3d^7$ b) $3d^5$
c) $3d^8$ d) $3d^2$

Ans:- b

159) When $KMNO_4$ solution is added to oxalic acid solution, the decolourisation is slow in the beginning but becomes instantaneous after some time because

a) CO_2 is formed as the product
b) Reaction is exothermic
c) MnO^-_4 catalyses the reaction
d) Mn^{2+} acts as autocatalyst

Ans:- d

160) There are 14 elements in actinoid series. Which of the following elements does not belong to this series?

a) U b) Np
c) Tm d) Fm

Ans:- C

161) $KMNO_4$ acts as an oxidizing agent in acidic medium. The number of moles of $KMNO_4$ that will be needed to react with one mole of sulphide ions in acidic solution is

a) $\frac{2}{5}$ b) $\frac{3}{5}$
c) $\frac{4}{5}$ d) $\frac{1}{5}$

Ans:- a

162) Interstitial compounds are formed when small atoms are trapped inside the crystal lattice of metals. Which of the following is not the characteristic property of interstitial compounds?

a) They have high melting points in comparison to pure metals
b) They are very hard
c) They retain metallic conductivity
d) They are chemically very reactive.

Ans:- d

163) Which of the following statements is not correct?

a) In its higher oxidation states, manganese forms stable compounds with oxygen and fluorine.
b) Copper liberates hydrogen from acids.
c) Mn^{3+} and Co^{3+} are oxidizing agents in aqueous solution.
d) Ti^{2+} and Cr^{2+} are reducing agents in aqueous solution.

Ans:- b

164) When acidifierd $K_2Cr_2O_7$ solution is added to Sn^{2+} salts then Sn^{2+} changes

a) Sn b) Sn^{3+}
c) Sn^{4+} d) Sn^+

Ans:- C

165) Highest oxidation state of manganese in fluoride is +4(MnF_4) but highest oxidation state in oxides is +7(Mn_2O_7) because –

a) fluorine is more electronegative than oxygen
b) fluorine does not possess d - orbitals
c) fluorine stabilizes lower oxidation state.
d) in covalent compounds fluorine can from single bond only while oxygen forms double bond.

Ans:- d

166) Although Zirconium belongs to 4d transition series and Hafnium to 5d transition series even they show similar physical and chemical properties because

a) both belong to d-block
b) both have same number of electrons
c) both have similar atomic radius.
d) both belong to the same group of the periodic table.

Ans:- C

167) Why is HCl not used to make the medium acidic in oxidation reactions of $KMnO_4$ in acidic medium?

a) Both HCl and $KMnO_4$ act as oxidizing agents.
b) $KMnO_4$ oxidizes HCl into Cl_2 which is also an oxidising agent.
c) $KMnO_4$ is a weaker oxidising agent than HCl
d) $KMnO_4$ acts as a reducing agent in the presence of HCl

Ans:- b

BIOLOGY

MULTIPLE CHOICE QUESTIONS

38. Statement (A): The primary transcript produced in eukaryotes is translated without undergoing any modification or processing.

Statement (B): The hnRNA in humans has exons and introns

(a) Both the statements 'A' and 'B' are correct
(b) Both the statements 'A' and 'B' are wrong
(c) Statement 'B' is correct and statement 'A' is wrong
(d) Statement 'A' is correct and statement 'B' is wrong

Ans:c The primary transcripts contains both introns and exons and are non-functional. Therefore, they undergo a process of splicing for removing introns and joining exons in the proper order. It will further undergo post transcriptional modifications, i.e., capping and tailing. After which a fully processed hnRNA is now called mRNA and thus, transported out of the nucleus for translation.

39. Knee joint is an example for

(a) ball and socket joint (b) hinge joint
(c) Pivot joint (d) gliding joint

Ans:b Knee joint is an example of hinge joint, a type of synovial joint which allows the movement in one plane. While, ball and socket joint is present is found between pectoral girdle and head of humerus (i.e., a shoulder joint), pivot joint is found between atlas and axis and gliding joints is found between carpal bones or tarsal bones.

40. Carefully read the following reactions carried out by nitrogen fixing bacteria. Identify the statement about these equations which is not true

$2NH_3+3O_2 \rightarrow 2NO_2^- + 2H^+ + 2H_2O$..............(A)
$2NO_2^- + O_2 \rightarrow 2NO_3^-$ .... (B)

(a) Step 'A' is carried out by Nitrosomonas or Nitrococcus
(b) Step 'B' is carried out by Nitrobacter
(c) Both the steps 'A' and 'B' can be called nitrification
(d) Both the steps occur only in photoautotrophs

Ans:c

Expln:- The equation given above in the question are the steps and of the process of nitrification, a process through which ammonia is decomposed into nitrates, i.e., ammonia is further oxidised to Produce nitrite and nitrate. Enzymes responsible for nitrification are Nitrosomonas (ammonia to nitrite) and Nitrobacter

41. One of the following causes population explosion

(a) Decrease in death rate. Maternal mortality rate and infant mortality rate
(b) decrease in death rate and increase in maternal mortality rate
(c) decrease in infant mortality rate and increase in death rate
(d) decrease in infant mortality rate and decrease in the number of people in reproductive

Ans: a

Expln:- population represents the total number of individuals of a species living in an area. Expected reasons for the population explosion may be

A rapid decrease in death rate. A reduction in Maternal Mortality Rate (MMR). Decline in Infant Mortality Rate (IMR).

42. Match the vegetative propagules listed under column I with the plants given under column II; choose the appropriate option from the given choices

Column I	Column II
A. Rhizome	1. Agave
B. Offset	2. Bryophyllum
C. Sucker	3. Ginger
D. Leaf buds	4. Chrysanthemum
	5. Eichhornia

	A	B	C	D
(a)	3	4	1	2
(b)	4	5	2	3
(c)	3	5	4	2
(d)	2	1	5	4

Ans: C

Expln:- Ginger is a rhizomes, which serve a means of vegetative reproduction by perennating under unfavourable conditions and producing new aerial shoots during favourable conditions.

Eichhornia is a offset which one internode long runners, which develop tuft of leaves at the apex.

Chrysanthemum is a sucker which arises from the base of the erect shoot, grow horizontally in the soil and then Come out to form new aerial shoots that become independent when suckers break away from the parent plants. And Broyophyllum is an example of leaf bud while are

borne on tubers.

43 .... are the most abundant proteins in the living worlds.

(a) Ribozyme of plants and collagen of animals
(b) RuBisCo of plants and collagen of animals
(c) PEP case of plants and keratin of animals
(d) Alclhol dehygrogenase of plants and melanin of animals

Ans: b

ನೂತನ ಸಂಸತ್ ಭವನಕ್ಕೆ ಅಂತಿಮ ಸ್ಪರ್ಶ



ನವದೆಹಲಿ (ಪಿಟಿಐ): ನೂತನ ಸಂಸತ್ ಭವನ ಕಟ್ಟಡಕ್ಕೆ ಅಂತಿಮ ಸ್ಪರ್ಶ ನೀಡಲಾಗುತ್ತಿದ್ದು ಈ ತಿಂಗಳ ಕೊನೆಗೆ ಸಿದ್ಧವಾಗಲಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಕಟ್ಟಡದ ಸ್ವಚ್ಛತಾ ಕಾರ್ಯ ಆರಂಭವಾಗಿದೆ. ಈ ತಿಂಗಳ ಅಂತ್ಯದೊಳಗೆ ನೂತನ ಸಂಸತ್ ಭವನ ಸಿದ್ಧವಾಗಲಿದೆ. ಆದರೆ, ಉದ್ಘಾಟನೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಬಿಜೆಪಿ ಸರ್ಕಾರಕ್ಕೆ 9 ವರ್ಷಗಳು ತುಂಬಲಿರುವ ಪ್ರಯುಕ್ತ, ಇದೇ 30ರಂದು ಕಟ್ಟಡವನ್ನು ಪ್ರಧಾನಿ ಮೋದಿ ಉದ್ಘಾಟಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರದೀಪ್ ಸಿಂಗ್ ಪುರಿ ಅವರು ಕಟ್ಟಡ ಉದ್ಘಾಟನೆಯ ದಿನಾಂಕ ನಿಗದಿ ಸರ್ಕಾರಕ್ಕೆ ಬಿಟ್ಟ ವಿಚಾರ ಎಂದಿದ್ದರು.

ಸಂಸತ್ ಕಟ್ಟಡ ನಿರ್ಮಾಣ ಎರಡು ವರ್ಷಗಳ ಹಿಂದೆ ಆರಂಭವಾಗಿತ್ತು. ನೂತನ ಕಟ್ಟಡವು ಸೆಂಟ್ರಲ್ ವಿಸ್ತಾದ ಪುನರ್ ಅಭಿವೃದ್ಧಿಯ ಭಾಗವಾಗಿದೆ. ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗೆ ಮೂರು ಕಿಲೋ ಮೀಟರ್ ರಸ್ತೆ ಪುನರುಜ್ಜೀವನಗೊಳಿಸುವುದು, ಕೇಂದ್ರ ಸಚಿವಾಲಯಗಳ ನಿರ್ಮಾಣ, ಪ್ರಧಾನಿಯವರ ಹೊಸ ಕಚೇರಿ ಮತ್ತು ನಿವಾಸ ನಿರ್ಮಾಣ, ಉಪ ರಾಷ್ಟ್ರಪತಿಯವರ ನೂತನ ನಿವಾಸ ನಿರ್ಮಾಣವು ಈ ಯೋಜನೆಯ ಭಾಗವಾಗಿದೆ.

ರಾಷ್ಟ್ರಪತಿ ಭವನ ವೀಕ್ಷಣೆಗೆ ಜೂನ್ 1ರಿಂದ ಅವಕಾಶ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭವನವನ್ನು ಜೂನ್ 1ರಿಂದ ವಾರದಲ್ಲಿ ಆರು ದಿನ ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗುತ್ತದೆ ಎಂದು ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದೆ.

ರಾಷ್ಟ್ರಪತಿ ಭವನದ ಪ್ರವಾಸಕ್ಕೂ ಮಂಗಳವಾರದಿಂದ ಭಾನುವಾರದವರೆಗೆ (ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ) ಬೆಳಿಗ್ಗೆ 9.30ರಿಂದ ಸಂಜೆ 4.30ರತನಕ ಏಳು ಸ್ಲಾಟ್‌ಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ರಾಷ್ಟ್ರಪತಿ ಭವನದ ಮ್ಯೂಸಿಯಂ ಸಂಕೀರ್ಣವೂ ಮಂಗಳವಾರದಿಂದ ಭಾನುವಾರದವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) ಸಂದರ್ಶಕರಿಗೆ ತೆರೆದಿರುತ್ತದೆ. ಸಂದರ್ಶಕರು http://rashtrapatisachivalaya.gov.in/rbtour. ವೆಬ್‌ಸೈಟ್ ಮೂಲಕ ತಮ್ಮ ಸ್ಲಾಟ್ ಕಾಯ್ದಿರಿಸಬಹುದು.

ಪ್ರಾದೇಶಿಕ ಪಕ್ಷಗಳ ಅಜ್ಞಾತ ದೇಣಿಗೆ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿರುವ ಪ್ರಾದೇಶಿಕ ಪಕ್ಷ ಗಳಿಗೆ ಅಜ್ಞಾತ ಮೂಲಗಳಿಂದ ಬಂದ ದೇಣಿಗೆಯು 2021–22ರ ಆರ್ಥಿಕ ವರ್ಷದಲ್ಲಿ ₹887.55 ಕೋಟಿಗೆ ಏರಿಕೆಯಾಗಿದೆ. ಪ್ರಾದೇಶಿಕ ಪಕ್ಷಗಳ ಒಟ್ಟು ದೇಣಿಗೆ ಶೇ 76ರಷ್ಟು ಪ್ರಮಾಣವು ಇಂಥ ಅಜ್ಞಾತ ಮೂಲಗಳಿಂದಲೇ ಬಂದಿದೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ನೀಡಿದೆ.

2020–21ರಲ್ಲಿ ಈ ಪ್ರಮಾಣವು ಶೇ 49.73ರಷ್ಟಿತ್ತು. ಅಂದರೆ, ಪ್ರಾದೇಶಿಕ ಪಕ್ಷಗಳಿಗೆ ಅಜ್ಞಾತ ಮೂಲಗಳಿಂದ ಬಂದ ದೇಣಿಗೆಯು ₹263.93 ಕೋಟಿಯಷ್ಟಿತ್ತು.

₹20 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆ ನೀಡಿದವರ ವಿವರಗಳು ಲಭ್ಯವಿವೆ. ಈ ವಿವರಗಳನ್ನು ಪ್ರಾದೇಶಿಕ ಪಕ್ಷಗಳೇ ಚುನಾವಣಾ ಆಯೋಗಕ್ಕೆ ನೀಡಿರುತ್ತವೆ. ಅಜ್ಞಾತ ಮೂಲಗಳಿಂದ ಬಂದ ದೇಣಿಗೆ ಲೆಕ್ಕವನ್ನು ಪಕ್ಷಗಳು ತಮ್ಮ ಆಡಿಟ್ ವರದಿಯಲ್ಲಿ ನೀಡಿರುತ್ತವೆ. ಆದರೆ, ಈ ವೇಳೆ ಆ ದೇಣಿಗೆಯ ಮೂಲವನ್ನು ತಿಳಿಸಿರುವುದಿಲ್ಲ.

ಅಸ್ಸಾಂ: ಅಪಘಾತದಲ್ಲಿ ಮಹಿಳಾ ಪೊಲೀಸ್ ಸಾವು– ಕೊಲೆ ಶಂಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮದುವೆಯಾಗಬೇಕಿದ್ದ ವ್ಯಕ್ತಿಯನ್ನೇ ವಂಚನೆ ಪ್ರಕರಣದಲ್ಲಿ ಬಂಧಿಸಿ ಕಳೆದ ವರ್ಷ ಸುದ್ದಿಯಾಗಿದ್ದ ಅಸ್ಸಾಂನ ಮಹಿಳಾ ಸಬ್‌ಇನ್‌ಸ್ಪೆಕ್ಟರ್ ಜುನ್ಮೋನಿ ರಭಾ ಅವರು ಸೋಮವಾರ ಮಧ್ಯರಾತ್ರಿ 2 ಗಂಟೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಇದು ಕೊಲೆ ಪ್ರಕರಣ ಎಂದು ಶಂಕಿಸಿರುವ ರಭಾ ಕುಟುಂಬ ಸದಸ್ಯರು, ಸಮರ್ಪಕ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಅಸ್ಸಾಂನ ನಂಗಾವ್ ಜಿಲ್ಲೆಯ ಮೊರಿಕೊಲಾಂಗ್ ಪೊಲೀಸ್ ಠಾಣೆ ಯಲ್ಲಿ ಸಬ್‌ಇನ್‌ಸ್ಪೆಕ್ಟರ್ ಆಗಿ ರಭಾ ಅವರು ನಿಯೋಜನೆಗೊಂಡಿದ್ದರು. ಜೋರ್ಹಾಟ್‌ಗೆ ತೆರಳುವ ವೇಳೆ ಅವರ ಕಾರಿಗೆ ಟ್ರಕ್ ಡಿಕ್ಕಿ ಹೊಡೆದಿದೆ. ಟ್ರಕ್‌ಅನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭ್ರಷ್ಟಾಚಾರ ಮೊಕದ್ದಮೆಯಲ್ಲಿ ರಭಾ ಅವರನ್ನು ಕಳೆದ ವರ್ಷ ಬಂಧಿಸಲಾಗಿತ್ತು. ಜೊತೆಗೆ, ಅವರನ್ನು ಅಮಾನತು ಮಾಡಲಾಗಿತ್ತು. ಕಳೆದ ವರ್ಷ ಜನವರಿಯಲ್ಲಿ ರಭಾ ರಾಜ್ಯದ ಬಿಜೆಪಿ ಶಾಸಕ ಅಮಿಯೊ ಕುಮಾರ್ ಭುಯಾನ್ ಅವರ ವಿರುದ್ಧ ಕಿರುಕುಳದ ಆರೋಪ ಮಾಡಿದ್ದರು.

ರಭಾ ಆರೋಪ ಗಳನ್ನು ಶಾಸಕರು ನಿರಾಕರಿಸಿದ್ದರು. ಬಳಿಕ ರಭಾ ಅವರಿಗೆ ಜಾಮೀನು ನೀಡಲಾಗಿತ್ತು ಮತ್ತು ಅವರ ಅಮಾನತು ಆದೇಶವನ್ನು ಹಿಂಪಡೆಯಲಾಗಿತ್ತು.

ಉದ್ಯೋಗಕ್ಕಾಗಿ ಭೂಮಿ ಹಗರಣ: ಕೆಲ ದಾಖಲೆ ಪತ್ರಗಳ ವಶ

ಒಂಬತ್ತು ಕಡೆಗಳಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿದಂತೆ ಆರ್‌ಜೆಡಿ ಶಾಸಕಿ ಕಿರಣ್ ದೇವಿ ಮತ್ತು ರಾಜ್ಯಸಭಾ ಸದಸ್ಯ ಪ್ರೇಮ್ ಚಂದ್ ಗುಪ್ತಾ ಅವರ ನಿವಾಸ ಸೇರಿ ವಿವಿಧ ರಾಜ್ಯಗಳ 9 ಸ್ಥಳಗಳಲ್ಲಿ ಸಿಬಿಐ ಮಂಗಳವಾರ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಗರಣದಲ್ಲಿ ಇಬ್ಬರು ನಾಯಕರ ಪಾತ್ರ ಇರುವುದು ಬೆಳಕಿಗೆ ಬಂದ ನಂತರ ಶೋಧ ನಡೆಸಲಾಗಿದೆ. ಕೆಲ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಬಿಹಾರದ ಅರಾಹ್ ಮತ್ತು ಪಟ್ನಾದಲ್ಲಿ ಕಿರಣ್ ದೇವಿ ಮತ್ತು ಅವರ ಪತಿ ಅರುಣ್ ಸಿಂಗ್ ಮತ್ತು ಹರಿಯಾಣದ ಗುರುಗ್ರಾಮ ಮತ್ತು ರೇವಾರಿ, ಉತ್ತರ ಪ್ರದೇಶದ ನೋಯ್ಡಾ ಮತ್ತು ದೆಹಲಿಯಲ್ಲಿ ಗುಪ್ತಾ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ತನಿಖಾಧಿಕಾರಿಗಳು ಶೋಧಿಸಿದ್ದಾರೆ.

2004 ರಿಂದ 2009 ರವರೆಗೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ರೈಲ್ವೆ ಸಚಿವರಾಗಿದ್ದಾಗ, ನೇಮಕಾತಿಯ ಮಾನದಂಡ ಮತ್ತು ಕಾರ್ಯವಿಧಾನಗಳನ್ನು ಉಲ್ಲಂಘಿಸಿ ಕೇಂದ್ರ ರೈಲ್ವೆಯಲ್ಲಿ ನೇಮಕಾತಿ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ನೇಮಕಾತಿಗಾಗಿ ಯಾವುದೇ ಜಾಹೀರಾತು ಅಥವಾ ಸಾರ್ವಜನಿಕ ಸೂಚನೆ ನೀಡಲಾಗಿಲ್ಲ. ಆದರೆ, ಪಟ್ನಾದ ಕೆಲವು ನಿವಾಸಿಗಳನ್ನು ಮುಂಬೈ, ಜಬಲ್ಪುರ, ಕೋಲ್ಕತ್ತ, ಜೈಪುರ ಮತ್ತು ಹಾಜಿಪುರದಲ್ಲಿರುವ ವಿವಿಧ ವಲಯ ರೈಲ್ವೆಗಳಲ್ಲಿ ಬದಲಿಯಾಗಿ ನೇಮಿಸಲಾಗಿದೆ ಎಂದು ಆರೋಪಿಸಲಾಗಿದೆ.

ಆರ್‌ಜೆಡಿ ವಕ್ತಾರ ಮೃತ್ಯುಂಜಯ ತಿವಾರಿ ಮಾತನಾಡಿ, ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಕರ್ನಾಟಕದಲ್ಲಿ ಸೋಲಿನ ಬಳಿಕ ವಿರೋಧ ಪಕ್ಷದ ನಾಯಕರ ವಿರುದ್ಧ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳಲು ಆರಂಭಿಸಿದೆ ಎಂದು ಆರೋಪಿಸಿದ್ದಾರೆ. ಬಿಜೆಪಿಯ ವಿರೋಧ ಪಕ್ಷದ ನಾಯಕ ವಿಜಯ ಕುಮಾರ್ ಸಿನ್ಹ ಮಾತನಾಡಿ, ತನಿಖಾ ಸಂಸ್ಥೆಗಳು ತಮ್ಮ ಕರ್ತವ್ಯ ಮಾಡುತ್ತಿವೆ ಮತ್ತು ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳುತ್ತಿವೆ. ಸಿಬಿಐಗೆ ಅವರು (ಆರ್‌ಜೆಡಿ) ಏಕೆ ಭಯಪಡುತ್ತಿದ್ದಾರೆ? ಎಂದಿದ್ದಾರೆ.

‘ಲೈಕಾ’ ಚಿತ್ರ ನಿರ್ಮಾಣ ಸಂಸ್ಥೆ ಮೇಲೆ ಇ.ಡಿ ದಾಳಿ

ಚೆನ್ನೈ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ಇಲ್ಲಿ ಲೈಕಾ ಚಿತ್ರ ನಿರ್ಮಾಣ ಸಂಸ್ಥೆಗೆ ಸೇರಿದ ವಿವಿಧ ಕಚೇರಿಗಳಲ್ಲಿ ತಪಾಸಣೆ ನಡೆಸಿದರು.

ದಾಳಿಯನ್ನು ಮೂಲಗಳು ದೃಢಪಡಿಸಿದ್ದು, ತಪಾಸಣೆ ಕುರಿತ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ. ದಾಳಿಗೆ ಸಂಬಂಧಿಸಿ ದಂತೆ ಚಿತ್ರ ನಿರ್ಮಾಣ ಸಂಸ್ಥೆಯು ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ.

ಮನೋಜ್ ಸೋನಿ ಪ್ರಮಾಣ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ನಾಗರಿಕ ಆಯೋಗದ (ಯುಪಿಎಸ್‌ಸಿ) ಅಧ್ಯಕ್ಷರಾಗಿ ಖ್ಯಾತ ಶಿಕ್ಷಣ ತಜ್ಞ ಮನೋಜ್ ಸೋನಿ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು.




ಸುಭಾಷಿತ

ನಿಮ್ಮ ಮೊದಲ ಪ್ರಯತ್ನದ ಯಶಸ್ಸಿನ ನಂತರ ವಿಶ್ರಮಿಸಬೇಡಿ. ಏಕೆಂದರೆ, ನೀವು ಎರಡನೇ ಪ್ರಯತ್ನದಲ್ಲೇನಾದರೂ ಸೋತರೆ, ಮೊದಲ ಯಶಸ್ಸಿಗೆ ಅದೃಷ್ಟವಷ್ಟೇ ಕಾರಣ ಎಂದು ಹೇಳಲು ಅನೇಕ ಬಾಯಿಗಳು ಕಾಯುತ್ತಿರುತ್ತವೆ.

-ಎ.ಪಿ.ಜೆ. ಅಬ್ದುಲ್ ಕಲಾಂ

ಕರ್ತವ್ಯನಿರತ ವೈದ್ಯರ ಸುರಕ್ಷತೆ ಖಾತರಿಪಡಿಸುವ ಕ್ರಮ ಅಗತ್ಯ

ಕೇರಳದ ಯುವ ವೈದ್ಯೆಯೊಬ್ಬರು ಚಿಕಿತ್ಸೆ ಪಡೆಯಲು ಬಂದಿದ್ದ ವ್ಯಕ್ತಿಯಿಂದಲೇ ಹಲ್ಲೆಗೊಳಗಾಗಿ ಸಾವಿಗೀಡಾದ ಪ್ರಕರಣ, ಕರ್ತವ್ಯನಿರತ ವೈದ್ಯರು ದೈನಂದಿನ ಕೆಲಸದಲ್ಲಿ ಎಂತಹ ಅಪಾಯವನ್ನು ಎದುರಿಸುತ್ತಾರೆ ಎನ್ನುವುದಕ್ಕೆ ಜ್ವಲಂತ ಉದಾಹರಣೆ. ಕಾಲಿಗೆ ಆಗಿದ್ದ ಗಾಯಕ್ಕೆ ಆ ವೈದ್ಯೆಯು ಮುಲಾಮು ಸವರಿ, ಪಟ್ಟಿಯನ್ನು ಕಟ್ಟುತ್ತಿದ್ದಾಗ, ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯೇ ಕತ್ತರಿ ಹಾಗೂ ಶಸ್ತ್ರಚಿಕಿತ್ಸೆಯಲ್ಲಿ ಬಳಕೆಯಾಗುವ ಕಿರುಚಾಕುವಿನಿಂದ ಅವರ ಮೇಲೆ ದಾಳಿ ಮಾಡಿದ್ದ. ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿದ್ದ ವಂದನಾ ದಾಸ್, ಈ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಕೊನೆಯುಸಿರು ಎಳೆಯುವಂತಾಯಿತು. ದಾಳಿ ನಡೆಸಿದ ವ್ಯಕ್ತಿಯು ಕುಟುಂಬದ ಸದಸ್ಯರೊಂದಿಗೆ ಹೊಡೆದಾಡಿಕೊಂಡಿದ್ದ, ಗಾಯಗೊಂಡಿದ್ದ ಆತನನ್ನು ಪೊಲೀಸರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆತಂದಿದ್ದರು. ಮೊದಲೇ ಹೊಡೆದಾಡಿಕೊಂಡಿದ್ದ, ಮೇಲಾಗಿ ಕುಡಿದ ಮತ್ತಿನಲ್ಲಿದ್ದ ಈ ವ್ಯಕ್ತಿಯನ್ನು ಚಿಕಿತ್ಸೆಗೆ ಕರೆತಂದಾಗ ಪೊಲೀಸರು ಹೆಚ್ಚು ಜಾಗರೂಕರಾಗಿ ಇರಬೇಕಿತ್ತು. ಆದರೆ, ಚಿಕಿತ್ಸಾ ಕೊಠಡಿಯಲ್ಲಿ ಆತ ಮತ್ತೆ ಪುಂಡಾಟ ತೋರಿಸತೊಡಗಿದಾಗ ಪೊಲೀಸರಿಗೆ ಆತನನ್ನು ಬೇಗ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅಷ್ಟೊತ್ತಿಗೆ ದೊಡ್ಡ ಅನಾಹುತ ನಡೆದುಹೋಗಿತ್ತು. 'ವೈದ್ಯೆಯ ಮೇಲೆ ಆ ವ್ಯಕ್ತಿಯಿಂದ ದಾಳಿ ನಡೆಯುವ ಯಾವ ಸೂಚನೆಯೂ ಇರಲಿಲ್ಲ. ಏಕಾಏಕಿ ಆತನಿಂದ ಆಕ್ರಮಣ ನಡೆದಿದ್ದರಿಂದ ತಕ್ಷಣ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ' ಎನ್ನುವ ಪೊಲೀಸರ ವಾದವನ್ನು ಒಪ್ಪಲಾಗದು. ಆ ವ್ಯಕ್ತಿಯು ಪೊಲೀಸ್ ವಶದಲ್ಲೇ ಇದ್ದ, ಸ್ಥಳದಲ್ಲಿ ಪೊಲೀಸರು ಹಾಜರಿದ್ದರೂ ವೈದ್ಯೆಯ ಮೇಲಿನ ದಾಳಿಯನ್ನು ತಪ್ಪಿಸಲು ಸಾಧ್ಯವಾಗದಿರುವುದು ದುರದೃಷ್ಟಕರ ಸಂಗತಿ.



ವೈದ್ಯರು ಅಪಾಯ ಎದುರಿಸದಂತೆ ತಡೆಗಟ್ಟುವಲ್ಲಿ, ಇಡೀ ದೇಶಕ್ಕೆ ಅನ್ವಯವಾಗುವಂತೆ ವೈದ್ಯಕೀಯ ವೃತ್ತಿಪರರ ಸುರಕ್ಷತಾ ಕಾಯ್ದೆಯೊಂದನ್ನು ತರುವ ಅಗತ್ಯವಿದೆ

ವೈದ್ಯರು, ನರ್ಸ್‌ಗಳು ಹಾಗೂ ಇತರ ವೈದ್ಯಕೀಯ ಸಿಬ್ಬಂದಿ ಕರ್ತವ್ಯನಿರತರಾಗಿದ್ದಾಗ ರೋಗಿಗಳ ಸಂಬಂಧಿಗಳಿಂದ ಹೀಗೆ ಅಪಾಯ ಎದುರಿಸುವ ಪ್ರಸಂಗಗಳು ಆಗಾಗ ಘಟಿಸುತ್ತಲೇ ಇರುತ್ತವೆ. ಸಾಮಾನ್ಯವಾಗಿ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ದೂರಿಯೇ ಇಂತಹ ದಾಳಿಗಳು ನಡೆಯುತ್ತವೆ. ರೋಗಿಗಳ ಅಪೇಕ್ಷೆ ವಾಸ್ತವದಿಂದ ಮಹಾ ವೈದ್ಯರು ಕಿರಿಕಿರಿ ಅನುಭವಿಸುವುದೂ ಇದೆ. ಹಿಂದಿನ ದಶಕಗಳಿಗೆ ಹೋಲಿಸಿದರೆ ವೈದ್ಯಕೀಯ ವಿಜ್ಞಾನ ತುಂಬಾ ಮುಂದುವರಿದಿದೆ. ಅದರ ಪರಿಣಾಮವಾಗಿ ಮಾನವನ ಗುಣಮಟ್ಟದ ಜೀವಿತಾವಧಿಯೂ ಹೆಚ್ಚಾಗಿದೆ. ಆದರೆ, ಪ್ರತಿಯೊಂದು ಜೀವಕ್ಕೂ ಒಂದುದಿನ ಕೊನೆಯಿದೆ ಎನ್ನುವುದು ಪ್ರಕೃತಿಯ ನಿಯಮ. ಇದನ್ನು ಅರಿಯದೆ, ತಮಗೆ ಪ್ರೀತಿಪಾತ್ರರಾದವರು ಅಸುನೀಗಿದರು ಎಂಬ ಕಾರಣಕ್ಕಾಗಿ, ಚಿಕಿತ್ಸೆ ನೀಡಿದ ವೈದ್ಯರ ಮೇಲೆ ಸಿಟ್ಟು ತೋರಿಸುವುದು ಸರ್ವಥಾ ಸರಿಯಲ್ಲ. ವೈದ್ಯರಿಗೆ ತಮ್ಮ ಸುರಕ್ಷೆ ಕುರಿತು ಖಾತರಿ ಇಲ್ಲದ ಹೊರತು ಅವರು ಮುಕ್ತವಾಗಿ ಕರ್ತವ್ಯ ನಿರ್ವಹಿಸುವುದು, ಇಲ್ಲಿ ವೈದ್ಯಕೀಯ ಸೇವೆ ಸಲ್ಲಿಸುವುದು ಕಷ್ಟ. ಭಾರತೀಯ ವೈದ್ಯಕೀಯ ಸಂಘದ ವರದಿ ಪ್ರಕಾರ, ಶೇ 75ರಷ್ಟು ವೈದ್ಯರು ಕರ್ತವ್ಯ ನಿರ್ವಹಿಸುವಾಗ ಅಪಾಯ ಎದುರಿಸುತ್ತಾರೆ. ವೈದ್ಯರು ಮತ್ತು ಆರೈಕೆ ಮಾಡುವವರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳುವುದು ಸರ್ಕಾರ ಹಾಗೂ ಸಮುದಾಯದ ಹೊಣೆ. ಸೋಂಕುಪೀಡಿತರು ಹಾಗೂ ಮಾನಸಿಕ ಸಮಸ್ಯೆಗಳಿಂದ ಬಳಲುವ ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಅವರು ತಮ್ಮ ಜೀವವನ್ನೇ ಅಪಾಯಕ್ಕೆ ಒಡ್ಡಿಕೊಳ್ಳುತ್ತಾರೆ ಎನ್ನುವುದನ್ನು ಮರೆಯುವಂತಿಲ್ಲ. ಕೇವಲ ಒಂದು ವರ್ಷದಲ್ಲಿ ಕೇರಳ ರಾಜ್ಯವೊಂದರಲ್ಲೇ ವೈದ್ಯರ ಮೇಲೆ 138 ಹಲ್ಲೆ ಪ್ರಕರಣಗಳು ನಡೆದಿವೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕೆಂದು ಕೇರಳ ಹೈಕೋರ್ಟ್ ಈ ಹಿಂದೆಯೇ ಅಲ್ಲಿನ ಸರ್ಕಾರಕ್ಕೆ ಸೂಚನೆ ನೀಡಿದೆ. ಹೀಗಿದ್ದೂ ಇಂತಹ ಅಹಿತಕರ ಘಟನೆಗಳನ್ನು ತಡೆಯಲು ಸಾಧ್ಯವಾಗಿಲ್ಲ. ಇದು ನಮ್ಮ ವ್ಯವಸ್ಥೆ ತಲುಪಿರುವ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ವೈದ್ಯಕೀಯ ವೃತ್ತಿಪರರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ಅನುವಾಗುವಂತೆ 'ಆಸ್ಪತ್ರೆ ಸುರಕ್ಷಾ ಕಾಯ್ದೆ'ಗೆ ಅಗತ್ಯ ತಿದ್ದುಪಡಿ ತರುವುದಕ್ಕಾಗಿ ಕೇರಳ ಸರ್ಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಲು ನಿರ್ಧರಿಸಿದೆ. ಈ ಕಾಯ್ದೆಯು ಇಂತಹ ದಾಳಿಗಳ ವಿರುದ್ಧ ಎಷ್ಟು ಕಠಿಣ ಶಿಕ್ಷೆ ವಿಧಿಸಲು ಅನುವು ಮಾಡಿಕೊಡುತ್ತದೆ. ಕಾನೂನಿನ ಮೂಲಕ ಮತ್ತಷ್ಟು ಬಿಗಿಗೊಳಿಸುವುದರ ಜತೆಗೆ, ಪ್ರಮುಖ ಆಸ್ಪತ್ರೆಗಳಲ್ಲಿ ಪೊಲೀಸ್ ಹೊರಠಾಣೆಗಳನ್ನು ತೆರೆಯಲೂ ಅಲ್ಲಿನ ಸರ್ಕಾರ ನಿರ್ಧರಿಸಿದೆ. ಕಾನೂನನ್ನು ಬಲಪಡಿಸಿದರಷ್ಟೇ ಸಾಲದು, ಜನರಲ್ಲಿ ಜಾಗೃತಿಯನ್ನು ಮೂಡಿಸುವ ಅಗತ್ಯವೂ ಇದೆ. ವೈದ್ಯರ ಮೇಲಿನ ಹಲ್ಲೆಗಳು ಕೇರಳ ರಾಜ್ಯಕ್ಕಷ್ಟೇ ಸೀಮಿತವಾಗಿಲ್ಲ. ಕರ್ನಾಟಕವೂ ಸೇರಿದಂತೆ ದೇಶದ ಎಲ್ಲ ಭಾಗಗಳಲ್ಲೂ ಇಂತಹ ಪ್ರಕರಣಗಳು ನಡೆಯುತ್ತವೆ. ಹೈದರಾಬಾದ್‌ನಲ್ಲೂ ಇತ್ತೀಚೆಗೆ ವೈದ್ಯರ ಮೇಲೆ ಹಲ್ಲೆ ನಡೆದಿರುವ ಪ್ರಕರಣ ಕಣ್ಮುಂದೆಯೇ ಇದೆ. ರಾಜ್ಯದಲ್ಲೂ 'ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲಿನ ಹಿಂಸಾಚಾರ ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಕಾಯ್ದೆ-2009' ಜಾರಿಯಲ್ಲಿದೆ. ಆದರೆ, ವೈದ್ಯರು ಅಪಾಯ ಎದುರಿಸುವುದನ್ನು ತಡೆಯುವಲ್ಲಿ, ಇಡೀ ದೇಶಕ್ಕೆ ಅನ್ವಯವಾಗುವಂತೆ ವೈದ್ಯಕೀಯ ವೃತ್ತಿಪರರ ಸುರಕ್ಷತಾ ಕಾಯ್ದೆಯೊಂದನ್ನು ತರುವ ಅಗತ್ಯವಿದೆ ಎನ್ನುವುದನ್ನು ಇಂತಹ ಪ್ರಕರಣಗಳು ಒತ್ತಿ ಹೇಳುತ್ತವೆ.

ದಿನದ ಟ್ವೀಟ್


ಸಿಗಲಿ ಸಮಯಾವಕಾಶ



ಕರ್ನಾಟಕದ ಚುನಾವಣಾ ಫಲಿತಾಂಶ ಬಂದು ಇನ್ನೂ 72 ಗಂಟೆಗಳೂ ಆಗಿಲ್ಲ. ಆದರೆ ನಾವು, ಕಣ್ಣು ಮಿಟುಕಿಸುವಷ್ಟರಲ್ಲಿ ಮುಖ್ಯಮಂತ್ರಿ ಹೆಸರು ಘೋಷಣೆಯಾಗಬೇಕೆಂದು ನಿರೀಕ್ಷಿಸುತ್ತೇವೆ. ರಾಜಕಾರಣ ಎಂದರೆ ಇನ್‌ಸ್ಟಂಟ್ ಕಾಫಿಯಂತಲ್ಲ. ಬಿಜೆಪಿಯು ಉತ್ತರಪ್ರದೇಶದಲ್ಲಿ 2017ರಲ್ಲಿ ಯೋಗಿ ಆದಿತ್ಯನಾಥ್ ಅವರನ್ನು ಸಿ.ಎಂ ಆಗಿ ಆಯ್ಕೆ ಮಾಡಲು ಒಂದು ವಾರಕ್ಕೂ ಹೆಚ್ಚು ಕಾಲ ಚರ್ಚೆ- ಸಮಾಲೋಚನೆಗಳನ್ನು ನಡೆಸಿತ್ತು. ಅದರಿಂದ ಏನಾಯಿತೆಂಬುದು ನಮ್ಮೆಲ್ಲರಿಗೂ ಗೊತ್ತಿದೆ! ಕಾಂಗ್ರೆಸ್ ಗೆಲ್ಲುವುದೇ ಅಪರೂಪವಾಗಿದೆ. ಆದ್ದರಿಂದ, ಖಂಡಿತವಾಗಿಯೂ ಅವರೂ ಒಂದಷ್ಟು ಸಮಯಾವಕಾಶ ಪಡೆಯಲು ಅರ್ಹರು! ಎಲ್ಲ ಪಕ್ಷಗಳಲ್ಲಿಯೂ 'ಹೈಕಮಾಂಡ್ ಸಂಸ್ಕೃತಿ'! ಒಪ್ಪುತ್ತೀರಿ ಅಲ್ಲವೇ?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಸರ್ಕಾರ ನೇಮಿಸಿರುವ ಸಮಿತಿಯು ಬಿಜೆಪಿ ಸಂಸದನ ವಿರುದ್ಧ ಆಡಿಯೊ ಮತ್ತು ವಿಡಿಯೊ ಸಾಕ್ಷ್ಯಗಳನ್ನು ಕೇಳಿದೆ ಎಂದು ಪ್ರತಿಭಟನಾನಿರತ ಕುಸ್ತಿಪಟುಗಳು ದೂರಿದ್ದಾರೆ. 'ಎಲ್ಲವನ್ನೂ ಆತುರಾತುರವಾಗಿ ಮುಗಿಸಲು ಅವರು ನಮ್ಮ ಮೇಲೆ ಒತ್ತಡ ಹೇರುತ್ತಿದ್ದರು. ನಾವು ಹೇಳಿದ್ದನ್ನು ಒಂದು ಕಿವಿಯಲ್ಲಿ ಕೇಳಿಸಿಕೊಂಡು ಮತ್ತೊಂದು ಕಿವಿಯಲ್ಲಿ ಬಿಡುವಂತೆ ಕಂಡುಬಂದರು' ಎಂದಿದ್ದಾರೆ. ಇದು ಸಮಿತಿಯ ಒಂದು ಪ್ರಹಸನವಷ್ಟೇ.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ — ಭಾನುವಾರ, 17-5-1998

• ಅರಣ್ಯ ಲೂಟಿ: ತನಿಖೆಯ ಭರವಸೆ

ಬೆಂಗಳೂರು, ಮೇ 16– ಕೊಡಗು ಜಿಲ್ಲೆಯ ರಕ್ಷಿತ ಅರಣ್ಯ ಪ್ರದೇಶದಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ಅರಣ್ಯ ಲೂಟಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ತಪ್ಪಿತಸ್ಥರಿಂದ ಮರಗಳ ಬಾಬ್ತು ಹಣವಾದ 1.78 ಕೋಟಿ ರೂಪಾಯಿಗಳನ್ನು ವಸೂಲು ಮಾಡಲು ಸೂಚನೆ ನೀಡಿರುವುದಾಗಿಯೂ, ಅಗತ್ಯ ಬಿದ್ದರೆ ಸಿಓಡಿ ತನಿಖೆ ನಡೆಸುವುದಾಗಿಯೂ ಅರಣ್ಯ ಸಚಿವ ಡಿ. ಮಂಜುನಾಥ್ ಅವರು ಇಂದು ವಿಧಾನಮಂಡಲದ ಉಭಯ ಸದನಗಳಲ್ಲೂ ಭರವಸೆ ನೀಡಿದರು.

ಕೇರಳದ ಪೊಲೀಸ್ ಅಧಿಕಾರಿಯೊಬ್ಬರ ಪತ್ನಿ ಸುಳ್ಳು ದಾಖಲೆ ಸೃಷ್ಟಿಸಿ ಅತಿಕ್ರಮಿಸಿಕೊಂಡಿದ್ದ 38.5 ಎಕರೆ ಅರಣ್ಯ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದ ಸಚಿವರು, ಈ ಪ್ರಕರಣದಲ್ಲಿ ಶಾಮೀಲಾಗಿರುವ ಭೂಮಾಪನ ಹಾಗೂ ಕಂದಾಯ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

50 ವರ್ಷಗಳ ಹಿಂದೆ — ಗುರುವಾರ, 17-5-1973

• ಆಹಾರ ಕೊರತೆ ಕುರಿತು ಉತ್ಪ್ರೇಕ್ಷಿತ ಪ್ರಚಾರ ಅನಗತ್ಯ: ಪ್ರಧಾನಿ

ನವದೆಹಲಿ, ಮೇ 16– ಆಹಾರಧಾನ್ಯ ಮತ್ತಿತರ ಅಗತ್ಯ ವಸ್ತುಗಳ ಅಭಾವದ ಬಗ್ಗೆ ಉತ್ಪ್ರೇಕ್ಷೆಯಿಂದ ಕೂಡಿದ ಪ್ರಚಾರ ಮಾಡುತ್ತಿರುವುದರ ವಿರುದ್ಧ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಎಚ್ಚರಿಕೆ ನೀಡಿದರು.

ಬಜೆಟ್ ಅಧಿವೇಶನದ ಅಂತ್ಯದಲ್ಲಿ ಕಾಂಗ್ರೆಸ್ ಸಂಸತ್ ಪಕ್ಷದ ಸರ್ವ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡಿದ ಇಂದಿರಾ ಗಾಂಧಿ ಅವರು, ಇಂಥ ಪ್ರಚಾರ ಮುಂದುವರಿದಲ್ಲಿ ದೇಶದಲ್ಲಿ ಮೂರು ವರ್ಷಗಳ ಹಿಂದೆ ಇದ್ದಂಥ ಗೊಂದಲ ಮತ್ತು ಅಭದ್ರತೆ ಉಂಟಾಗುವುದೆಂದು ತಿಳಿಸಿದರು.

ಮೋದಿ 'ಶೋ'ಗೆ ಸೋಲದ ಜನ, ಕಾಂಗ್ರೆಸ್ ಮುಂದಿದೆ ಸವಾಲು

ಬೆಲೆ ಏರಿಕೆ, ಭ್ರಷ್ಟಾಚಾರವೇ 'ಮುಳುಗುತಾಣ'



ಗತಿಬಿಂಬ

ವೈ.ಗ.ಜಗದೀಶ್

ಭ್ರಷ್ಟಾಚಾರ ವಿರುದ್ಧದ ಕೋಪ, ಬೆಲೆ ಏರಿಕೆಯ ತಾಪ ತಡೆಯಲಾಗದೇ ಕಂಗೆಟ್ಟಿದ್ದ ನಾಡಿನ ಜನ ಬಿಜೆಪಿಗೆ ಹಿಡಿಶಾಪ ಹಾಕಿದ್ದಾರೆ. ಬಣ್ಣಬಣ್ಣದ ದಿರಿಸು ತೊಟ್ಟ ಪ್ರಧಾನಿ ನರೇಂದ್ರ ಮೋದಿಯವರು ಪಕ್ಷದ ಕಾರ್ಯಕರ್ತರಿಂದ ತೂರಿಸಿಕೊಂಡ ಟನ್‌ಗಟ್ಟಲೇ ಹೂವು, ಕೇಸರಿ ಪಾಲಿಗೆ ಮುಳ್ಳಾಗಿ ಕಾಡಿದೆ. ನಿತ್ಯದ ಬದುಕನ್ನು ಸಂಕಷ್ಟಕ್ಕೆ ದೂಡಿರುವ ಎಲ್‌ಪಿಜಿ ಸಿಲಿಂಡರ್ ದರ, ಏರುತ್ತಲೇ ಇರುವ ದಿನಸಿ ವಸ್ತುಗಳ ಬೆಲೆಯನ್ನು ನಿಯಂತ್ರಿಸಲಾಗದ ಕೇಂದ್ರ ಸರ್ಕಾರದ ವಿರುದ್ಧದ ಜನರ ಸಿಟ್ಟು, ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯ ಜಂಘಾಬಲವನ್ನೇ ಉಡುಗಿಸಿದೆ.

'ಚಾಣಕ್ಯ' ಎಂದು ಬಿಂಬಿಸಿಕೊಂಡ ಗೃಹ ಸಚಿವ ಅಮಿತ್ ಶಾ, ಜನರನ್ನು ಪ್ರಭಾವಿಸಿ ಮತಯಂತ್ರಗಳಲ್ಲಿ ಕಮಲದ ಗುಂಡಿ ಒತ್ತುವಂತೆ ಮಾಡಬಲ್ಲ 'ಶಕ್ತಿಮಾನ್' ಎಂದೇ ಬಣ್ಣಿಸಲಾಗುವ ಮೋದಿಯವರ ವರ್ಚಸ್ಸು ಈ ಚುನಾವಣೆಯಲ್ಲಿ ಕೆಲಸವನ್ನೇ ಮಾಡಿಲ್ಲ. ಕರ್ನಾಟಕವನ್ನು ಹೆಬ್ಬಾಗಿಲು ಮಾಡಿಕೊಂಡು ದಕ್ಷಿಣದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಿಸುವ ಕನಸು ಕಟ್ಟಿದ್ದ ಮೋದಿ–ಶಾ ಜೋಡಿಗೆ, ಬಿಜೆಪಿಯನ್ನು ದಕ್ಷಿಣದಿಂದಲೇ ಪೇರಿ ಕೀಳಿಸುವಂತಹ ಫಲಿತಾಂಶವನ್ನು ನಾಡಿನ ಜನ ನೀಡಿದ್ದಾರೆ. ಹಿಂದುತ್ವ, ಕೋಮುದ್ವೇಷ, ಕುಟಿಲ ತಂತ್ರಗಾರಿಕೆಗಳನ್ನು ಉತ್ತರ ಪ್ರದೇಶ, ಗುಜರಾತಿಗೆ ಇಟ್ಟುಕೊಳ್ಳಿ, ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರುನಾಡಿನಲ್ಲಿ ನಿಮ್ಮ ಆಟ ನಡೆಯದು ಎಂಬ ಸಂದೇಶವನ್ನೂ ರವಾನಿಸಿದ್ದಾರೆ.

ತಾವೇ ಚುನಾವಣೆಗೆ ನಿಂತಂತೆ ಬಿಂಬಿಸಿಕೊಂಡ ನರೇಂದ್ರ ಮೋದಿಯವರು, ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಸಾಧನೆಯನ್ನು ಒಮ್ಮೆಯೂ ತಮ್ಮ ಭಾಷಣದಲ್ಲಿ ಉಲ್ಲೇಖಿಸಲಿಲ್ಲ. ಬಹುಶಃ ಅವರು ಹೇಳಿಕೊಳ್ಳುವಂತಹ ಸಾಧನೆ ತೋರಿಲ್ಲವೆಂದು ಮೋದಿಯವರಿಗೂ ಅನಿಸಿದ್ದೀತು. ನಾಲ್ಕು ವರ್ಷ ಆಳಿದ್ದು ಡಬಲ್ ಎಂಜಿನ್ ಸರ್ಕಾರ ಎಂಬುದು ಗೊತ್ತಿದ್ದರೂ ಮತ್ತೊಮ್ಮೆ ಡಬಲ್ ಎಂಜಿನ್ ಸರ್ಕಾರಕ್ಕೆ ಅವಕಾಶ ಕೊಡಿ ಎಂದು ಕರೆ ನೀಡಿದರೆ ವಿನಾ, ಎಂಜಿನ್ ಏನು ಕೊಟ್ಟಿತೆಂದು ಹೇಳಲು ಅವರಲ್ಲಿ ದಾಖಲೆಗಳೇ ಇರಲಿಲ್ಲ.

'₹ 1 ಕೊಟ್ಟರೆ 15 ಪೈಸೆಯಷ್ಟೇ ಜನರಿಗೆ ತಲುಪುತ್ತದೆ' ಎಂದು ರಾಜೀವ್ ಗಾಂಧಿ ಅವರು 30 ವರ್ಷಗಳ ಹಿಂದೆ ಹೇಳಿದ್ದ ಮಾತನ್ನು ಹತ್ತು ಹಲವು ಬಾರಿ ಪುನರುಚ್ಚರಿಸಿದರು. ಆದರೆ ಇಲ್ಲಿನ ಸರ್ಕಾರದ ಅವಧಿಯ ಭ್ರಷ್ಟಾಚಾರ 'ಸೀದಾರುಪಯ್ಯಾ' ಟೀಕೆಯನ್ನೂ ಮೀರಿತ್ತು. ತಮ್ಮದೇ ಪಕ್ಷದ ನೇತೃತ್ವವಿದ್ದ ರಾಜ್ಯ ಸರ್ಕಾರವನ್ನು ನಿಯಂತ್ರಿಸುವ ಅಧಿಕಾರವಿದ್ದರೂ ನಾಲ್ಕು ವರ್ಷ ಸುಮ್ಮನಿದ್ದ ಮೋದಿಯವರಿಗೆ ಈ ವಿಷಯದಲ್ಲಿ ಹೇಳಲು ಪದಗಳೇ ಇರಲಿಲ್ಲ. ಹೀಗಾಗಿಯೇ, ಮೋದಿಯವರು ಅತ್ತ ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದಾಗ, ಇತ್ತ ರಾಜ್ಯದ ಶೇ 43ರಷ್ಟು ಮತದಾರರು 'ಈ ಬಾರಿ ನಿರ್ಧಾರ, ಬಹುಮತದ ಕಾಂಗ್ರೆಸ್ ಸರ್ಕಾರ' ಎಂದೇ ನಿಶ್ಚಯಿಸಿಬಿಟ್ಟರು. ಭಾರಿ ಬಹುಮತವನ್ನು ಜನ ಕಾಂಗ್ರೆಸ್‌ಗೆ ನೀಡಿದ್ದಾರೆ. ಭ್ರಷ್ಟಾಚಾರ ಹಾಗೂ ಬೆಲೆಯೇರಿಕೆಯ ಬೆಂಕಿಯಿಂದ ಜನರನ್ನು ಪಾರು ಮಾಡದೇ ಇದ್ದರೆ, ಬರುವ ಲೋಕಸಭಾ ಚುನಾವಣೆಯಲ್ಲಿ ಅಧಿಕಾರಾರೂಢ ಪಕ್ಷಕ್ಕೆ ಅದೇ ಬೆಂಕಿಯ ಬಿಸಿ ಚೆನ್ನಾಗಿ ತಟ್ಟದೇ ಇರದು.

2013ರ ಚುನಾವಣೆಗೆ ಮುನ್ನ, ಈಗಿನ ಮಾದರಿಯಲ್ಲೇ ನಡೆದಿದ್ದ ಆಗಿನ ಸರ್ಕಾರದ ಅವಾಂತರಗಳನ್ನು ಜನ ನೋಡಿದ್ದರು. ಅದಕ್ಕಾಗಿಯೇ, ಆ ಚುನಾವಣೆಯಲ್ಲಿ ಅಧಿಕಾರವನ್ನು ಚಿನ್ನದ ತಟ್ಟೆಯಲ್ಲಿ ಇರಿಸಿ ಸಿದ್ದರಾಮಯ್ಯನವರಿಗೆ ಕೊಟ್ಟರು. ಅವರು ಅಧಿಕಾರಕ್ಕೆ ಬಂದ ಅಲ್ಪಕಾಲದಲ್ಲೇ ಲೋಕಾಯುಕ್ತದ ಅಧಿಕಾರವನ್ನು ವಿಭಜಿಸಿ, ತನಿಖಾ ಸಂಸ್ಥೆಯನ್ನು ದುರ್ಬಲಗೊಳಿಸಿದರು. ಸರ್ಕಾರದ ಮೂಗಿನ ನೇರಕ್ಕೆ ನಡೆಯುವ ಭ್ರಷ್ಟಾಚಾರ ನಿಗ್ರಹ ದಳವನ್ನು ರಚಿಸಿದರು. ಇದರಿಂದಾಗಿ, ಕಾಂಗ್ರೆಸ್ ನೇತೃತ್ವದ ಸರ್ಕಾರದ ಭ್ರಷ್ಟಾಚಾರದ ಮುಖವೇ ಜನರಿಗೆ ಸ್ಪಷ್ಟವಾಗಿ ಗೋಚರಿಸಲಿಲ್ಲ. ಸರ್ಕಾರಿ ನೇಮಕಾತಿಯಲ್ಲಿ ಪಾರದರ್ಶಕತೆ ತರುವ ಬದಲಿಗೆ, ಯಾರ ವಿರುದ್ಧ ಉಗ್ರವಾದ ಟೀಕೆಗಳು ಕೇಳಿಬರುತ್ತಿದ್ದವೋ ಅಂತಹವರಿಗೇ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನ ಕೊಟ್ಟರು. ಪೊಲೀಸ್ ಇಲಾಖೆಯನ್ನು ನಡೆಸುವ ಹೊಣೆಯನ್ನು ಗೃಹ ಸಚಿವರ ಬದಲಿಗೆ ನಿವೃತ್ತ ಅಧಿಕಾರಿಯೊಬ್ಬರು ಪರೋಕ್ಷವಾಗಿ ನಿರ್ವಹಿಸಿ 'ಸೂಪರ್ ಹೋಮ್ ಮಿನಿಸ್ಟರ್' ಎನ್ನಿಸಿಕೊಂಡರು. ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾನಿಧಿಯಂತಹ ಹಲವು ಜನಪರ ಯೋಜನೆಗಳನ್ನು ಕೊಟ್ಟರೂ ಅವ್ಯಾವುವೂ ಚುನಾವಣೆಯಲ್ಲಿ ಕೈಹಿಡಿಯದಿದ್ದುದು ಇತಿಹಾಸ.

ಈ ಚುನಾವಣೆಯಲ್ಲಿ ಜನ ಕಾಂಗ್ರೆಸ್‌ಗೆ ಮತ ಹಾಕಿರುವುದು ಬೆಲೆಯೇರಿಕೆಯನ್ನು ತಾಳಲಾಗದ ಸಂಕಟಕ್ಕೆ. ಕಾಂಗ್ರೆಸ್ ನೀಡಿದ ಐದು 'ಗ್ಯಾರಂಟಿ'ಗಳು ತಮ್ಮ ದಿನನಿತ್ಯದ ತಾಪತ್ರಯಗಳನ್ನು ನಿವಾರಿಸಬಹುದೆಂಬ ಕಾರಣಕ್ಕೆ. 'ಗ್ಯಾರಂಟಿ' ಯೋಜನೆಗಳನ್ನು ಜಾರಿ ಮಾಡುವ ಸವಾಲಿನ ಜತೆಗೆ, ಅವು ಅರ್ಹ ಕುಟುಂಬಗಳಿಗೆ ಮಾತ್ರ ತಲುಪುವಂತೆ ನೋಡಿಕೊಳ್ಳಬೇಕಾದ ಹೊಣೆಯೂ ಹೊಸ ಸರ್ಕಾರದ ಹೆಗಲೇರಿದೆ. ಪೆಟ್ರೋಲ್, ಡೀಸೆಲ್ ಮೇಲೆ ವಿಧಿಸುತ್ತಿರುವ ತೆರಿಗೆಯನ್ನು ಕಡಿತಗೊಳಿಸಿ ಜನರ ಬದುಕನ್ನು ಹಸನುಗೊಳಿಸಬೇಕಿದೆ. ಬೆಲೆ ಏರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ತಡೆಯಲಾಗದೇ ಇದ್ದರೂ ಆಹಾರ ವಸ್ತುಗಳನ್ನು ಕಳ್ಳ ದಾಸ್ತಾನು ಮಾಡಿ, ಬೆಲೆ ಏರಿಕೆ, ಇಳಿಕೆ ಮಾಡುವ ಮಾರುಕಟ್ಟೆಯ ಕೈವಾಡವನ್ನು ಹತ್ತಿಕ್ಕಬೇಕು. ಆಗ ಜನರಿಗೆ ಬೇಕಾಗುವ ನಿತ್ಯದ ವಸ್ತುಗಳ ಬೆಲೆ ಕಡಿಮೆಯಾಗಬಹುದು.



ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಒಂದು ವರ್ಷದಲ್ಲಿ ಭರ್ತಿ ಮಾಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಲಂಚವಿಲ್ಲದೆ ಕರ್ನಾಟಕದಲ್ಲಿ ಉದ್ಯೋಗ ಸಿಗಲಿದೆ ಎಂಬ ವಾತಾವರಣವನ್ನು ಸೃಷ್ಟಿ ಮಾಡಿದರೆ ಮಾತ್ರ ನಿರುದ್ಯೋಗಿಗಳಲ್ಲಿ ಭರವಸೆ ಮೂಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ, ವಿವಿಧ ಸರ್ಕಾರಿ ಕಚೇರಿಗಳಲ್ಲಿನ ಲಂಚಗುಳಿತನದಿಂದಾಗಿ ಜನ ಬೇಸತ್ತು ಹೋಗಿದ್ದಾರೆ. ತಹಶೀಲ್ದಾರ್, ಸಬ್ ರಿಜಿಸ್ಟ್ರಾರ್, ಆರ್‌ಟಿಒ ಹಾಗೂ ಎಂಜಿನಿಯರ್‌ಗಳ ವರ್ಗಾವಣೆಗೆ ಶಿಕ್ಷಣ ಇಲಾಖೆ ಮಾದರಿಯ ಕೌನ್ಸೆಲಿಂಗ್ ಜಾರಿಗೊಳಿಸಿದರೆ ಭ್ರಷ್ಟಾಚಾರಕ್ಕೆ 40 ಪರ್ಸೆಂಟ್ ಆದರೂ ಕಡಿವಾಣ ಬೀಳಬಹುದು. ಜನರಿಗೂ ನೆಮ್ಮದಿಯಾದೀತು. 'ಸಕಾಲ' ಯೋಜನೆಯನ್ನು ಸರಿಯಾಗಿ ಜಾರಿ ಮಾಡಿ, ತಮ್ಮ ಕೆಲಸಗಳು ಹೋಬಳಿ ಮಟ್ಟದಲ್ಲೇ ಆಗುತ್ತವೆ ಎಂಬ ನಂಬುಗೆಯನ್ನು ಜನರಲ್ಲಿ ಮೂಡಿಸಬೇಕಾಗಿದೆ.

ಧರ್ಮದ್ವೇಷದ ಆಧಾರದ ಮೇಲೆ ಅಧಿಕಾರವನ್ನು ಶಾಶ್ವತಗೊಳಿಸಿಕೊಳ್ಳಬಹುದೆಂಬ ನಂಬಿಕೆಯ ಮೇಲೆ ಬಿಜೆಪಿ ಹುಟ್ಟಿಸಿದ್ದ ಹುಸಿ ವಿವಾದಗಳನ್ನು ಈಗ ಸರ್ಕಾರವೇ ಬಯಲುಗೊಳಿಸಬೇಕಿದೆ. 'ಬಾಂಗ್ಲಾದೇಶದ ಬಹಳಷ್ಟು ಮಂದಿ ಬಂದು ನೆಲೆಸಿದ್ದು, ನೆಮ್ಮದಿಯನ್ನೇ ಹಾಳು ಮಾಡುತ್ತಿದ್ದಾರೆ' ಎಂದು ಬೆಂಗಳೂರು ಹೊರವಲಯದ ಶಾಸಕರೊಬ್ಬರು ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿನ ವಿಧಾನಸಭಾ ಕಲಾಪದಲ್ಲಿ ಅಬ್ಬರಿಸಿದ್ದರು. ಆಗ ಜಯನಗರದ ಶಾಸಕರಾಗಿದ್ದ ಬಿ.ಎನ್. ವಿಜಯಕುಮಾರ್, 'ಇವರ ಕ್ಷೇತ್ರದಲ್ಲಿ ಸಾವಿರಾರು ಸಂಖ್ಯೆಯಲ್ಲಿರುವ ಬಾಂಗ್ಲಾದೇಶೀಯರಿಗೆ ಇವರೇ ಮುಂದೆ ನಿಂತು ಆಧಾರ್ ಕಾರ್ಡ್ ಕೊಡಿಸಿದ್ದಾರೆ. ಪ್ರಚಾರ ಗಿಟ್ಟಿಸುವ ಸಲುವಾಗಿ ಇಲ್ಲಿ ಹೀಗೆ ಮಾತನಾಡುವ ನೈತಿಕತೆಯಾದರೂ ಎಲ್ಲಿದೆ' ಎಂದು ತಮ್ಮ ಪಕ್ಷದ ಶಾಸಕನನ್ನೇ ಖಾಸಗಿಯಾಗಿ ಹಂಗಿಸಿದ್ದುಂಟು.

ಇನ್ನು ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯನ್ನು ಸರ್ಕಾರ ಜಾರಿಗೊಳಿಸಿತು. ಒಂದು ಸಮುದಾಯವನ್ನು ಹತ್ತಿಕ್ಕುವ, ಗೋಮಾಂಸ ತಿನ್ನುವ ಹತ್ತಾರು ಸಮುದಾಯಗಳ ಆಹಾರದ ಹಕ್ಕನ್ನೇ ಕಿತ್ತುಕೊಳ್ಳುವ ಹುನ್ನಾರವನ್ನೂ ನಡೆಸಿತು. ಬಿಜೆಪಿ ನೇತೃತ್ವದ ಸರ್ಕಾರ ಇರುವ ಇತರ ರಾಜ್ಯಗಳಲ್ಲಿ ಗೋಮಾಂಸದ ಬಳಕೆ ಹೇಗಿದೆ ಎಂಬುದನ್ನು ಹಾಗೂ ಕೇಂದ್ರ ಸಚಿವರೊಬ್ಬರು ನಡೆಸುತ್ತಿರುವ ಗೋಮಾಂಸದ ಭಾರಿ ವ್ಯವಹಾರವನ್ನು ಸರ್ಕಾರವೇ ಜನರ ಮುಂದಿಡಬೇಕಾಗಿದೆ. ಭ್ರಷ್ಟಾಚಾರ ನಿಗ್ರಹ ಸರ್ಕಾರದ ಮುಂದಿರುವ ಸವಾಲು. ಹಿಂದಿನ ಅವಧಿಯಲ್ಲಿ ನಡೆದ ರೀಡೂ ಪ್ರಕರಣ, ವರ್ಗಾವಣೆಯಲ್ಲಿನ ಭ್ರಷ್ಟಾಚಾರ ಸರ್ಕಾರವನ್ನು ಕಾಡಿದ್ದವು. ವಿದ್ಯುತ್ ಪ್ರಸರಣ ತಂತಿಗಳ ಮೇಲೆ ಬೀಳಬಹುದಾಗಿದ್ದ ಮರದ ರೆಂಬೆಕೊಂಬೆಗಳನ್ನು ಕತ್ತರಿಸುವ ವಾರ್ಷಿಕ ಗುತ್ತಿಗೆಗೆ ₹ 1,000 ಕೋಟಿಗೂ ಹೆಚ್ಚಿನ ಮೊತ್ತದ ಪ್ರಸ್ತಾವವು ಮೈತ್ರಿ ಸರ್ಕಾರದ ಮುಂದೆ ಇತ್ತು. ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಅದಕ್ಕೆ ಒಪ್ಪಿಗೆ ನೀಡಲಿಲ್ಲ.

ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಲಗಿಸುವುದು ಈ ಹೊತ್ತಿನಲ್ಲಿ ಕಷ್ಟ. ಆದರೆ, ಹಾಲು ಕೊಡುವ ಹಸುವನ್ನೇ ಕದ್ದು ಮಾರುವವರಿಗಿಂತ, ಆಗಾಗ್ಗೆ ಹಾಲು ಕರೆದು ಕದ್ದು ಮಾರುವವರು ವಾಸಿ ಎಂಬುದು ಸದ್ಯಕ್ಕೆ ಸಮಾಧಾನಪಟ್ಟುಕೊಳ್ಳಬೇಕಾದ ಸಂಗತಿ.

ಚುರುಮುರಿ



ಸಂಪುಟ ಸಾಹಸ

• ಮಣ್ಣೆರಾಜು

'ನಮ್ಮ ಶಾಸಕರಿಗೆ ಮಂತ್ರಿ ಯೋಗ ಇದೆಯಂತೆ. ಮನೆ ದೇವರ ಆರಾಧನೆಯಿಂದ ಸಚಿವ ಸಂಪುಟ ಸೇರುವ ಭಾಗ್ಯ ದೊರೆಯಲಿದೆ ಎಂದು ಅವರ ಫ್ಯಾಮಿಲಿ ಜ್ಯೋತಿಷಿ ಹೇಳಿದ್ದಾರಂತೆ ಕಣ್ರೀ...' ಸುಮಿ ಸಡಗರಪಟ್ಟಳು.

'ಜಾತಕ, ಜ್ಯೋತಿಷ ನಂಬಿ ಕೂರುವ ಸಂದರ್ಭ ಇದಲ್ಲ. ಪಕ್ಷದ 'ಹೈಕಮಾಂಡ್ ದೇವರ' ಆರಾಧನೆ ಮಾಡಿ ಒಲಿಸಿಕೊಂಡು ವರ ಪಡೆಯಬೇಕು' ಅಂದ ಶಂಕ್ರಿ.

'ಸಿ.ಎಂ ಸ್ಥಾನದ ಭಕ್ತರ ಅಪಾರ ಭಕ್ತಿಗೆ ಹೈಕಮಾಂಡ್ ದೇವರೇ ಗಾಬರಿಯಾಗಿಬಿಟ್ಟಿದೆಯಂತೆ...'

'ಆಗದೇ ಇರುತ್ತಾ? ಸಿ.ಎಂ ಸ್ಥಾನದ ಅರ್ಹತೆಯಿರುವವರು ಒಂದು ಕ್ಯಾಬಿನೆಟ್‌ಗಾಗುವಷ್ಟು ಮಂದಿ ಇದ್ದಾರಂತೆ. ಅಂತಹ ಸಮರ್ಥರ ಗಾತ್ರ, ಘನತೆಯನ್ನು ಅಳೆದು, ತೂಗಿ ಅತಿ ಸಮರ್ಥರನ್ನು ಆಯ್ಕೆ ಮಾಡುವುದು ದೇವರಿಗೂ ಕಷ್ಟವಾಗುತ್ತದೆ'.

'ಸಿ.ಎಂ ಹುದ್ದೆಗೇ ಇಷ್ಟು ಪೈಪೋಟಿಯಾದರೆ ಮಂತ್ರಿಯಾಗುವ ಅರ್ಹತೆಯ ಶಾಸಕರ ಸಂಖ್ಯೆ ನಾಲ್ಕು ಸರ್ಕಾರಗಳ ಸಚಿವ ಸಂಪುಟದಷ್ಟು ಇದೆಯಂತೆ. ಅವರಿಗೆಲ್ಲಾ ಮಂತ್ರಿ ಪದವಿ ಕೊಡಬೇಕೆಂದರೆ ನಾಲ್ಕು ಸಂಚಿಕೆಯ ಸಚಿವ ಸಂಪುಟ ರಚಿಸಬೇಕಾಗುತ್ತದೆ'.

'ಹೌದು, ಎಲೆಕ್ಷನ್ ಗೆಲ್ಲೋದಕ್ಕಿಂತ ಮಂತ್ರಿ ಪದವಿ ಪೈಪೋಟಿ ಗೆಲ್ಲೋದು ಶಾಸಕರಿಗೆ ಕಷ್ಟವಾಗಿದೆಯಂತೆ'.

'ಬಹುಸಂಖ್ಯೆಯ ಪುರುಷ ಶಾಸಕರ ಅಬ್ಬರದಲ್ಲಿ ಬೆರಳೆಣಿಕೆಯಷ್ಟಿರುವ ಮಹಿಳಾ ಎಂಎಲ್‌ಎಗಳ ಮಂತ್ರಿ ಕೂಗು ಕೇಳಿಸುತ್ತಲೇ ಇಲ್ಲವಂತೆ...'

'ಮಹಿಳಾ ಎಂಎಲ್‌ಎಗಳಿಗೆ ಒಂದೋ ಎರಡೋ ಮಂತ್ರಿ ಸ್ಥಾನ ಕೊಡಬಹುದಷ್ಟೆ. ಹೆಚ್ಚಿನ ಮಹಿಳೆಯರು ಚುನಾವಣೆಯಲ್ಲಿ ಗೆಲ್ಲಲು ಅವಕಾಶವಾಗಲಿಲ್ಲ, ಎಂಎಲ್‌ಸಿ ಮಾಡಿ ಮೇಲ್ಮನೆಯಲ್ಲಾದರೂ ಮಹಿಳೆಯರಿಗೆ ಸ್ಥಾನಮಾನ ನೀಡಬಹುದು'.

'ಮೇಲ್ಮನೆಯಲ್ಲೂ ಮೇಲ್‌ಗಳದ್ದೇ ಮೇಲಾಟ... ಮೇಲ್ಮನೆಯಂತೆ ಫೀಮೇಲ್ ಮನೆ ವ್ಯವಸ್ಥೆ ಇದ್ದಿದ್ದರೆ ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಅಧಿಕಾರ ದೊರೆಯುತ್ತಿತ್ತೇನೋ...' ಎಂದು ಸುಮಿ ನಿಟ್ಟುಸಿರುಬಿಟ್ಟಳು.

ಸಂಗತ

ಶ್ವಾನ ಪ್ರೀತಿ: ಇರಲಿ ರೀತಿನೀತಿ

ನಾಯಿಯ ಮೇಲೆ ಪ್ರೀತಿ ತೋರುವುದರ ಜತೆಗೆ, ಅದನ್ನು ಸರಿಯಾಗಿ ಸಲಹುವ, ಶಿಸ್ತು ಕಲಿಸುವ ಜವಾಬ್ದಾರಿಯೂ ಅದನ್ನು ಸಾಕುವವರ ಮೇಲೆ ಇರುತ್ತದೆ

• ಡಾ. ಕೆ.ಎಸ್.ಚೈತ್ರಾ

ಬೆಂಗಳೂರಿನ ಯಲಹಂಕದಲ್ಲಿ 68 ವರ್ಷದ ವ್ಯಕ್ತಿಯ ಜತೆ ನೆರೆಮನೆಯವರ ಜಗಳ ಆಗಾಗ್ಗೆ ನಡೆಯುತ್ತಿತ್ತು. ಇದೇ ಏಪ್ರಿಲ್‌ನಲ್ಲಿ ಅದು ತಾರಕಕ್ಕೇರಿ, ಎದುರಾಳಿಗಳ ಕ್ರಿಕೆಟ್ ಬ್ಯಾಟಿನಿಂದ ತಲೆಗೆ ಹೊಡೆತ ಬಿದ್ದು ಅವರು ಮೃತಪಟ್ಟರು. ಕಾರಣ, ಆಸ್ತಿ, ಪ್ರೇಮ, ಹಣ, ಸಾಲ ಯಾವುದೂ ಅಲ್ಲ, ನಾಯಿ! ತಮ್ಮ ಮನೆಯ ಮುಂದೆ ಮಲ ವಿಸರ್ಜನೆ ಮಾಡಿಸುತ್ತಿದ್ದರು ಎಂಬ ವಿಷಯಕ್ಕೆ ನಡೆಯುತ್ತಿದ್ದ ವಾಗ್ವಾದ ಕೊನೆಗೊಂಡಿದ್ದು ಈ ದುರಂತದಲ್ಲಿ.

ನಾಯಿ ಎಂದರೆ ನಂಬಿಕೆ, ನಿಷ್ಠೆಗೆ ಹೆಸರುವಾಸಿ. ಪ್ರೀತಿ, ಸುರಕ್ಷೆ, ಫ್ಯಾಶನ್ ಈ ಮೂರೂ ಕಾರಣಗಳಿಂದ ನಾಯಿಗಳನ್ನು ಸಾಕುವವರ ಸಂಖ್ಯೆ ಹೆಚ್ಚುತ್ತಿದೆ. ಸಾಕುತ್ತಿದ್ದಾರೆ ಸರಿ, ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆಯೇ ಎಂದರೆ ಯೋಚಿಸಬೇಕಾಗುತ್ತದೆ. ಉದ್ಯಾನಗಳ ನಗರಿ ಎಂದೇ ಪ್ರಸಿದ್ಧವಾದ ಬೆಂಗಳೂರಿನಲ್ಲಿರುವ ಅನೇಕ ಪಾರ್ಕ್‌ಗಳನ್ನು ಜನರು ಆರೋಗ್ಯ ಮತ್ತು ವಿಹಾರದ ದೃಷ್ಟಿಯಿಂದ ಬಳಸುತ್ತಿದ್ದಾರೆ. ಆದರೆ ಎಲ್ಲಿ ನಾಯಿ ಕಚ್ಚುತ್ತದೋ ಎಂದು ಹೆದರುವ, ನಾಯಿ ತ್ಯಾಜ್ಯ ಮೆಟ್ಟುತ್ತೇವೋ ಎಂದು ಎಚ್ಚರಿಕೆಯಿಂದ ನಡೆಯಬೇಕಾದ ಪರಿಸ್ಥಿತಿ ಇದೆ.

'ನಾಯಿಗಳೆಂದರೆ ನಮ್ಮ ಮಕ್ಕಳಂತೆ. ಅವುಗಳಿಗೆ ಓಡಾಡಲು ಜಾಗ ಬೇಕು. ಮಹಾನಗರಗಳ ಪುಟ್ಟ ಮನೆಗಳಲ್ಲಿ ಅದು ಸಾಧ್ಯವಿಲ್ಲ. ಹೆಚ್ಚಿನ ಪಾರ್ಕ್‌ಗಳಲ್ಲಿ 'ನಾಯಿಗಳಿಗೆ ಪ್ರವೇಶವಿಲ್ಲ' ಎಂಬ ಬೋರ್ಡ್ ಹಾಕಿರುತ್ತಾರೆ. ರಸ್ತೆಗಳಲ್ಲಿ ವಾಕಿಂಗ್ ಕರೆದುಕೊಂಡು ಹೋಗಲು ವಾಹನಗಳು ಹೆಚ್ಚಾಗಿರುವುದರಿಂದ ಸಾಧ್ಯವೇ ಇಲ್ಲ. ಹಾಗಾಗಿ ಪರಿಹಾರ ಏನು?' ಎನ್ನುವುದು ಶ್ವಾನಪ್ರೇಮಿಗಳ ಪ್ರಶ್ನೆಯಾಗಿತ್ತು. ಇದನ್ನು ಅರಿತು ಪಾಲಿಕೆಯು ಬೆಂಗಳೂರಿನ ಕೆರೆಗಳ ಸುತ್ತ ಇರುವ ವಾಕಿಂಗ್ ಪಾಥ್‌ನಲ್ಲಿ ನಿರ್ದಿಷ್ಟ ಜನದಟ್ಟಣೆ ಸಮಯವನ್ನು ಬಿಟ್ಟು ಉಳಿದ ಸಮಯದಲ್ಲಿ ನಾಯಿಗಳನ್ನು ಕರೆದುಕೊಂಡು ಓಡಾಡಲು ಬೆಳಗ್ಗೆ ಆರರಿಂದ ಸಂಜೆ ಆರರವರೆಗೆ ಅನುಮತಿ ನೀಡಿದೆ. ಈ ರೀತಿ ಹೋಗುವಾಗ ನಾಯಿಯ ಕತ್ತಿಗೆ ಸರಪಳಿ ಅಥವಾ ಬಾಯಿಗೆ ಮುಚ್ಚಿಗೆ ಹಾಕುವುದು ಕಡ್ಡಾಯ.

ವಾಕಿಂಗ್ ಸಮಯದಲ್ಲಿ ನಾಯಿಗಳು ಮಲ ವಿಸರ್ಜನೆ ಮಾಡಿದರೆ ಅದರ ಸ್ವಚ್ಛತೆಯನ್ನು ಮಾಲೀಕರೇ ಮಾಡಬೇಕು. ತಪ್ಪಿದಲ್ಲಿ ದಂಡ ವಿಧಿಸಲಾಗುತ್ತದೆ. ನಾಯಿಗೆ ರೇಬಿಸ್ ಲಸಿಕೆ ಕಡ್ಡಾಯ ಎನ್ನುವ ನಿಯಮ ಜಾರಿಗೆ ತರಲಾಗಿದೆ. ಕಬ್ಬನ್ ಪಾರ್ಕ್‌ನಲ್ಲಿ ಅಧಿಕೃತವಾಗಿ 'ಡಾಗ್ ಪಾರ್ಕ್' ಎಂದೇ ಜಾಗ ಮೀಸಲಿಡಲಾಗಿದೆ. 'ಪಾರ್ಕ್‌ಗಳಲ್ಲಿ ಈ ರೀತಿಯ ನಿಯಮಗಳನ್ನು ಜಾರಿಗೆ ತರಲಾಗಿದೆ. ಆದರೆ ಬಡಾವಣೆಗಳಲ್ಲಿ ದಿನವೂ ನಾಯಿಯನ್ನು ವಾಕಿಂಗ್ ಕರೆದೊಯ್ಯುವಾಗ ದಾರಿಯುದ್ದಕ್ಕೂ ಅಲ್ಲಲ್ಲಿ ಮೂತ್ರ, ಮಲ ವಿಸರ್ಜನೆ. ನಮಗೆ ದಿನವೂ ಎದ್ದೊಡನೆ ಮಲದರ್ಶನ! ಸಾಕುವವರು ಯಾರೋ, ಸ್ವಚ್ಛಗೊಳಿಸುವವರು ಮಾತ್ರ ನಾವು. ಒಂದೊಮ್ಮೆ ಎದುರಿಗೆ ಸಿಕ್ಕಿಬಿದ್ದರೂ 'ಮನೆಯೊಳಗೆ ಅಲ್ಲವಲ್ಲ, ರಸ್ತೆ ಎಂದರೆ ಸಾರ್ವಜನಿಕ ಆಸ್ತಿ' ಎಂದು ಜಗಳಕ್ಕೇ ನಿಲ್ಲುತ್ತಾರೆ. ಮತ್ತೊಂದು ಸಮಸ್ಯೆ ಎಂದರೆ, ಬೀದಿ ನಾಯಿಗಳಿಗೆ ದಿನವೂ ಬಿಸ್ಕತ್ತು ಮತ್ತು ಹೋಟೆಲ್‌ಗಳ ಉಳಿದ ಊಟ ಹಾಕುವುದು. ಈ ರೀತಿಯ ಆಹಾರ ತಿಂದು ಅಭ್ಯಾಸವಾದ ನಾಯಿಗಳು ಒಂದು ದಿನ ತಡವಾದರೂ ದಾರಿಯಲ್ಲಿ ಓಡಾಡುವವರನ್ನು ಕಾಡಿಸುತ್ತವೆ. ಹಸಿವು ಹೆಚ್ಚಾದರೆ ರೊಚ್ಚಿಗೇಳುತ್ತವೆ. ಚಿಕ್ಕ ಮಕ್ಕಳಂತೂ ಗಾಬರಿಯಿಂದ ಓಡಾಡಬೇಕಾದ ಪರಿಸ್ಥಿತಿ ಇದೆ. ನಾಯಿ ಸಾಕುವ, ಅವುಗಳಿಗೆ ಅನ್ನ ನೀಡುವ ಪುಣ್ಯದ ಕೆಲಸದ ಬಗ್ಗೆ ನಮ್ಮ ತಕರಾರಿಲ್ಲ. ಆದರೆ ಇನ್ನೊಬ್ಬರಿಗೆ ತೊಂದರೆಯಾಗದಂತೆ ಅವುಗಳನ್ನು ಮಾಡಿದರೆ ಒಳ್ಳೆಯದು' ಎಂಬುದು ನಾಗರಿಕರ ಅಭಿಪ್ರಾಯ.



ನಾಯಿಯನ್ನು ಸಾಕುವ ಮಾಲೀಕರ ಮತ್ತೊಂದು ವಾದವೆಂದರೆ, ನಾಯಿ ಮಲವು ಸೆಗಣಿಯಂತೆ ನೈಸರ್ಗಿಕ ಗೊಬ್ಬರ, ಹಾಗಾಗಿ ದಾರಿಯ ಬದಿಯಲ್ಲಿ ಮಾಡಿದರೆ ತೊಂದರೆಯಿಲ್ಲ ಎನ್ನುವುದಾಗಿದೆ. ಆದರೆ ನಾಯಿಗಳ ಆಹಾರ ಅಧಿಕ ಪ್ರಮಾಣದಲ್ಲಿ ಪ್ರೋಟೀನ್ ಹೊಂದಿದ್ದು, ನೈಟ್ರೋಜನ್ ಮತ್ತು ಫಾಸ್ಫರಸ್ ಕೂಡ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಆಮ್ಲೀಯವಾಗಿರುವ ಈ ಮಲವು ಗಿಡಗಳನ್ನು ಸುಡಬಹುದು. ನಾಯಿಯ ಮಲ ಸುಲಭವಾಗಿ ಕೊಳೆಯುವಂಥದ್ದಲ್ಲ. ಸರಿಸುಮಾರಾಗಿ ಒಂದು ವರ್ಷ ಕಾಲ ಬೇಕು. ಇದರಲ್ಲಿ ಇ ಕೊಲೈ, ಸಾಲ್ಮೊನೆಲ್ಲಾ, ಕೊರೊನಾ ವೈರಾಣು, ಲಾಡಿ ಹುಳದಂಥ ಪರಾವಲಂಬಿ ಜೀವಿಗಳು ಇರುತ್ತವೆ. ಮಕ್ಕಳು ಹೊರಗಡೆ ಆಡುವಾಗ, ಜನರು ಓಡಾಡುವಾಗ, ಕೆಲಸ ಮಾಡುವಾಗ ಈ ಸೂಕ್ಷ್ಮಾಣುಜೀವಿಗಳು ಮನುಷ್ಯರಿಗೆ ಮತ್ತು ಇತರ ಪ್ರಾಣಿಗಳಿಗೆ ರೋಗವನ್ನು ಹರಡುವ ಸಾಧ್ಯತೆ ಇದೆ.

ಸರಿಯಾಗಿ ಸ್ವಚ್ಛಗೊಳಿಸದೆ ಈ ಮಲವನ್ನು ಹಾಗೇ ಬಿಟ್ಟಾಗ ನಗರ ಪ್ರದೇಶಗಳಲ್ಲಿ ಹೆಚ್ಚಿರುವ ಇಲಿ, ಹೆಗ್ಗಣಗಳು ಇದನ್ನು ತಿಂದು ರೋಗವನ್ನು ಎಲ್ಲೆಡೆ ಹರಡುತ್ತವೆ. ಹಾಗೆಯೇ ಮಳೆ ಬಂದಾಗ ಈ ತ್ಯಾಜ್ಯವು ಚರಂಡಿ, ಕಾಲುವೆಗಳ ಮೂಲಕ ನೀರನ್ನು ಸೇರುತ್ತದೆ. ಆ ನೀರು, ನದಿ, ಕೆರೆಗಳನ್ನು ಸೇರಿ ಜಲಮೂಲಗಳನ್ನು ಕಲುಷಿತಗೊಳಿಸುತ್ತದೆ. ನೀರಿನಲ್ಲಿ ಕಂಡುಬರುವ ಶೇಕಡ ಮೂವತ್ತರಷ್ಟು ಬ್ಯಾಕ್ಟೀರಿಯಾಕ್ಕೆ ಕಾರಣ ಸಾಕುಪ್ರಾಣಿಗಳ ತ್ಯಾಜ್ಯ ಎಂಬುದು ಸಾಬೀತಾಗಿದೆ. ಹೀಗೆ ಆರೋಗ್ಯ ಮತ್ತು ಪರಿಸರದ ಕಾರಣದಿಂದ ಕೂಡಾ ಈ ತ್ಯಾಜ್ಯ ವಸ್ತುಗಳ ನಿರ್ವಹಣೆ ಅಗತ್ಯ.

ಸಾಕುಪ್ರಾಣಿಗಳ ಮಾಲೀಕರಿಗೆ ಈ ಎಲ್ಲಾ ವಿಷಯಗಳ ಕುರಿತು ಮಾಹಿತಿ, ಲಭ್ಯವಿರುವ ಸಾಧನಗಳ ಪ್ರಯೋಜನ ಮತ್ತು ಸೂಕ್ತ ತರಬೇತಿ ನೀಡುವುದು ಅಗತ್ಯ. ಜತೆಗೆ ಡಾಗ್ ಪಾರ್ಕ್‌ಗಳಂಥ ನಿಗದಿತ ಸ್ಥಳ ಅಲ್ಲಲ್ಲಿ ನಿರ್ಮಾಣವಾಗಬೇಕು. ಅದನ್ನೂ ಮೀರಿ ನಡೆದರೆ ಕಾನೂನಿನ ಕ್ರಮವೂ ಅಗತ್ಯವಾಗಬಹುದು. ಒಟ್ಟಿನಲ್ಲಿ ಸಾಕುಪ್ರಾಣಿಯ ಮೇಲೆ ಪ್ರೀತಿ ತೋರುವುದರ ಜತೆಗೆ ಅದನ್ನು ಸರಿಯಾಗಿ ಸಲಹುವ, ಶಿಸ್ತು ಕಲಿಸುವ ಜವಾಬ್ದಾರಿಯೂ ಪೋಷಕರಿಗಿದೆ!

ವಾಚಕರ ವಾಣಿ

ಮಠಾಧೀಶರ ರಾಜಕೀಯ ಲಾಬಿ: ಬೇಡ ಮನ್ನಣೆ

ರಾಜಕೀಯದಲ್ಲಿ ಮಠಾಧೀಶರ ಹಸ್ತಕ್ಷೇಪದಿಂದ ಜನಾಭಿಪ್ರಾಯಕ್ಕೆ ಮನ್ನಣೆ ಇಲ್ಲದಂತೆ ಆಗುತ್ತದೆ. ಒಕ್ಕಲಿಗ ಸಮುದಾಯಕ್ಕೆ ಸೇರಿದ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಆದಿಚುಂಚನಗಿರಿ ಶ್ರೀಗಳು ಹೇಳಿರುವುದರಿಂದ, ಮಠಾಧೀಶರೊಬ್ಬರು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರದಲ್ಲಿ ನೇರವಾಗಿ ಭಾಗಿಯಾದಂತೆ ಆಗಿದೆ. ಒಬ್ಬ ಮಠಾಧೀಶರು ಈ ರೀತಿ ಜಾತಿ ಆಧಾರಿತ ನಾಯಕತ್ವದ ಮಾತುಗಳನ್ನಾಡಿದರೆ, ಉಳಿದ ಮಠಾಧೀಶರು ತಮ್ಮ ತಮ್ಮ ಸಮುದಾಯದ ನಾಯಕರ ಪರವಾಗಿ ವಾದ ಶುರು ಮಾಡಬಹುದು. ಇದರಿಂದ ಜಾತ್ಯತೀತ ಮತ್ತು ಧರ್ಮನಿರಪೇಕ್ಷ ರಾಜಕಾರಣ ಸಾಧ್ಯವಾಗುವುದಿಲ್ಲ.

ಮುಖ್ಯಮಂತ್ರಿ ಆಯ್ಕೆಯು ಸಂಬಂಧಪಟ್ಟ ಪಕ್ಷ ಮತ್ತು ಆ ಪಕ್ಷದಿಂದ ಆಯ್ಕೆಯಾದ ಶಾಸಕರಿಗೆ ಸಂಬಂಧಿಸಿದ್ದು. ಇದನ್ನು ಮೀರಿ, ಮಠಾಧೀಶರ ಒತ್ತಡಕ್ಕೆ ಮಣಿದು, ಅವರ ಆಣತಿಯಂತೆ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿದ್ದೇ ಆದರೆ, ಮುಂದೆ ಅವರ ಸಮುದಾಯಕ್ಕೆ ಮೀಸಲಾತಿ, ಮಂತ್ರಿಗಿರಿ, ಮಠಕ್ಕೆ ಅನುದಾನ, ನಿಗಮ, ಮಂಡಳಿ, ಪ್ರಾಧಿಕಾರದ ಅಧ್ಯಕ್ಷ ಸ್ಥಾನದಂತಹ ಎಲ್ಲ ವಿಷಯಗಳಲ್ಲೂ ಋಣಾಧಾರಿತ ರಾಜಕಾರಣವೊಂದು ಶುರುವಾಗುತ್ತದೆ. ಆದ್ದರಿಂದ ಆರೋಗ್ಯಕರ ಸಮಾಜಕ್ಕಾಗಿ, ಮಠಾಧೀಶರ ರಾಜಕೀಯ ಲಾಬಿಗೆ ಮನ್ನಣೆ ನೀಡುವ ಪದ್ಧತಿಯಿಂದ ಮುಕ್ತವಾದ ರಾಜಕೀಯ ವ್ಯವಸ್ಥೆ ಬರಬೇಕಿದೆ.

ಎಂ.ಎಸ್.ಸಿದ್ಧಾರ್ಥ, ಮಂಗನಹಳ್ಳಿ

ಆನ್‌ಲೈನ್ ವೈವಾಹಿಕ ವಂಚನೆ: ಇರಲಿ ಎಚ್ಚರ

ಕೋವಿಡ್ ಸಾಂಕ್ರಾಮಿಕದ ನಂತರ, ವೈವಾಹಿಕ ಸೇವೆಗೆ ಮೀಸಲಾದ ವೆಬ್‌ಸೈಟ್‌ಗಳ ಮೂಲಕ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಪರಿಪಾಟ ಹೆಚ್ಚಾಗಿದೆ. ಇದೇ ವೇಳೆ, ವೈವಾಹಿಕ ವಂಚನೆ ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಮೂಲಕವೂ ಇಂತಹ ವಂಚನೆಗಳು ನಡೆಯುತ್ತಿವೆ. ಈ ಕುರಿತು ಜನರು ಎಚ್ಚರ ವಹಿಸಬೇಕಿದೆ. ವೈವಾಹಿಕ ಸೇವೆಗೆ ಸಂಬಂಧಿಸಿದ ವೆಬ್‌ಸೈಟ್‌ಗಳಲ್ಲಿ, ಅನಿವಾಸಿ ಭಾರತೀಯರೆಂದು ಹೇಳಿಕೊಳ್ಳುವ ವ್ಯಕ್ತಿಗಳೊಂದಿಗೆ ವ್ಯವಹರಿಸುವಾಗ ಜಾಗರೂಕರಾಗಿ ಇರಬೇಕಾಗುತ್ತದೆ. ಅಂತಹವರೊಂದಿಗೆ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಳ್ಳಬಾರದು. ಮುಖಾಮುಖಿ ಭೇಟಿ, ಸಂಗಾತಿ ಆಗಬಯಸಿರುವವರ ಪೋಷಕರ ಕುರಿತು ಮಾಹಿತಿ, ಅವರ ವಿಳಾಸ ಮತ್ತು ವಿದೇಶದಲ್ಲಿನ ಉದ್ಯೋಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮೌಲ್ಯೀಕರಿಸದೆ ಮದುವೆಗೆ ಮುಂದಾಗಬಾರದು.

ಅರ್ಚನ ಎಂ., ಅತ್ತಿಬೆಲೆ

ಅಧಿಕೃತ ನಾಣ್ಯ: ಮೂಡಲಿ ಜನಜಾಗೃತಿ

ಬಹುತೇಕ ವ್ಯಾಪಾರಿಗಳು ಜನರಿಂದ ₹ 10ರ ನಾಣ್ಯವನ್ನು ಪಡೆಯದೇ ಇರುವುದು ಬೇಸರ ಮೂಡಿಸುತ್ತದೆ. ತಾವು ಅದನ್ನು ಯಾಕಾಗಿ ಪಡೆಯುತ್ತಿಲ್ಲ ಎಂಬುದು ಖುದ್ದು ಅವರಿಗೇ ತಿಳಿದಿರುವುದಿಲ್ಲ. ಬಹಳಷ್ಟು ಬಾರಿ ಪೀಡಿಸಿ, ಹೀಗೆ ಪಡೆಯದಿರುವುದು ಅಪರಾಧ ಎಂದು ವಿವರಿಸಿದ ಮೇಲೆ ಕೆಲವರಷ್ಟೇ ಅದನ್ನು ತೆಗೆದುಕೊಳ್ಳಲು ಒಪ್ಪುತ್ತಾರೆ.

ಸರ್ಕಾರ ಈ ಬಗ್ಗೆ ಗಮನಹರಿಸಿ, ಅಧಿಕೃತ ನಾಣ್ಯದ ಚಲಾವಣೆಗೆ ಅಡ್ಡಿಪಡಿಸುವುದನ್ನು ಒಂದು ಆರ್ಥಿಕ ಅಪರಾಧ ಅಥವಾ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸುವಂತೆ ಮಾಡಬೇಕು. ಈ ಕುರಿತು ಮಾಧ್ಯಮಗಳಲ್ಲಿ ಸೂಕ್ತ ಪ್ರಚಾರ ನೀಡಿ, ಜನರಲ್ಲಿ ಜಾಗೃತಿ ಮೂಡಿಸಬೇಕು.

ರವಿಕಿರಣ್ ಶೇಖರ್, ಬೆಂಗಳೂರು

ದ್ರವಾಹಾರದಿಂದ ಅಭಿಷೇಕ: ಅರ್ಥಹೀನ ಆಚರಣೆ

ಚುನಾವಣೆ ಸೇರಿದಂತೆ ವಿವಿಧ ಸಂಭ್ರಮಾಚರಣೆಗಳಲ್ಲಿ ಮೂರ್ತಿಗಳಿಗೆ, ಕಟೌಟ್‌ಗಳಿಗೆ ಕ್ಷೀರಾಭಿಷೇಕ ಮಾಡುವುದು ನಡೆದಿದೆ. ಅಪರೂಪಕ್ಕೊಮ್ಮೆ ಜನರಿಗೆ ಇಂಥ ಅಭಿಷೇಕ ಮಾಡುವುದನ್ನೂ ನೋಡುತ್ತೇವೆ. ಯಾವ ದ್ರವದಿಂದ ಅಭಿಷೇಕ ಮಾಡಿದರೂ ಕೊನೆಯಲ್ಲಿ ಅದನ್ನು ತೊಳೆಯಬೇಕಾದದ್ದು ನೀರಿನಿಂದ ಮಾತ್ರ. ಹಾಗಾಗಿ ವ್ಯಕ್ತಿಗಳಿಗೆ ಹಾಲು ಹಾಗೂ ಇತರ ದ್ರವಗಳಿಂದ ಅಭಿಷೇಕ ಮಾಡಿ ಸಂಭ್ರಮಾಚರಣೆ ಮಾಡುವುದರಲ್ಲಿ ಅರ್ಥವಿಲ್ಲ. ಮೈಮೇಲೆ ಬಿದ್ದಾಗ ಅದು ಸಹ ಒಂದು ರೀತಿಯ ಕೊಳೆಯಂತೆ.

ಅಂತಿಮವಾಗಿ ಎಲ್ಲ ಕೊಳೆಯನ್ನೂ ತೊಳೆಯುವ ಶಕ್ತಿ ಇರುವುದು ನೀರಿಗೆ. ಆದ್ದರಿಂದ ಹಾಲು, ಜೇನು, ಕಬ್ಬಿನ ರಸ ಹಾಗೂ ಹಣ್ಣಿನ ರಸಗಳು ಕುಡಿಯುವುದಕ್ಕಾಗಿ ಇರುವುದರಿಂದ, ಅವುಗಳಿಂದ ಅಭಿಷೇಕ ಮಾಡುವುದನ್ನು ತ್ಯಜಿಸುವುದು ಒಳ್ಳೆಯದು. ಸಂಭ್ರಮಾಚರಣೆಗೆ ಅತ್ಯಂತ ಅರ್ಥಪೂರ್ಣ ಅಭಿಷೇಕ ಎಂದರೆ ಹೂವಿನ ಅಭಿಷೇಕ.

ಈ.ಬಸವರಾಜು, ಬೆಂಗಳೂರು

ವೈಜ್ಞಾನಿಕ ಚಿಂತನೆ ಬಿತ್ತುವುದಕ್ಕೆ ತಡೆಯೇಕೆ?

ಎನ್‌ಸಿಇಆರ್‌ಟಿ ಪ್ರಕಟಿಸಿರುವ ಈ ವರ್ಷದ 10ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದಲ್ಲಿ ಚಾರ್ಲ್ಸ್ ಡಾರ್ವಿನ್ನನ ವಿಕಾಸವಾದವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದನ್ನು ಮುಖ್ಯವಾಗಿ ಇಟ್ಟುಕೊಂಡು, ಡಾ. ಎಚ್.ಆರ್.ಕೃಷ್ಣಮೂರ್ತಿ ಅವರು ವಿಜ್ಞಾನ ಮತ್ತು ಜೀವ ವಿಕಾಸದ ಚಿಂತನೆಯನ್ನು ತಮ್ಮ ಲೇಖನದಲ್ಲಿ (ಪ್ರ.ವಾ., ಮೇ 15) ಸರಳವಾಗಿ ಮತ್ತು ಅರ್ಥವತ್ತಾಗಿ ಮಂಡಿಸಿದ್ದಾರೆ. ವಿಕಾಸವಾದದ ಬಗ್ಗೆ ಈ ಮುನ್ನ ಕೇಂದ್ರ ಸಚಿವರೊಬ್ಬರು ನೀಡಿದ್ದ ಅಸಡ್ಡೆತನದಿಂದ ಕೂಡಿದ ಹೇಳಿಕೆಯನ್ನು ಅವರು ಪ್ರಸ್ತಾಪಿಸಿದ್ದಾರೆ. ಇಡೀ ಪ್ರಪಂಚವು ವಿಜ್ಞಾನದ ಕಡೆಗೆ ದಾಪುಗಾಲು ಹಾಕಿರುವ ಇಂದಿನ ಸಂದರ್ಭದಲ್ಲಿ ಇಂತಹ ಅಸಂಗತ ಹೇಳಿಕೆಗಳು ವಿಜ್ಞಾನದ ಅನೇಕ ಸಂಶೋಧನೆಗಳು ಮತ್ತು ಸಂಶೋಧಕರ ಪ್ರಯತ್ನಗಳತ್ತ ಜನ ಮುಖಮುರಿಯುವಂತೆ ಮಾಡಬಲ್ಲವು.

ಭಾರತದಲ್ಲಿ ಕೆಲವೊಮ್ಮೆ ರಾಜಕಾರಣಿಗಳೇ ಸಂಶೋಧಕರಾಗುವ, ವಿಜ್ಞಾನಿಗಳಾಗುವ ಮತ್ತು ವೈದ್ಯರು ಕೂಡ ಆಗಿಬಿಡುವ ಕೆಟ್ಟ ವ್ಯವಸ್ಥೆ ನಿರ್ಮಾಣಗೊಂಡಿದೆ. 'ಈ ಜಗತ್ತಿನಲ್ಲಿ ಜೀವ ಸಂಕುಲಗಳು ಭಗವಂತನಿಂದ ಹಠಾತ್ತಾಗಿ ರೂಪುಗೊಂಡಿಲ್ಲ, ಲಕ್ಷಾಂತರ ವರ್ಷಗಳಿಂದ ಬದಲಾಗುತ್ತಿರುವ ಪರಿಸರದೊಂದಿಗೆ ಬದಲಾಗುತ್ತಾ ಜೀವ ವಿಕಾಸದ ಒತ್ತಡಗಳಿಂದ ರೂಪುಗೊಂಡಿವೆ ಹಾಗೂ ರೂಪುಗೊಳ್ಳುತ್ತಾ ಮುಂದುವರಿಯುತ್ತಿವೆ' ಎಂಬುದನ್ನು 'ಆರಿಜಿನ್ ಆಫ್ ಸ್ಪೀಷೀಸ್' ಗ್ರಂಥದಲ್ಲಿ ಡಾರ್ವಿನ್ ಸ್ಪಷ್ಟಪಡಿಸಿದ್ದಾನೆ. ಇಂತಹ ವಿಚಾರಗಳನ್ನು, ವೈಜ್ಞಾನಿಕ ಚಿಂತನೆಗಳನ್ನು ಮಕ್ಕಳಲ್ಲಿ ಬಿತ್ತುವುದಕ್ಕೆ ತಡೆ ಒಡ್ಡುವುದೇಕೆ?


ಡಾ. ಸುಧಾಕರ ಕೆ.ಎಸ್., ಕರಿಶೆಟ್ಟಿಹಟ್ಟಿ, ಗುಬ್ಬಿ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಸಿನಿಸಮ್ಮಾನ: ನಾಮನಿರ್ದೇಶಿತರ ವಿವರ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ಕ್ಕೆ ದಿನಗಣನೆ ಶುರುವಾಗಿದೆ. 2022ನೇ ಸಾಲಿನ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡವರ ವಿವರಗಳನ್ನು ಜನರಿಗೆ ತಿಳಿಸುವ ಸಮಯ ಇದು. 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ಪರಿಣತರ ತಂಡವು ನಾಮನಿರ್ದೇಶನ ಮಾಡಿದೆ. ಚಲನಚಿತ್ರಗಳನ್ನು ವೀಕ್ಷಿಸಿದ 20 ಪರಿಣತರು ಪ್ರತಿ ವಿಭಾಗದಲ್ಲಿ ಐದು ಅಥವಾ ಆರು ಪ್ರತಿಭಾವಂತರ ಹೆಸರುಗಳನ್ನು ಪಟ್ಟ ಮಾಡಿದ್ದಾರೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ-ಸಂಸ್ಥೆಗಳ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರು ವೋಟ್ ಮೂಲಕ ಆಯ್ಕೆ ಮಾಡಲಿದ್ದಾರೆ. ಯಾವ ವಿಭಾಗದ ಪ್ರಶಸ್ತಿ ಯಾರಿಗೆ ಸಲ್ಲಲಿದೆ ಎನ್ನುವುದು ಸಿನಿ ಸಮ್ಮಾನ ಪ್ರದಾನ ಕಾರ್ಯಕ್ರಮದ ದಿನವೇ ತಿಳಿಯಲಿದೆ. ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯ ತೀರ್ಪುಗಾರರು ಅನುಮೋದಿಸಿದ್ದಾರೆ. ಮೊದಲ ಹಂತವಾಗಿ ಐದು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು/ಸಿನಿಮಾಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳು ಹಂತ ಹಂತವಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಲಿದೆ. ‘ಸಿನಿ ಸಮ್ಮಾನ’ ಕುರಿತ ಇನ್ನಷ್ಟು ಮಾಹಿತಿಗೆ ವೆಬ್‌ಸೈಟ್ ನೋಡಿ. prajavani.net/cinesamman

ವರ್ಷದ ಅತ್ಯುತ್ತಮ ಚಿತ್ರ (2022)

ತಲೆದಂಡ


777 ಚಾರ್ಲಿ



ಗುರು ಶಿಷ್ಯರು


ಕಾಂತಾರ



ಧರಣಿ ಮಂಡಲ ಮಧ್ಯದೊಳಗೆ

ಅತ್ಯುತ್ತಮ ನಟ




- ಸಂಚಾರಿ ವಿಜಯ್ — ಚಿತ್ರ: ತಲೆದಂಡ
- ರಕ್ಷಿತ್ ಶೆಟ್ಟಿ — ಚಿತ್ರ: 777 ಚಾರ್ಲಿ
- ಶರಣ್ — ಚಿತ್ರ: ಗುರು ಶಿಷ್ಯರು
- ಅಚ್ಯುತ್ ಕುಮಾರ್ — ಚಿತ್ರ: ಫೋರ್‌ವಾಲ್ಸ್
- ಯಶ್ — ಚಿತ್ರ: ಕೆ.ಜಿ.ಎಫ್. ಚಾಪ್ಟರ್–2

ಅತ್ಯುತ್ತಮ ನಟಿ



- ಹಿತಾ ಚಂದ್ರಶೇಖರ್ — ಚಿತ್ರ: ತುರ್ತು ನಿರ್ಗಮನ
- ಲಕ್ಷ್ಮಿ ಚಂದ್ರಶೇಖರ್ — ಚಿತ್ರ: 9 ಸುಳ್ಳು ಕಥೆಗಳು
- ಸಿರಿ ರವಿಕುಮಾರ್ — ಚಿತ್ರ: ಸಕುಟುಂಬ ಸಮೇತ
- ಗಾನವಿ ಲಕ್ಷ್ಮಣ್ — ಚಿತ್ರ: ವೇದ
- ಅದಿತಿ ಪ್ರಭುದೇವ — ಚಿತ್ರ: Once upon a time in ಜಮಾಲಿಗುಡ್ಡ

ಅತ್ಯುತ್ತಮ ನಿರ್ದೇಶನ



- ಪ್ರವೀಣ್ ಕೃಪಾಕರ್ — ಚಿತ್ರ: ತಲೆದಂಡ
- ಎ.ಹರ್ಷ — ಚಿತ್ರ: ವೇದ
- ಕಿರಣ್‌ರಾಜ್ ಕೆ. — ಚಿತ್ರ:777 ಚಾರ್ಲಿ
- ರಾಹುಲ್ ಪಿ.ಕೆ. — ಚಿತ್ರ: ಸಕುಟುಂಬ ಸಮೇತ
- ರಿಷಬ್ ಶೆಟ್ಟಿ — ಚಿತ್ರ: ಕಾಂತಾರ

ಅತ್ಯುತ್ತಮ ಚೊಚ್ಚಲ ನಿರ್ದೇಶನ



- ಪ್ರವೀಣ್ ಕೃಪಾಕರ್ — ಚಿತ್ರ: ತಲೆದಂಡ
- ಕಿರಣ್‌ರಾಜ್ ಕೆ. — ಚಿತ್ರ: 777 ಚಾರ್ಲಿ
- ಶ್ರೀಧರ್ ಶಿಕಾರಿಪುರ — ಚಿತ್ರ: ಧರಣಿ ಮಂಡಲ ಮಧ್ಯದೊಳಗೆ
- ಹೇಮಂತ್ ಕುಮಾರ್ ಎಲ್. — ಚಿತ್ರ: ತುರ್ತು ನಿರ್ಗಮನ
- ಕರಣ್ ಅನಂತ್ ಹಾಗೂ ಅನಿರುದ್ಧ್ ಮಹೇಶ್ — ಚಿತ್ರ: ಹರಿಕಥೆ ಅಲ್ಲ ಗಿರಿಕಥೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಜೈನ ಧರ್ಮೀಯರ ಮೇಲೆ ಮುಸ್ಲಿಮರು ಹಲ್ಲೆ ನಡೆಸಿದ್ದು, ಕಾಂಗ್ರೆಸ್ ಪರವಾಗಿ ಘೋಷಣೆ ಕೂಗುವಂತೆ ಬೆದರಿಸಿದ್ದಾರೆ’ ಎಂದು ಹೇಳಲಾಗುವ ಕೆಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮೂರು ಚಿತ್ರಗಳಲ್ಲಿರುವ ವ್ಯಕ್ತಿಗಳು ಗಾಯಗೊಂಡ ಸ್ಥಿತಿಯಲ್ಲಿದ್ದು, ಇವು ಇತ್ತೀಚಿನ ಘಟನೆಗಳು ಎಂದು ಹೇಳಲಾಗಿದೆ. ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದ ಬಳಿಕ ಈ ಘಟನೆಗಳು ನಡೆದಿವೆ ಎಂದು ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ. ಆದರೆ ಇದು ಸುಳ್ಳು.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಚಿತ್ರಗಳು ಹಳೆಯವಾಗಿದ್ದು, ಉತ್ತರ ಪ್ರದೇಶದಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿವೆ ಎಂದು ‘ದಿ ಕ್ವಿಂಟ್’ ಜಾಲತಾಣ ವರದಿ ಮಾಡಿದೆ. 2018ರ ನವೆಂಬರ್‌ನಲ್ಲಿ, ಮುಜಫ್ಫರ್‌ನಗರದಲ್ಲಿ ವ್ಯಕ್ತಿಯೊಬ್ಬರು ತಮ್ಮ ಪತ್ನಿಯ ಮೇಲೆ ಕೌಟುಂಬಿಕ ವ್ಯಾಜ್ಯದ ಕಾರಣಕ್ಕೆ ಹಲ್ಲೆ ನಡೆಸಿದ್ದರು. ಒಂದು ಚಿತ್ರವು ಈ ಘಟನೆಗೆ ಸಂಬಂಧಿಸಿದೆ. ಎರಡನೇ ಚಿತ್ರವೂ ಉತ್ತರ ಪ್ರದೇಶದ ಅಪರಾಧ ಕೃತ್ಯವೊಂದಕ್ಕೆ ಸಂಬಂಧಿಸಿದೆ. ಮೂರನೇ ಚಿತ್ರವು ಜೈನ ಯತಿಯೊಬ್ಬರಿಗೆ ಸಂಬಂಧಿಸಿದೆ. ಇವರ ಮೇಲೆ ಮುಸ್ಲಿಮರು ಹಲ್ಲೆ ನಡೆಸಿದ್ದಾರೆ ಎಂದು ಸುಳ್ಳು ಟ್ವೀಟ್ ಮಾಡಿದ್ದ ಪೋಸ್ಟ್‌ಕಾರ್ಡ್ ಮುಖ್ಯಸ್ಥರನ್ನು ಅಂದು ಬಂಧಿಸಲಾಗಿತ್ತು ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಹಲ್ಲೆ ಆರೋಪ ನಿರಾಕರಿಸಿದ್ದ ಪೊಲೀಸರು, ಯತಿಗಳು ಅಪಘಾತದಲ್ಲಿ ಗಾಯಗೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದರು. ಈ ಮೂರು ಚಿತ್ರಗಳನ್ನು ಜೈನರ ಮೇಲೆ ಮುಸ್ಲಿಮರಿಂದ ಹಲ್ಲೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ‘ದಿ ಕ್ವಿಂಟ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಧರೆಗೆ ಆನಂದದ ನೆಲೆಗಳು

ಜಾನಪದ ಶಿಷ್ಟಿಯಲಿ, ಸಂಪತ್ಸಮಷ್ಟಿಯಲಿ |
ಜ್ಞಾನಸಂಧಾನದಲಿ, ಮೌಲ್ಯಗಣನೆಯಲಿ ||
ಮಾನವತೆ, ಮಾನುಷ್ಯಧಾರ್ಮಿಕತೆ, ಯೆದ್ದುನಿಲೆ |
ಆನಂದ ಧರೆಗಂದು – ಮಂಕುತಿಮ್ಮ || 885 ||

ಪದ-ಅರ್ಥ: ಶಿಷ್ಟಿಯಲಿ = ಶಿಸ್ತಿನಲಿ, ಸಂಪತ್ಸಮಷ್ಟಿಯಲಿ = ಸಂಪತ್ + ಸಮಷ್ಟಿಯಲಿ(ಎಲ್ಲರಲ್ಲಿ), ಯೆದ್ದುನಿಲೆ = ಎದ್ದು + ನಿಲೆ(ನಿಲೆ), ಧರೆಗಂದು = ಧರೆಗೆ + ಅಂದು.

ವಾಚ್ಯಾರ್ಥ: ಜನಪದಗಳು ಶಿಸ್ತಿನಿಂದ, ಸಂಪತ್ತನ್ನು ಸಮಾನವಾಗಿ ಅನುಭವಿಸಿದರೆ, ಜ್ಞಾನದ ಅನುಸಂಧಾನ ಮಾಡಿದರೆ, ಮೌಲ್ಯಪ್ರತಿಪಾದನೆಯಲ್ಲಿ ಮನುಷ್ಯತ್ವ, ಮಾನವತೆಗಳು ಪ್ರಮುಖವಾದರೆ, ಧರೆಗೆ ಅದರಿಂದ ಆನಂದ.

ವಿವರಣೆ: ಯಾವ ಯಾವ ನಡತೆಯಿಂದ, ಮೌಲ್ಯಗಳಿಂದ, ಚಿಂತನೆಗಳಿಂದ ಪ್ರಪಂಚಕ್ಕೆ ಒಳ್ಳೆಯದಾಗುತ್ತದೆ ಎಂದು ತಿಳಿಸುವ ಸರಣಿ ಕಗ್ಗಗಳಲ್ಲಿ ಇದೊಂದು, ಈ ಧರೆ ಆನಂದವಾಗಿರಲು ಏನು ಮಾಡಬೇಕು? ಕಗ್ಗ ಕೆಲವು ವಿಷಯಗಳನ್ನು ನಮ್ಮ ಮುಂದಿಡುತ್ತದೆ. ಜನಪದಗಳು ಶಿಸ್ತಿನಿಂದ ಇರಬೇಕು. ಎಲ್ಲ ಜನಪದಗಳು ಶಿಸ್ತಿನಿಂದ, ಪ್ರೀತಿಯಿಂದ ಇದ್ದರೆ ಅಶಾಂತಿಗೆ ಕಾರಣವೇ ಇಲ್ಲ. ಇಂದು ಜನಪದಗಳ ನಡುವಿನ ವೈಚಾರಿಕ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಅವುಗಳನ್ನು ಯುದ್ಧಭೂಮಿಯಲ್ಲಿ ನಿಲ್ಲಿಸಿವೆ. ಎರಡು ದೇಶಗಳು ಯುದ್ಧಕ್ಕೆ ಮುಖಮಾಡಿ ನಿಂತರೆ, ಇಡೀ ಪ್ರಪಂಚ ತಳಮಳಗೊಳ್ಳುತ್ತದೆ, ಶಾಂತಿ ಮಾಯವಾಗುತ್ತದೆ. ಪ್ರಪಂಚದ ಸಂಪತ್ತು ಯಾರೊಬ್ಬರದೂ ಅಲ್ಲ. ಯಾರೂ ಅದನ್ನು ತಂದವರೂ ಇಲ್ಲ. ನಿಸರ್ಗದ ಉತ್ಪನ್ನಗಳಿಂದ ಸೃಷ್ಟಿಯಾದ ಸಂಪತ್ತು ಎಲ್ಲರಿಗೂ ಸೇರಿದ್ದಾಗಿರಬೇಕು. ಉಳ್ಳವರು ಮತ್ತು ಇಲ್ಲದವರ ನಡುವಿನ ಹೆಚ್ಚುತ್ತಿರುವ ಅಂತರವೇ ಸಂಘರ್ಷಕ್ಕೆ ಕಾರಣ. ಸಂಪತ್ತು ಸಮಷ್ಟಿಯಲ್ಲಿ ಸರಿಯಾಗಿ ಹಂಚಿಕೆಯಾಗಲಿ ಎನ್ನುವುದು ಕಗ್ಗದ ಆಶಯ. ಇವಲ್ಲದೆ ಲೋಕದ ಜನ ಜ್ಞಾನಸಂಧಾನದಲ್ಲಿ ತೊಡಗಬೇಕು. ಸದಾಕಾಲ ಹೊಸ ಹೊಸ ತಿಳಿವಳಿಕೆಗಳಿಗೆ ಅನ್ವೇಷಣೆ ಮಾಡಬೇಕು. ಅದರೊಂದಿಗೆ ನಮಗೆ ಪರಂಪರಾಗತವಾಗಿ ಬಂದ ಜ್ಞಾನವನ್ನು ತಳಕುಹಾಕಿ ವಿಶೇಷವಾದ ತಿಳಿವನ್ನು ಪಡೆಯಬೇಕು. ಜೀವನದಲ್ಲಿ ಮೌಲ್ಯಗಳು ಪ್ರಧಾನವಾಗಬೇಕು. ಯಾವುದು ಮೌಲ್ಯ? ಯಾವ ನಡವಳಿಕೆಯಿಂದ ನಮಗೂ, ಪ್ರಪಂಚಕ್ಕೂ ಒಳ್ಳೆಯದಾಗುತ್ತದೋ ಅದು ಮೌಲ್ಯ. ಈ ಮೌಲ್ಯದ ಗಣನೆ ಪ್ರಪಂಚದಲ್ಲಿ ಎಲ್ಲರಲ್ಲೂ ಬಂದರೆ, ಮಾನವತೆ ತಲೆಯೆತ್ತಿ ನಿಲ್ಲುತ್ತದೆ. ಇದರೊಂದಿಗೆ ಧರ್ಮಪ್ರಜ್ಞೆ ಬೆಳೆಯಬೇಕು. ಅದರಂತೆ ಆಚರಿಸುವುದಕ್ಕೆ ಜನ ಮುಂದಾಗಬೇಕು. ಇದೆಲ್ಲ ಆದರೆ ಧರೆಗೆ ಆನಂದವಾಗುತ್ತದೆ ಎನ್ನುತ್ತದೆ ಕಗ್ಗ. ಹೌದಲ್ಲವೆ? ದೇಶದೇಶಗಳ ನಡುವೆ ಶಿಸ್ತು, ಸಂಯಮ, ಸಂಪತ್ತಿನ ಸರಿಯಾದ ವಿತರಣೆ, ಜ್ಞಾನಾಪೇಕ್ಷಿಯಾಗಿ, ಮೌಲ್ಯಗಳನ್ನು ಪಾಲಿಸಿದರೆ ಮಾನವತೆ ಮತ್ತೆ ಎತ್ತರಕ್ಕೆ ಚಿಮ್ಮುತ್ತದೆ. ಆಗ ಧರೆಯೆಲ್ಲ ಆನಂದದಲ್ಲಿ ನೆನೆಯುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣದಶಮಿ ಗಂ.26-47 ನಕ್ಷತ್ರ: ಶತಭಿಷ ಗಂ. 10-16, ಯೋಗ: ಐಂದ್ರ ಗಂ. 06-35 ನಂತರ ವೈಧೃತಿ ಗಂ. 27-56 ಕರಣ: ವಣಿಜ ಗಂ. 15- 44, ವೃಷಭ ಮಾಸದ 02 ನೇ ದಿನ, ಮಳೆನಕ್ಷತ್ರ: ಕೃತ್ತಿಕ 2. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 26 ಶವ್ವಾಲ್
ಅದೃಷ್ಟ ಸಂಖ್ಯೆ : 4, 5

ಮೇಷ: ಸಹೋದರರಲ್ಲಿ ಸಂಬಂಧಗಳು ಗಟ್ಟಿಗೊಂಡು ಸುರಕ್ಷತೆಯ ಭಾವ ಉಂಟಾಗುವುದು. ಉದ್ಯಮಿಗಳಿಗೆ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ. ಭೂ ಸಂಬಂಧಿತ ಕೆಲಸದಲ್ಲಿ ವ್ಯವಹಾರಗಳಿಂದ ಹೆಚ್ಚಿನ ಲಾಭ.

ವೃಷಭ: ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು. ನೆಂಟರಿಷ್ಟರ ಸಲಹೆ-ಸೂಚನೆಗಳನ್ನು ಆಲಿಸಿ ನಂತರದಲ್ಲಿ ಸನ್ಮಾರ್ಗದಲ್ಲಿ ನಡೆಯಿರಿ. ಅಭಿವೃದ್ಧಿಗೊಳ್ಳುವಿರಿ.

ಮಿಥುನ: ವಿದ್ಯಾರ್ಥಿಗಳು ತಮ್ಮ ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರೆಯಲು ಬಹಳಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ. ಸ್ವಂತ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡಬಹುದು. ಆಕಸ್ಮಿಕವಾಗಿ ಧನಲಾಭ ಹೊಂದುವಿರಿ.

ಕರ್ಕಾಟಕ: ನೌಕರಿಯಲ್ಲಿ ನಿಮ್ಮ ಅಭಿಪ್ರಾಯಕ್ಕೆ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ಸಿಗುವುದು. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಕಣ್ತಪ್ಪಿನಿಂದ ದ್ರವ್ಯ ನಷ್ಟವಾಗುವ ಸಂಭವ. ವಾದ ವಿವಾದಗಳಿಂದ ದೂರ ಉಳಿಯುವ ಯತ್ನ ಮಾಡಿರಿ.

ಸಿಂಹ: ಹಳೆಯ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವಿರಿ. ಹಿರಿಯರ ಆಸ್ಪತ್ರೆ, ಔಷಧಿಗಳಿಗಾಗಿ ಖರ್ಚು ಮಾಡಬೇಕಾದರೂ ಆದಾಯಕ್ಕೇನೂ ಕೊರತೆ ಇರದು.ವ್ಯಾಪಾರದಲ್ಲಿ ಇಂದು ಮಿಶ್ರಫಲವಿರುವುದು.

ಕನ್ಯಾ: ಇಂದಿನ ಬದುಕಲ್ಲಿ ನಡೆಯುವ ಕೆಲವು ವಿಷಯಗಳು ಬೇಸರ ಹುಟ್ಟಿಸಬಹುದು. ಸ್ನೇಹಿತರ ಒತ್ತಡದಿಂದಾಗಿ ಮಗಳಿಗೆ ವಿವಾಹ ಸಂಬಂಧ ಕೂಡಿ ಬರಲಿದೆ. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸ ಒಪ್ಪಿಕೊಳ್ಳುವಿರಿ.

ತುಲಾ: ಆತ್ಮೀಯರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ ದೊರಕುವುದು. ವೃತ್ತಿಪರ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವುದರಲ್ಲಿ ತಪ್ಪಿಲ್ಲ. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ವೃಶ್ಚಿಕ: ಹಿಂದಿನ ದಿನಗಳಿಗೆ ಹೋಲಿಸಿದರೆ ಈ ದಿನ ಸಂಸಾರ ನಿರ್ವಹಣೆ ಸುಲಭ. ಜೀವನದಲ್ಲಿನ ಸಂತೋಷ ಪಡೆಯಲು ಸಾಕಷ್ಟು ಅವಕಾಶಗಳು ಲಭಿಸಲಿದೆ. ಹಾಳು ವ್ಯಸನಗಳಿಗೆ ಒಳಗಾಗುವ ಪರಿಸ್ಥಿತಿ ತಪ್ಪಿಸಿಕೊಳ್ಳಿರಿ.

ಧನು: ಮನಸ್ಸಿನಲ್ಲಿ ಖಿನ್ನತೆ ಹಾಗೂ ಋಣಾತ್ಮಕ ಚಿಂತನೆಗಳು ಈ ದಿನ ಕಾಡಲಿದೆ. ಪ್ರಾರಂಭಿಸಿದ ಕೆಲಸ ನಾಳೆಗೆ ಎನ್ನದೆ ವೃತ್ತಿಯಲ್ಲಿ ಪಾದರಸದಂತೆ ಇರಲು ಪ್ರಯತ್ನಿಸಿ. ಎಲ್ಲಾ ವಿಚಾರದಲ್ಲೂ ಎಚ್ಚರದ ನಡೆ ಇರಲಿ.

ಮಕರ: ಸ್ವಯಂಕೃತ ಅಪರಾಧದ ಬಗ್ಗೆ ಎಚ್ಚರವಿರಲಿ, ಸರಿ–ತಪ್ಪುಗಳ ನಿರ್ಣಯವು ಕಷ್ಟಕರ ಎನಿಸುವುದು. ಹಿತ ಶತ್ರುಗಳು ನಾವಿದ್ದೇವೆ ಎಂದು ಹೇಳುವುದು ನಿಮಗೆ ಈ ದಿನ ಅನುಭವಕ್ಕೆ ಬರಲಿದೆ.

ಕುಂಭ: ವಿಚಾರಗಳು ಕಹಿಯಾಗಲಿ ಸಿಹಿಯಾಗಲಿ ಅದನ್ನು ಇರುವ ಹಾಗೆಯೆ ಸ್ವೀಕರಿಸುವಂತಹ ಮನೋಭಾವನೆಯನ್ನು ಬೆಳೆಸಿಕೊಳ್ಳಿ. ವಿಷಜಂತುಗಳ ಕಡಿತಕ್ಕೆ ಒಳಗಾಗುವ ಸಾಧ್ಯತೆ ಇರುವದರಿಂದ ಅತ್ಯಂತ ಎಚ್ಚರದಲ್ಲಿರಿ.


ಮೀನ: ಮುಕ್ತವಾಗಿ ಮಾತನಾಡಲಾಗದ ಸ್ವಭಾವವು ಸಭೆಯಲ್ಲಿ ನಿಮ್ಮನ್ನೇ ಉದ್ದೇಶವಾಗಿ ಇಟ್ಟು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದ ಸಂದರ್ಭ ತರುತ್ತದೆ. ಹಳೆಯ ಸಮಸ್ಯೆಗಳೇ ಹೊಸ ರೂಪ ಪಡೆದು ನಿಮ್ಮೆದುರು ಬರುವವು.

ಪದಬಂಧ 5321

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹುತ್ತ ಇಲ್ಲಿದೆ (3)
3. ಸೂಕ್ಷ್ಮವಾದ ಪರಿಶೀಲನೆ (3)
4.ಗಡಿ ಬಳಿ ಖರೀದಿಸಿದ ದೊಡ್ಡ ಹಾರೆ (3)
5.ಅಗುಳು ನುಂಗುವಾಗ ಉದುರಿದ ಅಶ್ರು (2)
6.ಕರದಲ್ಲಿರುವುದು ನೀರು ತುಂಬಿದ ಕಳಶ(3)
8.ವಿಷಯ ತಿಳಿಸಿದಾಗ ಆಗಿರುವ ದುಃಖ (3)
9.ಮಾತು ಕೇಳುತ್ತಿರುವ ಸೋದರಮಾವ (3)
11.ನರನು ನೋಡಿರುವ ಪಟ್ಟಣ (3)
14.ದಿಟ್ಟತನದಿಂದ ನುಡಿದಿರುವ ಸತ್ಯ (2)
15.ಈತ ಭಾರ ಹೊರುವ ಕೂಲಿಯಾಳು (3)
16.ಬಯ್ಯಲು ಸೂಕ್ತವೆನಿಸಿದ ವಿಸ್ತಾರವಾದ ಜಾಗ (3)
17.ತಾರೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
2.ಕರುವಿನ ಪಚನಾಂಗ (3)
3.ಓರಿಗೆಯವರು ಧರಿಸಿರುವ ಕಂಠಾಭರಣ(3)
4.ಟಾರ ರಸ್ತೆಯ ಬಳಿಯಲ್ಲಿರುವ ಮೋರಿ (3)
5.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
6.ದನಕ್ಕಾಗಿ ನಡೆದ ಕಾಳಗ (3)
7.ಈತ ಪಕ್ಕಾ ಹಳ್ಳಿಯವ! (3)
10.ಲಟಕ್ಕನೆ ಮುತ್ತಿಕ್ಕಿದ ಹಣೆ (3)
12.ರಸ್ತೆಯ ಉದ್ದಗಲ ನಡೆಯುತ್ತಿರುವ ಗಲಾಟೆ (3)
13.ಮಹನೀಯ ಕಟ್ಟಿಸಿರುವ ಭವ್ಯ ಸೌಧ (3)
14.ದಿನದಲ್ಲೇ ಮಂತ್ರಿ ಬಂದಿರುವನಲ್ಲಾ! (3)



5320ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸ್ಥಾಪಕ 4.ದರ್ಶನ
5.ಗುಣಾಕಾರ 6.ಪರಿಮಾಣ
8.ಟಕಾ 10.ತಪ
13.ದಾರ್ಶನಿಕ 14.ಹರಿದಾರಿ
15.ರಗಾಪ 16.ಕಲ್ಯಾಣ

ಮೇಲಿಂದ ಕೆಳಕ್ಕೆ:
1.ಉದರವೈರಾಗ್ಯ
2.ಸ್ಥಾನಪಲ್ಲಟ
3.ನಕಾಶೆ 5.ಗುಣವಂತ
7.ಆಯವ್ಯಯಪಟ್ಟಿ
9.ಕಾಲುದಾರಿ 11.ಏಕೀಕರಣ
12.ಬೈರಿಗೆ

ಸುಡೊಕು 5707

4		6			8	5		1
	5		2	1			7	
1		2			5	3		8
6		9				8		
			5	4	6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5706 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು

413



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,398
ಇಂದಿನ ಅಂತ್ಯ	18,286
▼	112
ದಿನದ ಕನಿಷ್ಠ	18432

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650(1650)
ಸೋಯಾ (ರಿಫೈನ್ಡ್)	₹950(947)
ಸೂರ್ಯಕಾಂತಿ (ರಿಫೈನ್ಡ್)	₹960(965)
ಪಾಮೋಲಿನ್	₹920(922)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹156.50
ಆರ್‌ಎಸ್‌ಎಸ್-5	₹150.50
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

16–5–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660(1660)
ಒಂದು ವಾರದ ಡೆಲಿವರಿ	1655(1655)
ಸೋಯಾ ಕಚ್ಚಾ	875(850)
ಪಾಮ್ ವಾರದ ಡೆಲಿವರಿ	918(920)
ಸೂರ್ಯಕಾಂತಿ ಎಣ್ಣೆ ಕಚ್ಚಾ	880(880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60700(61000)

ಬೆಳ್ಳಿ ಕೆ.ಜಿ 71900(72500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಅರಸಿಕೆರೆ ₹9000-9360

ಚೀನಾದಿಂದ ಲ್ಯಾಪ್‌ಟಾಪ್, ಪಿ.ಸಿ. ಆಮದು ಇಳಿಕೆ

ಪಿಎಲ್‌ಐ ಯೋಜನೆ ಜಾರಿಯಿರುವಲ್ಲಿ ತಗ್ಗಿದ ಆಮದು • ಜಿಟಿಆರ್‌ಐ ವರದಿ



ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್, ವೈಯಕ್ತಿಕ ಕಂಪ್ಯೂಟರ್, ಸೌರಕೋಶಗಳು, ಇಂಟಿಗ್ರೇಟೆಡ್ ಸರ್ಕಿಟ್‌ಗಳಂತಹ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಭಾರತವು ಚೀನಾದಿಂದ ಆಮದು ಮಾಡಿಕೊಳ್ಳುವ ಪ್ರಮಾಣವು 2022–23ರಲ್ಲಿ ಕಡಿಮೆ ಆಗಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ವರದಿ ಹೇಳಿದೆ.

ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯು ಜಾರಿಯಲ್ಲಿ ಇರುವ ವಲಯದ ಎಲೆಕ್ಟ್ರಾನಿಕ್ ಉತ್ಪನ್ನಗಳ ಆಮದು ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂದು ಜಿಟಿಆರ್‌ಐ ಹೇಳಿದೆ. ವೈದ್ಯಕೀಯ ಉಪಕರಣಗಳ ಆಮದು 2022–23ರಲ್ಲಿ (2021–22ಕ್ಕೆ ಹೋಲಿಸಿದರೆ) ಶೇಕಡ 13.6ರಷ್ಟು ಕಡಿಮೆ ಆಗಿದೆ.

ಅದೇ ರೀತಿ, ಸೌರಕೋಶಗಳು, ಬಿಡಿಭಾಗಗಳು, ಡಯೋಡ್‌ಗಳ ಆಮದು ಶೇ 70.9ರಷ್ಟು ಕಡಿಮೆ ಆಗಿದೆ. ಲ್ಯಾಪ್‌ಟಾಪ್, ಪಿ.ಸಿ. ಆಮದು ಶೇ 23.1ರಷ್ಟು ಕಡಿಮೆ ಆಗಿದೆ. ಮೊಬೈಲ್ ಫೋನ್ ಆಮದು ಶೇ 4.1ರಷ್ಟು ಇಳಿಕೆಯಾಗಿದೆ. ಇಂಟಿಗ್ರೇಟೆಡ್ ಸರ್ಕಿಟ್ ಆಮದು ಶೇ 4.5ರಷ್ಟು ಇಳಿಕೆಯಾಗಿದೆ.

ಯೂರಿಯಾ ಮತ್ತು ಇತರ ರಸಗೊಬ್ಬರಗಳ ಆಮದು ಶೇ 26ರಷ್ಟು ಕಡಿಮೆ ಆಗಿದೆ. ಆದರೆ ಲಿಥಿಯಂ ಅಯಾನ್ ಬ್ಯಾಟರಿಗಳ ಆಮದು ಶೇ 96ರಷ್ಟು ಹೆಚ್ಚಾಗಿದೆ.

‘ಭಾರತವು ಚೀನಾದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳಲ್ಲಿ ಇಳಿಕೆಯಾಗಿರುವ ಸೂಚನೆಗಳಿವೆ. ಚೀನಾದಿಂದ ಆಮದಾಗುವ ಎಲೆಕ್ಟ್ರಾನಿಕ್ಸ್ ಉಪಕರಣಗಳ ಪ್ರಮಾಣ ಕಡಿಮೆಯಾಗಿದೆ. ಚೀನಾದಿಂದ ಆಮದಾಗುವ ಎಲ್ಲ ಬಗೆಯ ಉತ್ಪನ್ನಗಳ ಪ್ರಮಾಣದಲ್ಲಿ ಕಡಿಮೆ ಪ್ರಮಾಣದ ಏರಿಕೆ ದಾಖಲಾಗಿದೆ’ ಎಂದು ಜಿಟಿಆರ್‌ಐ ಸಹ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಕೆಲವು ಉತ್ಪನ್ನಗಳ ಆಮದು ಕಡಿಮೆ ಆಗಿದ್ದರೂ, ಭಾರತವು ಚೀನಾದಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ದೇಶವಾಗಿಯೇ ಮುಂದುವರಿದಿದೆ. 2021–22ರಲ್ಲಿ ಚೀನಾದಿಂದ ಭಾರತಕ್ಕೆ ಆಮದಾಗಿರುವ ಸರಕುಗಳ ಆಮದು ಮೊತ್ತವು ₹7.78 ಲಕ್ಷ ಕೋಟಿ ಇದ್ದಿದ್ದು 2022–23ರಲ್ಲಿ ₹7.48 ಲಕ್ಷ ಕೋಟಿಗೆ ತಗ್ಗಿದೆ.

ಭಾರತವು ಹೆಚ್ಚು ಸರಕು, ಸೇವೆಗಳನ್ನು ರಫ್ತು ಮಾಡುವುದು ಅಮೆರಿಕ, ಯುಎಇ, ನೆದರ್ಲೆಂಡ್ಸ್ ಮತ್ತು ಚೀನಾಕ್ಕೆ. ಮೊದಲ ಮೂರು ದೇಶಗಳಿಗೆ ರಫ್ತು ಹೆಚ್ಚಾಗಿದೆ. ಆದರೆ, ಚೀನಾಕ್ಕೆ ಆಗುವ ರಫ್ತು ತಗ್ಗಿದೆ.

11 ಸಾವಿರ ಉದ್ಯೋಗ ಕಡಿತ

ಲಂಡನ್ (ಎಎಫ್‌ಪಿ): ಬ್ರಿಟಿಷ್ ದೂರ ಸಂಪರ್ಕ ಸೇವಾ ಕಂಪನಿ ವೊಡಾಫೋನ್ ಮುಂದಿನ ಮೂರು ವರ್ಷಗಳಲ್ಲಿ 11 ಸಾವಿರ ನೌಕರರನ್ನು ಕೆಲಸದಿಂದ ತೆಗೆಯಲಿದೆ. ಕಂಪನಿಯ ಹೊಸ ಸಿಇಒ, ಕಂಪನಿಯನ್ನು ಇನ್ನಷ್ಟು ‘ಸರಳಗೊಳಿಸಲು’ ಬಯಸಿರುವ ಕಾರಣ ಈ ಕ್ರಮ ಅನುಸರಿಸಲು ತೀರ್ಮಾನಿಸಲಾಗಿದೆ. 11 ಸಾವಿರ ನೌಕರರನ್ನು ಕೆಲಸದಿಂದ ತೆಗೆದರೆ ವೊಡಾಫೋನ್ ಕಂಪನಿಯು ತನ್ನ ಒಟ್ಟು ನೌಕರರಲ್ಲಿ ಶೇಕಡ 10ಕ್ಕಿಂತ ಹೆಚ್ಚಿನ ನೌಕರರನ್ನು ವಜಾಗೊಳಿಸಿದಂತೆ ಆಗುತ್ತದೆ.

ನಿಷ್ಕ್ರಿಯ ಗೂಗಲ್ ಖಾತೆಗಳು ಡಿಲೀಟ್

ಬೆಂಗಳೂರು (ರಾಯಿಟರ್ಸ್): ಎರಡು ವರ್ಷಗಳಿಗೂ ಹೆಚ್ಚು ಅವಧಿಯಿಂದ ಬಳಸದ ಗೂಗಲ್ ಖಾತೆಗಳು ಡಿಲೀಟ್ ಆಗಲಿವೆ. ಹ್ಯಾಕಿಂಗ್ ಸೇರಿದಂತೆ ಹಲವು ಬಗೆಯ ಬೆದರಿಕೆಗಳನ್ನು ತಡೆಯುವ ಉದ್ದೇಶದಿಂದ ಗೂಗಲ್ ಕಂಪನಿ ಈ ತೀರ್ಮಾನಕ್ಕೆ ಬಂದಿದೆ.

ಎರಡು ವರ್ಷಗಳಲ್ಲಿ ಒಮ್ಮೆಯೂ ಸೈನ್‌ಇನ್ ಆಗಿರದ ಖಾತೆಗಳನ್ನು ಗೂಗಲ್ ಡಿಲೀಟ್ ಮಾಡಲಿದೆ. ಜಿಮೇಲ್, ಗೂಗಲ್ ಡಾಕ್ಸ್, ಡ್ರೈವ್, ಮೀಟ್, ಯೂಟ್ಯೂಬ್, ಗೂಗಲ್ ಫೋಟೊಸ್ ಸೇರಿದಂತೆ ಗೂಗಲ್ ಖಾತೆಯ ಮೂಲಕ ಗ್ರಾಹಕರು ಬಳಕೆ ಮಾಡುವ ಎಲ್ಲ ಸೇವೆಗಳಲ್ಲಿ ಇರುವ ದತ್ತಾಂಶವನ್ನು ಅಳಿಸಲಾಗುತ್ತದೆ.

ಇದು ವೈಯಕ್ತಿಕ ಬಳಕೆಯ ಗೂಗಲ್ ಖಾತೆಗಳಿಗೆ ಮಾತ್ರ ಅನ್ವಯ. ಕಂಪನಿಗಳಿಗೆ, ಶಾಲೆಗಳಿಗೆ ಗೂಗಲ್ ಕಂಪನಿ ಒದಗಿಸುತ್ತಿರುವ ಪ್ರತ್ಯೇಕ ಖಾತೆಗಳಿಗೆ ಇದು ಅನ್ವಯವಾಗುವುದಿಲ್ಲ. ಸಕ್ರಿಯವಾಗಿರದ ಖಾತೆಗಳಲ್ಲಿ ಇರುವ ವಸ್ತು–ವಿಷಯವನ್ನು ಅಳಿಸಲಾಗುತ್ತದೆ. ಆದರೆ ಖಾತೆಯನ್ನು ಡಿಲೀಟ್ ಮಾಡುವುದಿಲ್ಲ ಎಂದು ಗೂಗಲ್ 2020ರಲ್ಲಿ ಹೇಳಿತ್ತು. ಈಗ ಕಂಪನಿಯು ನಿಲುವು ಬದಲಾಯಿಸಿದೆ. ಮಂಗಳವಾರದಿಂದ ಗೂಗಲ್ ಕಂಪನಿಯು, ನಿಷ್ಕ್ರಿಯವಾಗಿರುವ ಖಾತೆಗಳ ಇಮೇಲ್ ವಿಳಾಸಕ್ಕೆ ಸಂದೇಶ ರವಾನಿಸಲಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಸಂತ ಭಟ್, ಕಾರ್ಕಳ

● **ಪ್ರಶ್ನೆ:** ನಾನು ಹಾಗೂ ನನ್ನ ಪತ್ನಿ ಖಾಸಗಿ ಕಂಪನಿಯ ಉದ್ಯೋಗದಲ್ಲಿದ್ದು ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಒಂದಷ್ಟು ಮೊತ್ತವನ್ನು ಬ್ಯಾಂಕ್ ಎಫ್.ಡಿ. ಮಾಡಿದ್ದೇವೆ. ಬ್ಯಾಂಕಿನಲ್ಲಿ ನನ್ನ ಹಾಗೂ ನನ್ನ ಪತ್ನಿಯ ಪ್ಯಾನ್ ಸಂಖ್ಯೆಯನ್ನು ಮಕ್ಕಳ ಖಾತೆಗೆ ಜೋಡಿಸಲಾಗಿದೆ. ಬ್ಯಾಂಕಿನವರು ಈ ಸಂಬಂಧ ತೆರಿಗೆಯನ್ನೂ ಕಡಿತಗೊಳಿಸುವವರಿದ್ದಾರೆ. ನಾವು ತೆರಿಗೆ ವಿವರ ಸಲ್ಲಿಸುವಾಗ ಮಕ್ಕಳ ಹೆಸರಲ್ಲಿರುವ ಬಡ್ಡಿ ಆದಾಯಕ್ಕೆ ತೆರಿಗೆ ಕಟ್ಟಬೇಕೇ? ಹೌದಾಗಿದ್ದರೆ ನಮ್ಮಿಬ್ಬರಲ್ಲಿ ಯಾರು ತೆರಿಗೆ ಕಟ್ಟಬೇಕು? ಈ ತೆರಿಗೆ ಉಳಿತಾಯ ಮಾಡುವ ಉಪಾಯಗಳಿವೆಯೇ?

ಉತ್ತರ: 18 ವರ್ಷ ತುಂಬಿರದ ಮಕ್ಕಳ ಹೆಸರಲ್ಲಿ ಬರುವ ಯಾವುದೇ ಆದಾಯಕ್ಕೆ ಮಕ್ಕಳ ತಂದೆ ಅಥವಾ ತಾಯಿ ಆದಾಯ ತೆರಿಗೆ ಪಾವತಿಸಬೇಕು. ಇಲ್ಲಿರುವ ಒಂದು ಪ್ರಶ್ನೆ, ತಂದೆ-ತಾಯಿ ಪೈಕಿ ಯಾರು ನಿಜವಾಗಿ ತೆರಿಗೆ ಪಾವತಿಸಬೇಕು ಎನ್ನುವುದು. ಸೆಕ್ಷನ್ 64(1ಎ) ಅಡಿಯಲ್ಲಿ ಪೋಷಕರ ಆದಾಯಕ್ಕೆ ಮಕ್ಕಳ ಆದಾಯ ಸೇರಿಸಿ ತೆರಿಗೆ ಪಾವತಿ ಮಾಡಬೇಕಾಗುತ್ತದೆ. ಇಲ್ಲಿ ಉಲ್ಲೇಖಿಸಲಾದ ನಿಯಮದಂತೆ, ತಂದೆ ಅಥವಾ ತಾಯಿ ಪೈಕಿ ಯಾರ ಆದಾಯ ಅಧಿಕವೋ ಅವರ ಆದಾಯದಲ್ಲಿಯೇ ಮಕ್ಕಳ ಹೆಸರಲ್ಲಿ ಬರುವ ಆದಾಯಕ್ಕೂ ತೆರಿಗೆ ಅನ್ವಯವಾಗುತ್ತದೆ. ಪ್ರತೀ ವರ್ಷ ಇದನ್ನು ನೋಡುವ ಅಗತ್ಯವಿಲ್ಲ. ಮೊದಲ ಬಾರಿಗೆ ಈ ನಿಯಮ ಪಾಲನೆ ಮಾಡಿದರೆ, ಮುಂದಿನ ವರ್ಷ ಅದೇ ರೀತಿ ಮುಂದುವರಿಸಬಹುದು. ಒಂದು ವೇಳೆ ತೆರಿಗೆ ನಷ್ಟವಾಗುವ ಸಂದೇಹದಲ್ಲಿ ಈ ಪ್ರಕ್ರಿಯೆಯನ್ನು ತಂದೆ ಅಥವಾ ತಾಯಿಯ ಹೆಸರಲ್ಲಿ ಬದಲಿಸಬೇಕಾದರೆ, ಸಂಬಂಧಪಟ್ಟ ತೆರಿಗೆ ಅಧಿಕಾರಿಗಳು ಅಗತ್ಯ ಮಾಹಿತಿಯನ್ನು ಪೋಷಕರಿಂದ ಪಡೆದು ಮುಂದುವರಿಯಬೇಕು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ‘ವಯಸ್ಕನಲ್ಲ’ ಎಂದು ಪರಿಗಣಿಸಲಾಗುತ್ತದೆ. ಸ್ವತಂತ್ರ ಗಳಿಕೆಯ ಆದಾಯ (ಉದಾಹರಣೆಗೆ: ಕ್ರೀಡಾಪಟು, ಸಂಗೀತ, ನಾಟ್ಯ, ಕಲೆ ಇತ್ಯಾದಿ ವೈಯಕ್ತಿಕ ಸಾಧನೆಯಿಂದ ಸಿಗುವ ಸಂಪಾದನೆ) ಇಲ್ಲದ ಹೊರತು ಇವರು ಪ್ರತ್ಯೇಕ ತೆರಿಗೆ ವಿವರ ಸಲ್ಲಿಸುವ ಪ್ರಶ್ನೆ ಬರುವುದಿಲ್ಲ. ಹೀಗಾಗಿ 18 ವರ್ಷ ತುಂಬಿರದವರ ಹೆಸರಲ್ಲಿ ಬ್ಯಾಂಕ್ ಉಳಿತಾಯ ಖಾತೆ, ಸ್ಥಿರ ಠೇವಣಿ ಇತ್ಯಾದಿಯನ್ನು ತೆರೆದರೆ ಅದರಿಂದ ಬರುವ ಆದಾಯವು ಪೋಷಕರ ಹೆಸರಲ್ಲೇ ತೆರಿಗೆಗೊಳಪಡುತ್ತದೆ. ಅಂತಹ ಆದಾಯ ಗಳಿಕೆಯ ಬಹುಪಾಲು ಹೂಡಿಕೆಯೂ ಪೋಷಕರದ್ದೇ ಆಗಿರುತ್ತದೆ ಎಂಬುದು ಗಮನಾರ್ಹ. ಮಕ್ಕಳಿಗೆ 18 ವರ್ಷ ವಯಸ್ಸು ಆದೊಡನೆ, ಪ್ಯಾನ್ ಪಡೆದು ತಮ್ಮದೇ ಹೆಸರಲ್ಲಿ ವಿವರ ಸಲ್ಲಿಸಬೇಕು.

ಮಕ್ಕಳ ಆದಾಯವು ₹1500ಕ್ಕಿಂತ ಕಡಿಮೆಯಿದ್ದರೆ, ಅವರ ಆದಾಯವನ್ನು ಪೋಷಕರ ಆದಾಯಕ್ಕೆ ಸೇರ್ಪಡೆ ಮಾಡಲಾಗುವುದಿಲ್ಲ. ಇದು ವಿನಾಯಿತಿ ಮೊತ್ತವಾಗಿದೆ. ಈ ಮೊತ್ತ ಮೀರಿ ಆದಾಯ ಗಳಿಸುತ್ತಿದ್ದರೆ, ₹1500ಕ್ಕೆ ವಿನಾಯಿತಿಯನ್ನು ಸೀಮಿತಗೊಳಿಸಲಾಗುತ್ತದೆ. ಈ ಮಾಹಿತಿ ಗಮನದಲ್ಲಿಟ್ಟುಕೊಂಡು ನೀವು ವ್ಯವಹರಿಸಬಹುದು. ಸಾಮಾನ್ಯವಾಗಿ ಯಾವುದೇ ಬ್ಯಾಂಕ್, ಮಿತಿಗಿಂತ ಅಧಿಕ ಬಡ್ಡಿ ಪಾವತಿ ಮಾಡಿದಾಗ ಯಾರ ಪ್ಯಾನ್ ಸಂಖ್ಯೆಗೆ ಖಾತೆ ಜೋಡಣೆಯಾಗಿದೆಯೋ ಅವರ ಹೆಸರಲ್ಲಿ ತೆರಿಗೆ ಕಡಿತ ಮಾಡುತ್ತದೆ. ವಾಸ್ತವ ಹೀಗಿದ್ದರೂ, ಪ್ಯಾನ್ ಜೋಡಣೆಗೂ ಮುನ್ನ ಮೇಲಿನ ಮಾಹಿತಿ ಗಮನದಲ್ಲಿಡುವುದು ಸೂಕ್ತ.

ನಾರಾಯಣಸ್ವಾಮಿ, ಕತ್ರಿಗುಪ್ಪೆ, ಬೆಂಗಳೂರು

● **ಪ್ರಶ್ನೆ:** ನಾನು 65 ವರ್ಷ ವಯಸ್ಸಿನ ನಿವೃತ್ತ ಉದ್ಯೋಗಿ. ನನ್ನ ಪತ್ನಿ ಗೃಹಿಣಿ, ವಯಸ್ಸು 59 ವರ್ಷ. ಮುಂದಿನ 3-4 ತಿಂಗಳಲ್ಲಿ ನಾವು ವಿದೇಶದಲ್ಲಿರುವ ನನ್ನ ಮಗನ ಮನೆಗೆ ಸುಮಾರು ಐದರಿಂದ ಆರು ತಿಂಗಳ ಮಟ್ಟಿಗೆ ತೆರಳಲಿದ್ದೇವೆ. ಇದರ ಎಲ್ಲ ವೆಚ್ಚವನ್ನು ನಾನು ಭರಿಸಲಿದ್ದೇನೆ. ಇತ್ತೀಚೆಗೆ ನಾನು ತಿಳಿದುಕೊಂಡಂತೆ, ವಿದೇಶಕ್ಕೆ ಪ್ರಯಾಣ ಹೋಗುವವರು ಆದಾಯ ತೆರಿಗೆ ವಿವರ ಕಡ್ಡಾಯವಾಗಿ ಸಲ್ಲಿಸಬೇಕು. ನಾನು ಪಿಂಚಣಿ ಹಾಗೂ ಬಡ್ಡಿ ಆದಾಯದಿಂದ ಜೀವನ ನಡೆಸುತ್ತಿದ್ದೇನೆ, ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ಆದರೆ ನನ್ನ ಪತ್ನಿಗೆ ಯಾವುದೇ ಆದಾಯ ಇಲ್ಲ. ಹಾಗಿದ್ದರೂ ವಿದೇಶಕ್ಕೆ ಪ್ರಯಾಣ ಮಾಡಿದ ವರ್ಷದಲ್ಲಿ ವಿವರ ಸಲ್ಲಿಸಬೇಕೇ?

ಉತ್ತರ: ಆದಾಯ ತೆರಿಗೆಗೆ ಸಂಬಂಧಿಸಿದ ಸಾಮಾನ್ಯ ನಿಯಮದಂತೆ, ಯಾವುದೇ ವ್ಯಕ್ತಿಯ ಒಟ್ಟು ಆದಾಯವು ಗರಿಷ್ಠ ವಿನಾಯಿತಿಯ ಮಿತಿಗಿಂತ ಅಧಿಕವಾಗಿದ್ದಾಗ, ಸಹಜವಾಗಿ ತೆರಿಗೆ ವಿವರ ಸಲ್ಲಿಸಬೇಕಾಗಿರುತ್ತದೆ. ಇದಲ್ಲದೆ ಕೆಲವೊಂದು ಬಾರಿ ಆದಾಯ ತೆರಿಗೆ ನಿಯಮದಂತೆ, ಕೇವಲ ಆದಾಯವನ್ನು ಮಾತ್ರ ಮಾನದಂಡವಾಗಿಡದೆ, ವ್ಯಕ್ತಿಯೊಬ್ಬ ಮಾಡುವ ವಾರ್ಷಿಕ ಆರ್ಥಿಕ ವ್ಯವಹಾರಗಳನ್ನು ಅವಲಂಬಿಸಿಯೂ ತೆರಿಗೆ ವಿವರ ಸಲ್ಲಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ವ್ಯಕ್ತಿಗೆ ಆದಾಯ ಇದೆಯೇ ಇಲ್ಲವೇ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸೆಕ್ಷನ್ 139(1)ರ ಕೆಲವು ನಿಬಂಧನೆಗಳ ಪ್ರಕಾರ, ವಿದೇಶ ಪ್ರಯಾಣಕ್ಕೆ ಸಂಬಂಧಿಸಿ ಯಾವುದೇ ವ್ಯಕ್ತಿ ವಾರ್ಷಿಕವಾಗಿ ₹2 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ತನಗೆ ಅಥವಾ ಇತರಿಗಾಗಿ ವೆಚ್ಚ ಮಾಡಿದಾಗ ತೆರಿಗೆ ವಿವರ ಸಲ್ಲಿಸುವುದು ಕಡ್ಡಾಯ. ಇಲ್ಲಿ ಯಾವ ವ್ಯಕ್ತಿ ಖರ್ಚು ವೆಚ್ಚ ಭರಿಸುತ್ತಾನೋ ಆ ವ್ಯಕ್ತಿಯಷ್ಟೇ ತೆರಿಗೆ ವಿವರ ಸಲ್ಲಿಸಲು ಬಾಧ್ಯಸ್ಥ.

ಇನ್ನು ನಿಮ್ಮ ವಿಚಾರಕ್ಕೆ ಸಂಬಂಧಿಸಿ ಪ್ರಶ್ನೆಯಲ್ಲಿ ತಿಳಿಸಿರುವಂತೆ, ನೀವು ಹಾಗೂ ನಿಮ್ಮ ಪತ್ನಿ ವಿದೇಶಕ್ಕೆ ಹೋಗುವ ಸಂಬಂಧ ಇರುವ ಎಲ್ಲಾ ಖರ್ಚು ವೆಚ್ಚಗಳನ್ನು ನಿಮ್ಮ ಖಾತೆಯಿಂದಲೇ ಭರಿಸಲಿದ್ದೀರಿ. ನಿಮ್ಮ ವಿದೇಶ ಪ್ರಯಾಣದ ಹೊರತಾಗಿಯೂ ನೀವು ಈಗಾಗಲೇ ಆದಾಯ ತೆರಿಗೆಯ ವಿವರ ಸಲ್ಲಿಸುತ್ತಿದ್ದೀರಿ. ಹೀಗಾಗಿ ನಿಮ್ಮ ಪತ್ನಿ ಸ್ವಂತ ಖರ್ಚು ಮಾಡುವ ಸಂದರ್ಭ ಇಲ್ಲದಿದ್ದಾಗ ಅವರು ವಿವರ ಸಲ್ಲಿಸುವ ಅಗತ್ಯವಿಲ್ಲ. ಮೇಲಿನ ನಿಯಮದಂತೆ ವಿದೇಶ ಪ್ರಯಾಣ ಮಾಡಿದ ಮಾತ್ರಕ್ಕೆ ತೆರಿಗೆ ವಿವರ ಸಲ್ಲಿಸುವುದು ಕಡ್ಡಾಯವಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560001 ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1,000 - 1,050
ಹೆರಕಿದ್ದು	1,200-1,300
ಹಸಿರು ಸಾಧಾರಣ	800-900
ಹಸಿರು ಉತ್ತಮ	1,000-1,100
ಹಸಿರು ಅತಿ ಉತ್ತಮ	1,600-1,650
ಕಾಳು ಮೆಣಸು	- 470
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-40,000
ಹಳತು	48,000-53,000
ಕಾರ್ಕಳ	
ಹೊಸತು	30,000-40,500
ಹಳತು	40,000-53,000
ಸಾಗರ	
ಬಿಳಿಗೋಟು	15,690-31,170
ಚಾಲಿ	35,299-36,400
ಕೋಕ	24,223-31,989
ಕೆಂಪುಗೋಟು	30,989-33,699
ರಾಶಿ	33,009-47,219
ಸಿಪ್ಪೆಗೋಟು	19,866-21,399
ಶಿವಮೊಗ್ಗ	
ಬೆಟ್ಟೆ	46,500-53,599
ಗೊರಬಲು	18,000-34,651
ರಾಶಿ	34,169-48,100
ಸರಕು	45,159-81,519
ಸಿದ್ದಾಪುರ	
ಬಿಳಿಗೋಟು	27,399-32,999
ಚಾಲಿ	34,599-37,499
ಕೋಕ	26,699-32,899
ಹಳೆಚಾಲಿ	35,529-35,529
ಕೆಂಪುಗೋಟು	30,469-32,869
ರಾಶಿ	43,469-46,499
ತಟ್ಟಿಬೆಟ್ಟೆ	37,499-44,889
ಶಿರಸಿ	
ಬೆಟ್ಟೆ	37,421-44,899
ಬಿಳಿಗೋಟು	20,899-33,099
ಚಾಲಿ	35,069-38,799
ಕೆಂಪುಗೋಟು	26,799-34,689
ರಾಶಿ	43,698-46,599
ಯಲ್ಲಾಪುರ	
ಬಿಳಿಗೋಟು	26,899-34,699
ಚಾಲಿ	34,899-37,899
ಕೋಕ	17,601-31,000
ಕೆಂಪುಗೋಟು	27,236-35,299
ರಾಶಿ	41,199-50,509
ತಟ್ಟಿಬೆಟ್ಟೆ	36,409-45,699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,250	15,300	15,300	189.40 ಸೆಂಟ್ಸ್
ಎಸಿ	7,980	7,700	7,700	
ಆರ್‌ಪಿ	10,400	10,6750	10,550	ಲಂಡನ್
ಆರ್‌ಸಿ	5,860	230	5,750	- ಡಾಲರ್ 2488

ಜಿಯೊ–ಬಿಪಿಯಿಂದ ಪ್ರೀಮಿಯಂ ಡೀಸೆಲ್ ಬಿಡುಗಡೆ

ಮುಂಬೈ (ಪಿಟಿಐ): ಜಿಯೊ–ಬಿಪಿ ಕಂಪನಿಯು ಪ್ರೀಮಿಯಂ ಗುಣಮಟ್ಟದ ಡೀಸೆಲ್‌ಅನ್ನು ಮಾರುಕಟ್ಟೆಗೆ ತಂದಿದೆ. ಇದು ಹೆಚ್ಚಿನ ಮೈಲೇಜ್ ನೀಡುತ್ತದೆ, ಈ ಇಂಧನ ಬಳಸಿ ಪ್ರತಿ ಟ್ರಕ್‌ಗೆ ₹1.1 ಲಕ್ಷದವರೆಗೆ ಉಳಿತಾಯ ಮಾಡಬಹುದು ಎಂದು ಕಂಪನಿ ಹೇಳಿದೆ.

ಈ ಡೀಸೆಲ್‌ನ ಬೆಲೆಯು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಾರಾಟ ಮಾಡುವ ಡೀಸೆಲ್ ಬೆಲೆಗಿಂತ ಕಡಿಮೆ ಎಂದು ಕೂಡ ಜಿಯೊ–ಬಿಪಿ ಹೇಳಿದೆ. ‘ಹೊಸದಾಗಿ ಬಿಡುಗಡೆ ಮಾಡಿರುವ ಡೀಸೆಲ್ ದೇಶದಾದ್ಯಂತ ಕಂಪನಿಯ ಬಂಕ್‌ಗಳಲ್ಲಿ ಲಭ್ಯವಿದೆ’ ಎಂದು ಕಂಪನಿ ಹೇಳಿದೆ.

ಮೊಬೈಲ್ ಪತ್ತೆ: ‘ಸಂಚಾರ್ ಸಾಥಿ’ಗೆ ಚಾಲನೆ

ನವದೆಹಲಿ (ಪಿಟಿಐ): ಕಳೆದುಹೋದ ಅಥವಾ ಕಳ್ಳತನ ಆಗಿರುವ ಮೊಬೈಲ್ ಫೋನ್‌ಗಳನ್ನು ಬ್ಲಾಕ್ ಮಾಡುವ ಅವಕಾಶವನ್ನು ಮಂಗಳವಾರದಿಂದ ದೇಶದಾದ್ಯಂತ ವಿಸ್ತರಿಸಲಾಗಿದೆ. ಈ ಸೌಲಭ್ಯ ಕಲ್ಪಿಸುವುದಕ್ಕಾಗಿ ದೂರಸಂಪರ್ಕ ಇಲಾಖೆಯು ‘ಸಂಚಾರ್ ಸಾಥಿ’ ಎಂಬ ಪೋರ್ಟಲ್ ಆರಂಭಿಸಿದೆ.

ಈ ಪೋರ್ಟಲ್ ಬಳಸಿ ಗ್ರಾಹಕರು ತಮ್ಮ ಮೊಬೈಲ್ ಫೋನ್ ಎಲ್ಲಿದೆ ಎಂಬುದನ್ನು ಪತ್ತೆ ಮಾಡಬಹುದು, ಅದನ್ನು ಬ್ಲಾಕ್ ಮಾಡಬಹುದು ಹಾಗೂ ಬಳಸಿದ ಫೋನ್ ಖರೀದಿಸುವ ಮೊದಲು ಅದರ ಅಸಲಿತನ ಪರೀಕ್ಷಿಸಬಹುದು ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ವಾಟ್ಸ್‌ಆ್ಯಪ್ ಕರೆಗಳ ಮೂಲಕ ನಡೆಯುತ್ತಿರುವ ವಂಚನೆಯ ಬಗ್ಗೆ ಪ್ರಶ್ನಿಸಿದಾಗ ವೈಷ್ಣವ್ ಅವರು, ‘ವಂಚನೆಯಲ್ಲಿ ತೊಡಗಿರುವ ಯಾವುದೇ ಸಂಖ್ಯೆಯನ್ನು ನಿಷ್ಕ್ರಿಯಗೊಳಿಸಲು ವಾಟ್ಸ್‌ಆ್ಯಪ್ ಕಂಪನಿ ಒಪ್ಪಿದೆ’ ಎಂದು ಉತ್ತರಿಸಿದ್ದಾರೆ. ವಂಚನೆಯಲ್ಲಿ ತೊಡಗಿದ ಕಾರಣಕ್ಕೆ 36 ಲಕ್ಷ ಮೊಬೈಲ್ ಸಂಪರ್ಕಗಳನ್ನು ಕಡಿತ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಸಂಚಾರ್ ಸಾಥಿ ಪೋರ್ಟಲ್‌ನಲ್ಲಿ ಇರುವ ‘ನೋ ಯುವರ್ ಮೊಬೈಲ್’ ಸೌಲಭ್ಯವನ್ನು ಬಳಸಿ ಗ್ರಾಹಕರು ತಾವು ಖರೀದಿಸುವ ಸೆಕೆಂಡ್‌ಹ್ಯಾಂಡ್ ಫೋನ್, ಕಳ್ಳತನದ ಮೂಲಕ ತಮ್ಮ ಕೈಸೇರುತ್ತಿದೆಯೇ ಎಂಬುದನ್ನು ಪರೀಕ್ಷಿಸಬಹುದು ಎಂದಿದ್ದಾರೆ.

ಇಮ್ರಾನ್ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಕೋರ್ಟ್



ಇಮ್ರಾನ್ ಖಾನ್

ಲಾಹೋರ್ (ಪಿಟಿಐ): ತಮ್ಮ ಮೇಲಿರುವ ಎಲ್ಲ ಪ್ರಕರಣಗಳಲ್ಲಿ ಜಾಮೀನು ನೀಡುವಂತೆ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಕೋರಿರುವ ಅರ್ಜಿಯ ಸಂಬಂಧ ಲಾಹೋರ್ ಹೈಕೋರ್ಟ್ ತನ್ನ ತೀರ್ಪನ್ನು ಮಂಗಳವಾರ ಕಾಯ್ದಿರಿಸಿದೆ.

ಜೈಲಿನಿಂದ ಬಿಡುಗಡೆಗೊಂಡ ಬಳಿಕ ಖಾನ್ ಅವರು ಜಾಮೀನು ಕೋರಿ ನ್ಯಾಯಾಲಯದಲ್ಲಿ ಶನಿವಾರ ಅರ್ಜಿ ಸಲ್ಲಿಸಿದ್ದರು. ಇಮ್ರಾನ್ ಖಾನ್ ಅವರು ನ್ಯಾಯಾಲಯದಲ್ಲಿ ಹಾಜರು ಇಲ್ಲದಿರುವುದನ್ನು ನ್ಯಾಯಾಲಯವು ವಿಚಾರಣೆಗೆ ಮುನ್ನ ಪ್ರಶ್ನಿಸಿತು. ಅದಕ್ಕೆ ಉತ್ತರಿಸಿದ ಅವರ ಪರ ವಕೀಲರು, ‘ಇಮ್ರಾನ್ ಅವರು ಬೆಳಿಗ್ಗೆ 11ರ ಒಳಗೆ ನ್ಯಾಯಾಲಯಕ್ಕೆ ಬರುತ್ತಾರೆ’ ಎಂದರು.

ಪಂಜಾಬ್‌ನ ಮಧ್ಯಂತರ ಸರ್ಕಾರವು ಖಾನ್ ಅವರ ಜಾಮೀನು ಅರ್ಜಿಯನ್ನು ವಿರೋಧಿಸಿತು. ‘ಜಾಮೀನು ಅರ್ಜಿಯನ್ನು ಪರಿಗಣಿಸಬಾರದು’ ಎಂದು ಹೇಳಿತು.

‘ನಾನು ರಾಜಕೀಯವಾಗಿ ಸಂತ್ರಸ್ತನಾಗಿದ್ದೇನೆ. ನನ್ನ ವಿರುದ್ಧ ಹಲವು ಪ್ರಕರಣಗಳಿವೆ. ಆದ್ದರಿಂದ ಪೊಲೀಸರು ಯಾವಾಗ ಬೇಕಾದರೂ ನನ್ನನ್ನು ಬಂಧಿಸಬಹುದು’ ಎಂದು ಖಾನ್ ಅವರು ವಾದಿಸಿದರು.

ಹಿಂಸೆಗೆ ಪ್ರಚೋದನೆ, ದೇಶದ್ರೋಹದ ಪ್ರಕರಣಗಳಲ್ಲಿ ಇಮ್ರಾನ್ ಖಾನ್ ಅವರಿಗೆ ಜೂನ್ 8ರ ವರೆಗೆ ಹೈಕೋರ್ಟ್ ಜಾಮೀನು ನೀಡಿದೆ.



ಮೊದಲ ಫಸಲು...

ಶ್ರೀನಗರದ ಹೊರವಲಯದಲ್ಲಿರುವ ಹೊಲವೊಂದರಲ್ಲಿ ಋತುವಿನ ಮೊದಲ ಫಸಲಿನ ಕೊಯ್ಲು ಸಮಯದಲ್ಲಿ ಸ್ಟ್ರಾಬೆರಿ ಹಣ್ಣನ್ನು ಕೀಳುತ್ತಿದ್ದ ಮಹಿಳೆಯರು ಮಂಗಳವಾರ ಕಂಡಿದ್ದು ಹೀಗೆ –ಪಿಟಿಐ ಚಿತ್ರ

ಸಂಶೋಧನಾ ವರದಿ ಆಧರಿಸಿ ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ

ಕೃತಕ ಸಿಹಿಕಾರಕ ಬಳಕೆ ಹಾನಿಕಾರಕ



ಜಿನೀವಾ (ಎಎಫ್‌ಪಿ): ‘ಬಹಳಷ್ಟು ಉತ್ಪನ್ನಗಳಲ್ಲಿ ಸಕ್ಕರೆಯ ಬದಲು ಕೃತಕ ಸಿಹಿಕಾರಕಗಳನ್ನು ಬಳಸಲಾಗುತ್ತಿದೆ. ಇದು ದೇಹ ತೂಕ ತಗ್ಗಿಸುವುದಕ್ಕೆ ಸಹಕಾರಿಯಾಗಲಾರದು. ಬದಲಾಗಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ದಾರಿ ಮಾಡಿಕೊಡಬಹುದು’ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮಂಗಳವಾರ ಹೇಳಿದೆ.

‘ಸದ್ಯ ಲಭ್ಯವಿರುವ ಸಂಶೋಧನಾ ವರದಿಗಳ ಪ್ರಕಾರ ವಯಸ್ಕರು ಹಾಗೂ ಮಕ್ಕಳ ದೇಹದೊಳಗೆ ಅನಗತ್ಯ ಕೊಬ್ಬು ಶೇಖರಣೆಯಾಗುವುದನ್ನು ತಡೆಯಲು ಕೃತಕ ಸಿಹಿಕಾರಕಗಳು ಸಹಕಾರಿಯಾಗಲಾರವು. ಇಂತಹ ಪದಾರ್ಥಗಳ ಸೇವನೆಯಿಂದ ಟೈಪ್–2 ಡಯಾಬಿಟಿಸ್, ಹೃದಯ ರಕ್ತನಾಳದ ಕಾಯಿಲೆಗಳು ಹಾಗೂ ವಯಸ್ಕರಲ್ಲಿ ಮರಣದಂತಹ ಅಪಾಯ ಹೆಚ್ಚಾಗುತ್ತದೆ’ ಎಂದಿದೆ.

ದೇಹ ತೂಕ ಹೆಚ್ಚಾಗುವುದನ್ನು ತಡೆಯಲು ಜನರು ಡಯಟ್ ಸೋಡಾ ಸೇರಿದಂತೆ ಇನ್ನಿತರೆ ಪಾನೀಯ ಹಾಗೂ ಪದಾರ್ಥಗಳ ಮೊರೆ ಹೋಗುತ್ತಾರೆ. ಆ ಮೂಲಕ ಪ್ರತಿ ನಿತ್ಯವೂ ಲಕ್ಷಾಂತರ ಮಂದಿಯು ಕೃತಕ ಸಿಹಿಕಾರಕಗಳನ್ನು ದೇಹಕ್ಕೆ ತೆಗೆದುಕೊಳ್ಳುತ್ತಾರೆ. ಇಂತಹ ಪದಾರ್ಥಗಳು ಎಷ್ಟರ ಮಟ್ಟಿಗೆ ಆರೋಗ್ಯಕರ ಎಂಬುದು ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

‘ಸಕ್ಕರೆಯ ಬದಲಿಗೆ ಕೃತಕ ಸಿಹಿಕಾರಕಗಳ ಸೇವನೆಯು ದೀರ್ಘಾವಧಿಯಲ್ಲಿ ದೇಹ ತೂಕ ನಿಯಂತ್ರಿಸುವುದಕ್ಕೆ ನೆರವಾಗುವುದಿಲ್ಲ. ಹಣ್ಣುಗಳು ಸೇರಿದಂತೆ ಸಕ್ಕರೆಯ ಅಂಶಗಳನ್ನೊಳಗೊಂಡಂತಹ ನೈಸರ್ಗಿಕ ಆಹಾರ ಪದಾರ್ಥಗಳನ್ನು ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು’ ಎಂದು ಡಬ್ಲ್ಯುಎಚ್‌ಒನ ಪೌಷ್ಟಿಕಾಂಶ ಮತ್ತು ಆಹಾರ ಸುರಕ್ಷತಾ ವಿಭಾಗದ ನಿರ್ದೇಶಕ ಫ್ರಾನ್ಸೆಸ್ಕೊ ಬ್ರಾಂಕಾ ತಿಳಿಸಿದ್ದಾರೆ.

‘ತಂಪು ಪಾನೀಯ ಹಾಗೂ ಇತರೆ ಆಹಾರ ಪದಾರ್ಥಗಳಲ್ಲಿ ಅಸೆಸಲ್ಫೇಮ್–ಕೆ, ಆಸ್ಪರ್ಟಮೆ, ಅಡ್ವಾಂಟಮೆ, ಸೈಕ್ಲಾಮೇಟ್ಸ್, ನಿಯೊಟೇಮ್, ಸ್ಯಾಚರಿನ್, ಸುಕ್ರಾಲೋಸ್, ಸ್ಟೆವಿಯಾ ಮತ್ತು ಸ್ಟೆವಿಯಾ ಡೆರಿವೇಟಿವ್ಸ್‌ನಂತಹ ಸಿಹಿಕಾರಕಗಳನ್ನು ಅಗಾಧ ಪ್ರಮಾಣದಲ್ಲಿ ಸದ್ಯ ಬಳಕೆ ಮಾಡಲಾಗುತ್ತಿದೆ’ ಎಂದು ಡಬ್ಲ್ಯುಎಚ್‌ಒ ಹೇಳಿದೆ.

ಕೀವ್ ಮೇಲೆ ರಷ್ಯಾದ ವಾಯು ದಾಳಿ: 18 ಕ್ಷಿಪಣಿ ಧ್ವಂಸ

ಕೀವ್ (ಎಪಿ): ರಷ್ಯಾ ಪಡೆಗಳು ಉಕ್ರೇನ್‌ನ ಭದ್ರಕೋಟೆ, ರಾಜಧಾನಿ ಕೀವ್ ನಗರ ಗುರಿಯಾಗಿಸಿ ಮಂಗಳವಾರ ನಸುಕಿನಲ್ಲಿ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಭಾರಿ ದಾಳಿ ನಡೆಸಿದೆ. ಉಕ್ರೇನ್ ವಾಯು ರಕ್ಷಣಾ ವ್ಯವಸ್ಥೆಯು ಎಲ್ಲ 18 ಕ್ಷಿಪಣಿಗಳನ್ನು ಹೊಡೆದುರುಳಿಸುವ ಮೂಲಕ ರಷ್ಯಾದ ಉದ್ದೇಶಿತ ವಾಯು ದಾಳಿಯನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾಗಿದೆ.

ರಾತ್ರಿ ಸಮಯದಲ್ಲಿ ರಷ್ಯಾ, ವಾಯು, ಜಲ ಹಾಗೂ ನೆಲದಿಂದ ಕ್ಷಿಪಣಿಗಳನ್ನು ಉಡಾಯಿಸಿದೆ. ಉಕ್ರೇನ್ ವಾಯು ರಕ್ಷಣಾ ವ್ಯವಸ್ಥೆಯು ಆ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಹೊಡೆದುರುಳಿಸುವಾಗ ಭಯಂಕರ ಸ್ಫೋಟದ ಸದ್ದು ನಗರದಲ್ಲಿ ಕೇಳಿಸಿತು. ಆದರೆ, ಸಾವು– ನೋವು ಸಂಭವಿಸಿದ ಬಗ್ಗೆ ವರದಿಯಾಗಿಲ್ಲ.

ಗುಜರಾತ್: ಕೆಲ ನ್ಯಾಯಾಂಗ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿಗೆ 'ಸುಪ್ರೀಂ' ಸಮ್ಮತಿ

ಬಡ್ತಿಗೆ ತಡೆ: ಜುಲೈನಲ್ಲಿ ವಿಚಾರಣೆ

ನವದೆಹಲಿ (ಪಿಟಿಐ): ತಮ್ಮ ಬಡ್ತಿಗೆ ನೀಡಿರುವ ತಡೆಯನ್ನು ಪ್ರಶ್ನಿಸಿ ಗುಜರಾತ್‌ನ ಕೆಲ ನ್ಯಾಯಾಂಗ ಅಧಿಕಾರಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಜುಲೈನಲ್ಲಿ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠವು, ಕೆಲ ನ್ಯಾಯಾಂಗ ಅಧಿಕಾರಿಗಳ ಪರ ಹಾಜರಿದ್ದ ಹಿರಿಯ ವಕೀಲೆ ಮೀನಾಕ್ಷಿ ಅರೋರಾ ಅವರ ವಾದ ಆಲಿಸಿದ ನಂತರ ಈ ತೀರ್ಮಾನ ಪ್ರಕಟಿಸಿತು.

'ಉದ್ಯೋಗದಲ್ಲಿ ಬಡ್ತಿಗೆ ಸಂಬಂಧಿಸಿ ದೇಶದ ಆರು ರಾಜ್ಯಗಳಲ್ಲಿ 'ಜ್ಯೇಷ್ಠತೆ ಹಾಗೂ ಅರ್ಹತೆ' ತತ್ವವನ್ನು ಅನುಸರಿಸಲಾಗುತ್ತಿದೆ. ಆದರೆ, ಈಗ ಈ ಹಿಂಬಡ್ತಿಯಿಂದಾಗಿ ನ್ಯಾಯಾಂಗ ಅಧಿಕಾರಿಗಳು ಅವಮಾನ ಅನುಭವಿಸುವಂತಾಗಿದೆ' ಎಂದು ವಕೀಲೆ ಅರೋರಾ ಅವರು ನ್ಯಾಯಪೀಠಕ್ಕೆ ತಿಳಿಸಿದರು.

'ಬಡ್ತಿಗೆ ತಡೆ ನೀಡಿ ಸುಪ್ರೀಂ ಕೋರ್ಟ್ ಮೇ 12 ಹೊರಡಿಸಿದ ಆದೇಶದಂತೆ, ಗುಜರಾತ್ ಹೈಕೋರ್ಟ್ ಸಂಬಂಧಪಟ್ಟ ನ್ಯಾಯಾಂಗ ಅಧಿಕಾರಿಗಳನ್ನು ಅವರ ಈ ಮೊದಲಿನ ವೃಂದದ ಹುದ್ದೆಗಳಿಗೆ ನಿಯೋಜಿಸಿದೆ' ಎಂದೂ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, ಸುಪ್ರೀಂಕೋರ್ಟ್‌ನ ಬೇಸಿಗೆ ರಜೆ ಮುಗಿದ ನಂತರ, ಜುಲೈನಲ್ಲಿ ವಿಚಾರಣೆ ನಡೆಸುವುದಕ್ಕೆ ಸಂಬಂಧಿಸಿದ ಪಟ್ಟಿಗೆ ಈ ಅರ್ಜಿಯನ್ನು ಸೇರಿಸುವುದಾಗಿ ಹೇಳಿದರು.

ಗುಜರಾತ್‌ನ 68 ನ್ಯಾಯಾಂಗ ಅಧಿಕಾರಿಗಳನ್ನು ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿ ನೀಡುವಂತೆ ಗುಜರಾತ್ ಹೈಕೋರ್ಟ್ ಮಾಡಿದ್ದ ಶಿಫಾರಸು ಮತ್ತು ಗುಜರಾತ್ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ, ಈಗ ನಿವೃತ್ತರಾಗಿರುವ, ನ್ಯಾಯಮೂರ್ತಿ ಎಂ.ಆರ್.ಶಾ ನೇತೃತ್ವದ ಪೀಠ ಮೇ 12ರಂದು ತಡೆ ನೀಡಿ ಆದೇಶಿಸಿತ್ತು.

ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರ ಅಪರಾಧ ನಿರ್ಣಯ ಮಾಡಿದ್ದ ಮತ್ತು ಎರಡು ವರ್ಷಗಳ ಜೈಲುಶಿಕ್ಷೆ ನೀಡಿ ತೀರ್ಪು ನೀಡಿದ್ದ ಸೂರತ್‌ನ ನ್ಯಾಯಾಲಯದ ಮುಖ್ಯ ಮ್ಯಾಜಿಸ್ಟ್ರೇಟ್ ಹರೀಶ್ ಎಚ್. ವರ್ಮಾ ಅವರ ಹೆಸರೂ ಈ ಬಡ್ತಿ ಪಟ್ಟಿಯಲ್ಲಿದ್ದು, ಅವರ ಬಡ್ತಿಗೂ ಈ ತಡೆ ಆದೇಶ ಅನ್ವಯವಾಗುತ್ತಿದೆ.

ಸುಪ್ರೀಂಕೋರ್ಟ್‌ನ ಈ ಆದೇಶದ ಹಿನ್ನೆಲೆಯಲ್ಲಿ, ಗುಜರಾತ್ ಹೈಕೋರ್ಟ್ ಎರಡು ಹೊಸ ಅಧಿಸೂಚನೆಗಳನ್ನು ಹೊರಡಿಸಿತ್ತು. 68 ನ್ಯಾಯಾಂಗ ಅಧಿಕಾರಿಗಳ ಪೈಕಿ 40 ಅಧಿಕಾರಿಗಳ ಬಡ್ತಿಯನ್ನು ಹಿಂದಕ್ಕೆ ಪಡೆದಿತ್ತು.

ಉಳಿದ 28 ನ್ಯಾಯಾಧೀಶರ ಪೈಕಿ, ಸೂರತ್‌ನ ನ್ಯಾಯಾಲಯದ ಮುಖ್ಯ ಮ್ಯಾಜಿಸ್ಟ್ರೇಟ್ ಹರೀಶ್ ವರ್ಮಾ ಸೇರಿದಂತೆ 21 ಮಂದಿಯನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು.ಆದರೆ,ಈ21ಅಧಿಕಾರಿಗಳಿಗೆನೀಡಲಾಗಿದ್ದ ಬಡ್ತಿಯನ್ನು ರದ್ದುಮಾಡಿಲ್ಲ.

ಉಳಿದ 7 ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿ ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಈ ಅಧಿಸೂಚನೆಗಳಲ್ಲಿ ವಿವರಿಸಲಾಗಿಲ್ಲ.

ಬಂಧಿತರ ಸ್ಥಳಾಂತರ: ಹೈಕೋರ್ಟ್‌ಗೆ ಅರ್ಜಿ ವರ್ಗಾಯಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಸಾರ್ವಜನಿಕ ಭದ್ರತಾ ಕಾನೂನಿನ ಅಡಿಯಲ್ಲಿ ವಶಕ್ಕೆ ಪಡೆಯಲಾಗಿದ್ದ 20ಕ್ಕೂ ಹೆಚ್ಚು ಮಂದಿಯನ್ನು ಜಮ್ಮು ಮತ್ತು ಕಾಶ್ಮೀರದಲ್ಲಿನ ಬಂದಿಖಾನೆಯಿಂದ ಉತ್ತರಪ್ರದೇಶ ಹಾಗೂ ಹರಿಯಾಣದಲ್ಲಿನ ವಿವಿಧ



ಜೈಲುಗಳಿಗೆ ಸ್ಥಳಾಂತರಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮಂಗಳವಾರ ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್‌ಗೆ ವರ್ಗಾಯಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ, ಈ ಅರ್ಜಿಗಳ ವಿಚಾರಣೆಯನ್ನು ತ್ವರಿತವಾಗಿ ನಡೆಸುವಂತೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಗೆ ನಿರ್ದೇಶಿಸಿದೆ. ಹೈಕೋರ್ಟ್ ನ್ಯಾಯಪೀಠದ ಎದುರು ಈ ಕುರಿತು ಮನವಿ ಸಲ್ಲಿಸಲು ನೀವು ಸ್ವತಂತ್ರರಾಗಿದ್ದೀರಿ ಎಂದು ಅರ್ಜಿದಾರರ ಪರ ಹಿರಿಯ ವಕೀಲ ಕಾಲಿನ್ ಗೊಂಸಾಲ್ವೆಸ್ ಅವರಿಗೆ ತಿಳಿಸಿದೆ. 'ಈ ನ್ಯಾಯಾಲಯದ ಆದೇಶದ ಅನುಸಾರ ಹೈಕೋರ್ಟ್ ಅರ್ಜಿಗಳ ವಿಚಾರಣೆ ನಡೆಸಲಿದೆ. ಹೀಗಾಗಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವ ಅಗತ್ಯವಿಲ್ಲ' ಎಂದೂ ಹೇಳಿದೆ.

ಕೇಂದ್ರಾಡಳಿತ ಪ್ರದೇಶದ (ಜಮ್ಮು ಮತ್ತು ಕಾಶ್ಮೀರ) ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಹೊರರಾಜ್ಯಗಳ ಜೈಲಿನಲ್ಲಿರುವ ಬಂಧಿತರನ್ನು ಭೇಟಿ ಮಾಡುವುದಕ್ಕೆ ಅವರ ಕುಟುಂಬದವರಿಗೆ ಅವಕಾಶ ಕಲ್ಪಿಸಲಾಗುತ್ತದೆ. ಇದು ಹಿಂದಿನಿಂದಲೂ ಬೆಳೆದು ಬಂದಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಬಂಧಿತರನ್ನೆಲ್ಲಾ ಹೊರ ರಾಜ್ಯಗಳ ಜೈಲುಗಳಿಗೆ ಸ್ಥಳಾಂತರಿಸಿರುವುದರಿಂದಾಗಿ ಅವರ ಕುಟುಂಬದವರು ಭೇಟಿಯ ಅವಕಾಶದಿಂದ ವಂಚಿತರಾಗಲಿದ್ದಾರೆ' ಎಂದು ಅರ್ಜಿದಾರರ ಪರ ವಕೀಲ ಕಾಲಿನ್ ಗೊಂಸಾಲ್ವೆಸ್ ವಾದಿಸಿದರು.

ನವಾಬ್ ಮಲಿಕ್ ಜಾಮೀನು ಅರ್ಜಿ ತುರ್ತು ವಿಚಾರಣೆಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಎನ್‌ಸಿಪಿ ಮುಖಂಡ ನವಾಬ್ ಮಲಿಕ್ ಅವರು ಸಲ್ಲಿಸಿರುವ ಜಾಮೀನು ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಜುಲೈ ಎರಡನೇ ವಾರದಲ್ಲಿ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿದೆ. 'ಜಾಮೀನು ಅರ್ಜಿಯನ್ನು ಪರಿಗಣಿಸಲು ಬಾಂಬೆ ಹೈಕೋರ್ಟ್‌ಗೆ ಸ್ವಾತಂತ್ರ್ಯವಿದೆ' ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಂ.ಎಂ. ಸುಂದರೇಶ್ ಅವರ ನ್ಯಾಯಪೀಠವು ಹೇಳಿದೆ.

ಜಾರಿ ನಿರ್ದೇಶನಾಲಯದ (ಇ.ಡಿ) ವಕೀಲರು ಹಾಜರಾಗದ ಕಾರಣ ಜಾಮೀನು ಅರ್ಜಿಯ ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಜೂನ್ 6ಕ್ಕೆ ನಿಗದಿಪಡಿಸಿದೆ ಎಂದು ಮಲಿಕ್ ಅವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ಈ ವಿಚಾರವಾಗಿ ಇ.ಡಿ. ಮುಂದಿನ ವಾರ ಸಿದ್ಧವಿರಲಿದೆ ಎಂದು ಇ.ಡಿ. ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಹೇಳಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮಲಿಕ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹೋದರಿ ಹಸೀನಾ ಪಾರ್ಕರ್ ಅವರೊಂದಿಗೆ ಆಸ್ತಿ ವ್ಯವಹಾರಗಳಲ್ಲಿ ಶಾಮೀಲಾಗಿರುವ ಆರೋಪದಲ್ಲಿ ಮಲಿಕ್ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಜ್ಞಾನವಾಪಿ ಮಸೀದಿ ಸರ್ವೆ ವಿಚಾರಣೆಗೆ ಅರ್ಜಿ ಅಂಗೀಕಾರ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿಯ ಸಂಪೂರ್ಣ ಭೂ ವಿಸ್ತೀರ್ಣವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಸರ್ವೆಗೆ ಒಳಪಡಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಾರಾಣಸಿ ಕೋರ್ಟ್ ವಿಚಾರಣೆಗಾಗಿ ಅಂಗೀಕರಿಸಿದೆ.

ಮಸೀದಿಯ ಆವರಣದಲ್ಲಿ ಕಳೆದ ವರ್ಷ ವಿಡಿಯೊಗ್ರಫಿ ಸರ್ವೆ ನಡೆಸುವ ಸಂದರ್ಭದಲ್ಲಿ ಕಂಡುಬಂದಿದ್ದ 'ಶಿವಲಿಂಗ' ಕುರಿತಂತೆ 'ವೈಜ್ಞಾನಿಕ ಸರ್ವೆ'ಯನ್ನು ನಡೆಸಬೇಕು ಎಂದು ಇತ್ತೀಚೆಗಷ್ಟೇ ಅಲಹಾಬಾದ್ ಹೈಕೋರ್ಟ್ ಆದೇಶಿಸಿತ್ತು.

ಪೂರ್ಣ ಸರ್ವೆ ಕೋರಿದ್ದ ಅರ್ಜಿ



ಪರಿಗಣಿಸಿದ ಜಿಲ್ಲಾ ನ್ಯಾಯಾಧೀಶ ಎ.ಕೆ.ವಿಶ್ವೇಶ್ ಅವರು, ಈ ಕುರಿತು ಆಕ್ಷೇಪಣೆಗಳಿದ್ದರೆ ಸಲ್ಲಿಸುವಂತೆ ಸದ್ಯ ಮಸೀದಿ ಉಸ್ತುವಾರಿ ಹೊಂದಿರುವ ಅಂಜುಮನ್ ಇಂತೆಜಮೀಯ ಸಮಿತಿಗೆ ಸೂಚಿಸಿತು.

ಜ್ಞಾನವಾಪಿ ಮಸೀದಿಯು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಹೊಂದಿಕೊಂಡಂತಿದೆ. 17ನೇ ಶತಮಾನದಲ್ಲಿ ಹಿಂದೂ ದೇಗುಲ ನೆಲಸಮಗೊಳಿಸಿ ಮಸೀದಿ ನಿರ್ಮಿಸಲಾಗಿದೆ ಎಂದು ಪ್ರತಿಪಾದಿಸಿರುವ ಆರು ಅರ್ಜಿದಾರರು ಪೂರ್ಣ ಸರ್ವೆ ಕೋರಿ ಅರ್ಜಿ ಸಲ್ಲಿಸಿದ್ದರು.

ಮಸೀದಿಯ ಕೆಳಗೆ ಏನು ಹುದುಗಿದೆ ಎಂದು ಗೊತ್ತಾಗಬೇಕಿದೆ. ದೇಗುಲವನ್ನು ನೆಲಸಮಗೊಳಿಸಿ ಮೂರು ಗೋಪುರವನ್ನು ನಿರ್ಮಿಸಿದ್ದು ಯಾವಾಗ ಎಂಬ ಪ್ರಶ್ನೆಗೂ ಉತ್ತರಬೇಕಾಗಿದೆ ಎಂದು ಅರ್ಜಿದಾರರ ಪರ ವಕೀಲ ವಿಷ್ಣುಶಂಕರ್ ಜೈನ್ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಈಗ ಈ ಪ್ರಕರಣದ ವಿಚಾರಣೆಯೂ ರಾಮಮಂದಿರ ಪ್ರಕರಣದ ವಿಚಾರಣೆಯಂತೆಯೇ ನಡೆಯಲಿದೆ' ಎಂದೂ ತಿಳಿಸಿದರು.

ವಕೀಲರ ಭೇಟಿ ಕಾಲಾವಧಿ ವಿಸ್ತರಿಸಿ ಸುಕೇಶ್ ಮನವಿಗೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ತನ್ನ ವಕೀಲರ ಭೇಟಿಯ ಕಾಲಾವಧಿಯನ್ನು ವಿಸ್ತರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದಕ್ಕಾಗಿ ವಂಚಕ ಎನ್ನಲಾದ ಸುಕೇಶ್ ಚಂದ್ರಶೇಖರ್ ಅವರನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ.

'ಕಾರಾಗೃಹದ ನಿಯಮದಂತೆ ಭೇಟಿಯ ಕಾಲಾವಧಿಯನ್ನು ನಿಗದಿ ಮಾಡಲಾಗಿದೆ' ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಹಾಗೂ ಬೇಲಾ ಎಂ. ತ್ರಿವೇದಿ ಅವರಿದ್ದ ಪೀಠವು ಹೇಳಿತು.

'ವಕೀಲರ ಹೆಸರುಗಳನ್ನು ನಮಗೆ ನೀಡಿ. ಈ ವಕೀಲರು ಜೈಲಿನಲ್ಲಿಯೇ ಇರುವ ವ್ಯವಸ್ಥೆ ಮಾಡಿಕೊಡುವಂತೆ ಜೈಲು ಅಧಿಕಾರಿಗಳೊಂದಿಗೆ ನಾವು ಮಾತನಾಡುತ್ತೇವೆ. ನ್ಯಾಯಾಲಯದಲ್ಲಿ ಯಾವ ರೀತಿಯ ಮಾತುಗಳನ್ನು ಆಡುತ್ತಿದ್ದೀರಿ? ಜೈಲಿನಲ್ಲಿ ನಿಮಗೆ ಅನುಕೂಲತೆಗಳನ್ನು ಮಾಡಿಕೊಡಲು ಬಯಸುತ್ತಿದ್ದೀರೆ?' ಎಂದು ಪೀಠ ಪ್ರಶ್ನಿಸಿತು.

'ಸುಕೇಶ್ ಅವರ ಮೇಲೆ ಆರು ನಗರಗಳಲ್ಲಿ 28 ಪ್ರಕರಣಗಳಿವೆ. 10ಕ್ಕೂ ಹೆಚ್ಚು ವಕೀಲರು ಈ ಪ್ರಕರಣಗಳಲ್ಲಿ ಸುಕೇಶ್ ಪರ ವಾದಿಸುತ್ತಿದ್ದಾರೆ. ಕಾರಾಗೃಹದ ನಿಯಮದಂತೆ ವಕೀಲರನ್ನು ಭೇಟಿ ಆಗಲು ವಾರಕ್ಕೆ ಎರಡು ಬಾರಿ 30 ನಿಮಿಷ ಕಾಲಾವಕಾಶ ನೀಡಲಾಗುತ್ತದೆ. ಆದರೆ, ಈ ಸಮಯಾವಕಾಶ ಸಾಲುತ್ತಿಲ್ಲ' ಎಂದು ಸುಕೇಶ್ ಪರ ವಕೀಲರು ವಾದಿಸಿದರು.

'ಸುಪ್ರೀಂ' ನ್ಯಾಯಮೂರ್ತಿ ಹುದ್ದೆಗೆ ಇಬ್ಬರ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಹಿರಿಯ ವಕೀಲ ಕೆ.ವಿ.ವಿಶ್ವನಾಥನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿದೆ.

ಕೇಂದ್ರ ಶಿಫಾರಸು ಒಪ್ಪಿದರೆ 2030ರ ಆಗಸ್ಟ್‌ನಲ್ಲಿ ವಿಶ್ವನಾಥನ್ ಅವರು 58ನೇ ಮುಖ್ಯ ನ್ಯಾಯಮೂರ್ತಿ ಆಗುವ ಅವಕಾಶವಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಕೊಲಿಜಿಯಂ ಮಂಗಳವಾರ ಈ ಶಿಫಾರಸು ಮಾಡಿತು.

ಶಿಫಾರಸು ಕಾರ್ಯಗತಗೊಂಡಲ್ಲಿ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡು, ಬಳಿಕ ಸಿಜೆಐ ಸ್ಥಾನವನ್ನು ಪಡೆದ ಹಿರಿಮೆಗೆ ವಿಶ್ವನಾಥನ್ ಅವರು ಪಾತ್ರರಾಗಲಿದ್ದಾರೆ.

ಈ ಹಿಂದೆ, ನ್ಯಾಯಮೂರ್ತಿಗಳಾದ ಎ.ಎಂ.ಸಿಕ್ರಿ ಹಾಗೂ ಯು.ಯು.ಲಲಿತ್ ಅವರು ಈ ಗೌರವಕ್ಕೆ ಪಾತ್ರರಾಗಿದ್ದರು. ಮೇ 26, 1966ರಲ್ಲಿ ಜನಿಸಿರುವ ವಿಶ್ವನಾಥನ್, ನೇಮಕಗೊಂಡಲ್ಲಿ ಅವರ ಸೇವಾವಧಿಯು 2031ರ ಮೇ 25ರವರೆಗೆ ಇರಲಿದೆ.

ಸುಪ್ರೀಂ ಕೋರ್ಟ್‌ಗೆ ಮಂಜೂರಾದ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 34 ಆಗಿದ್ದು, ಸದ್ಯ 32 ಹುದ್ದೆಗಳು ಭರ್ತಿಯಾಗಿವೆ. ಈ ಶಿಫಾರಸು ಒಪ್ಪಿದಲ್ಲಿ ನ್ಯಾಯಮೂರ್ತಿಗಳ ಎಲ್ಲ ಮಂಜೂರಾದ ಸ್ಥಾನಗಳು ಭರ್ತಿ ಆದಂತಾಗುತ್ತದೆ.

ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ, ಎಂ.ಆರ್.ಶಾ ಕಳೆದ ಎರಡು ದಿನದಲ್ಲಿ ನಿವೃತ್ತರಾಗಿದ್ದಾರೆ. ಜುಲೈ ಎರಡನೇ ವಾರದಲ್ಲಿ ನಾಲ್ವರು ನ್ಯಾಯಮೂರ್ತಿಗಳು ನಿವೃತ್ತರಾಗಲಿದ್ದು, ಆ ಬಳಿಕ ನ್ಯಾಯಮೂರ್ತಿಗಳ ಸಂಖ್ಯೆ 28ಕ್ಕೆ ಇಳಿಯಲಿದೆ.



ಮಹಿಳಾ ಸಾರಥ್ಯ

ಮಹಿಳೆಯರೇ ನಿರ್ವಹಿಸುವ ದೇಶದ ಮೊದಲ ಇಂಟರ್‌ಸಿಟಿ ಬಸ್‌ಗೆ ನವದೆಹಲಿಯಲ್ಲಿ ಮಂಗಳವಾರ ಚಾಲನೆ ನೀಡಲಾಯಿತು –ಪಿಟಿಐ ಚಿತ್ರ

ಇಡಬ್ಲ್ಯುಎಸ್ ಕೋಟಾ: ತೀರ್ಪು ಪ್ರಶ್ನಿಸಿದ್ದ ಅರ್ಜಿಗಳ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್ಥಿಕ ದುರ್ಬಲ ವರ್ಗದ (ಇಡಬ್ಲ್ಯುಎಸ್) ವ್ಯಕ್ತಿಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸುವ ಸಂವಿಧಾನದ 103ನೇ ತಿದ್ದುಪಡಿಯ ಸಿಂಧುತ್ವವನ್ನು ಎತ್ತಿ ಹಿಡಿದಿರುವ ತನ್ನ ತೀರ್ಪನ್ನು ಪ್ರಶ್ನಿಸಿ, ಸಲ್ಲಿಸಲಾಗಿದ್ದ ಮರುಪರಿಶೀಲನಾ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ, ಎಸ್. ರವೀಂದ್ರ ಭಟ್, ಬೇಲಾ ಎಂ. ತ್ರಿವೇದಿ ಹಾಗೂ ಜೆ.ಬಿ. ಪಾರ್ದೀವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಮೇ 9ರಂದು ಈ ಆದೇಶವನ್ನು ನೀಡಿದೆ.

ಈ ಕುರಿತ ಆದೇಶವನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ.

'ಮರುಪರಿಶೀಲನಾ ಅರ್ಜಿಗಳನ್ನು ಸಲ್ಲಿಸಲು ಅನುಮತಿ ನೀಡಲಾಗಿತ್ತು. ಆದರೆ, ನ್ಯಾಯಾಲಯದಲ್ಲಿ ಬಹಿರಂಗ ವಿಚಾರಣೆಯ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಮರುಪರಿಶೀಲನೆ ಅರ್ಜಿಗಳನ್ನು ಪರಿಶೀಲಿಸಲಾಗಿದೆ. ತೀರ್ಪನ್ನು ಮರುಪರಿಶೀಲಿಸುವ ಅಗತ್ಯ ಇಲ್ಲ ಎಂಬುದು ಮನದಟ್ಟಾಗಿದೆ. ಹಾಗಾಗಿ, ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು ಆದೇಶದಲ್ಲಿ ಹೇಳಲಾಗಿದೆ.

2022ರ ನ. 7ರಂದು ಸುಪ್ರೀಂ ಕೋರ್ಟ್ ಪೀಠವು ನಾಲ್ಕು ಪ್ರತ್ಯೇಕ ತೀರ್ಪುಗಳನ್ನು ನೀಡಿತ್ತು.

ಸಂಕ್ಷಿಪ್ತ ಸುದ್ದಿ

'ದಿ ಕೇರಳ ಸ್ಟೋರಿ ಚಿತ್ರ ಪ್ರದರ್ಶನ ನಿಷೇಧಿಸಿಲ್ಲ'

ನವದೆಹಲಿ: 'ದಿ ಕೇರಳ ಸ್ಟೋರಿ' ಚಿತ್ರ ಪ್ರದರ್ಶನಕ್ಕೆ ಯಾವುದೇ ರೀತಿಯ ನಿಷೇಧವನ್ನೂ ಹೇರಲಾಗಿಲ್ಲ. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಬಾರದ ಕಾರಣ ಚಿತ್ರಮಂದಿರಗಳು ಈ ಚಿತ್ರದ ಪ್ರದರ್ಶನವನ್ನು ನಿಲ್ಲಿಸಿರಬಹುದು ಎಂದು ತಮಿಳುನಾಡು ಪೊಲೀಸರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.



ತಮಿಳುನಾಡಿನಲ್ಲಿ ಈ ಚಿತ್ರವನ್ನು ನಿಷೇಧಿಸಲಾಗಿದೆ ಎಂದು ಚಿತ್ರ ನಿರ್ಮಾಪಕರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಕುರಿತು ಪ್ರತಿಕ್ರಿಯೆ ನೀಡುವಂತೆ ತಮಿಳುನಾಡು ಪೊಲೀಸ್‌ಗೆ ಕೋರ್ಟ್ ನೋಟಿಸ್ ನೀಡಿತ್ತು. ಈ ಹಿನ್ನೆಲೆಯಲ್ಲಿ ತಮಿಳುನಾಡು ಪೊಲೀಸರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

ಗಡ್ಕರಿಗೆ ಮತ್ತೊಂದು ಬೆದರಿಕೆ ಕರೆ

ನವದೆಹಲಿ (ಪಿಟಿಐ): ಇಲ್ಲಿನ ಮೋತಿಲಾಲ್ ನೆಹರೂ ರಸ್ತೆಯಲ್ಲಿರುವ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಅಧಿಕೃತ ನಿವಾಸದ ಸ್ಥಿರ ದೂರವಾಣಿಗೆ ಅಪರಿಚಿತ ವ್ಯಕ್ತಿಯೊಬ್ಬ ಸೋಮವಾರ ರಾತ್ರಿ ಕರೆ ಮಾಡಿ ಬೆದರಿಕೆಯೊಡ್ಡಿದ್ದಾನೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಗಡ್ಕರಿ ಅವರ ಕಚೇರಿಯ ಸಿಬ್ಬಂದಿ ಕರೆ ಸ್ವೀಕರಿಸಿದ್ದು, ಕರೆ ಮಾಡಿರುವ ವ್ಯಕ್ತಿಯು ಹಿಂದಿಯಲ್ಲಿ ಮಾತನಾಡಿ, 'ನನಗೆ ಸಚಿವರ ಜೊತೆಗೆ ಮಾತನಾಡಬೇಕಿದೆ. ಅವರಿಗೆ ಬೆದರಿಕೆಯೊಡ್ಡಬೇಕಾಗಿದೆ' ಎಂದು ಹೇಳಿ ಕರೆ ಸ್ಥಗಿತಗೊಳಿಸಿದ್ದಾನೆ ಎಂದಿದ್ದಾರೆ.

ಸಚಿವರ ಕಚೇರಿಯು ಬೆದರಿಕೆ ಕರೆಯ ಕುರಿತು ದೆಹಲಿ ಪೊಲೀಸರಿಗೆ ವರದಿ ನೀಡಿದ್ದು, ಕರೆ ಮಾಡಿರುವ ವ್ಯಕ್ತಿಯ ಪತ್ತೆಗಾಗಿ ತನಿಖೆ ನಡೆಯುತ್ತಿದೆ ಎಂದೂ ಹೇಳಿದ್ದಾರೆ.

ಈ ಹಿಂದೆ ನಾಗ್ಪುರದಲ್ಲಿರುವ ಸಚಿವರ ಕಚೇರಿಗೆ ಎರಡು ಬಾರಿ ಬೆದರಿಕೆ ಕರೆಗಳು ಬಂದಿದ್ದವು. ಈ ಕುರಿತು ತನಿಖೆ ನಡೆಸಿದ್ದ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಬೆಳಗಾವಿ ಜೈಲಿನಲ್ಲಿದ್ದ ಕೊಲೆ ಪ್ರಕರಣವೊಂದರ ಅಪರಾಧಿ ಜಯೇಶ್ ಪೂಜಾರಿ ಎಂಬಾತನನ್ನು ಬಂಧಿಸಿತ್ತು.

ಜೂನ್ 22ರಂದು ಅಮೆರಿಕಕ್ಕೆ ಪ್ರಧಾನಿ ಮೋದಿ ಭೇಟಿ

'ಭಾರತ ಪರಿಣಾಮಕಾರಿ ಪಾಲುದಾರ ರಾಷ್ಟ್ರ'

ವಾಷಿಂಗ್ಟನ್ (ಪಿಟಿಐ): 'ಭಾರತವು ತನ್ನ ಅತ್ಯಂತ ಪರಿಣಾಮಕಾರಿ ಪಾಲುದಾರರಲ್ಲಿ ಒಂದಾಗಿದೆ' ಎಂದು ಬಣ್ಣಿಸಿರುವ ಅಮೆರಿಕವು, ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿನ ತಿಂಗಳ ಅಮೆರಿಕ ಪ್ರವಾಸವು ಆದ್ಯತೆಗಳ ಪಾಲುದಾರಿಕೆಯನ್ನು ಹೆಚ್ಚಿಸುವ ಅವಕಾಶವಾಗಿದೆ ಎಂದು ಹೇಳಿದೆ.

ಪ್ರಧಾನಿ ಅವರ ಭೇಟಿಯು ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಭದ್ರತಾ ಪಾಲುದಾರಿಕೆಯನ್ನು ಬಲಪಡಿಸುವ ವಿಶ್ವಾಸವನ್ನೂ ಅಮೆರಿಕವು ವ್ಯಕ್ತಪಡಿಸಿದೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಪ್ರಥಮ ಮಹಿಳೆ ಜಿಲ್ ಬೈಡನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಅವರು ಜೂನ್ ತಿಂಗಳಲ್ಲಿ ತಮ್ಮ ಮೊದಲ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ಜೂನ್ 22ರಂದು ಬೈಡನ್ ಮತ್ತು ಜಿಲ್ ಅವರು ಮೋದಿಯವರಿಗೆ ಭೋಜನಕೂಟದಆತಿಥ್ಯನೀಡಲಿದ್ದಾರೆ.

'ಭಾರತದೊಂದಿಗಿನ ನಮ್ಮ ಪಾಲುದಾರಿಕೆಯು ನಮ್ಮ ಅತ್ಯಂತ ಪರಿಣಾಮಕಾರಿ ಸಂಬಂಧಗಳಲ್ಲಿ ಒಂದಾಗಿದೆ ಮತ್ತು ನಾವು ಹಲವಾರು ಪ್ರಮುಖ ಆದ್ಯತೆಗಳಲ್ಲಿ ಭಾರತದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತೇವೆ' ಎಂದು ರಾಜ್ಯ ಇಲಾಖೆಯ ಉಪ ಪತ್ರಿಕಾ ಕಾರ್ಯದರ್ಶಿ ವೇದಾಂತ್ ಪಟೇಲ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ, ಭದ್ರತಾ ಪಾಲುದಾರಿಕೆಯನ್ನು ನಿಕಟಗೊಳಿಸುವ ಅವಕಾಶವನ್ನು ಈ ಭೇಟಿ ಕಲ್ಪಿಸಲಿದೆ. ಜಾಗತಿಕ ಆರೋಗ್ಯ, ಹವಾಮಾನ ಬಿಕ್ಕಟ್ಟು ಸೇರಿದಂತೆ ಇತರ ಜಾಗತಿಕ ಸವಾಲುಗಳನ್ನು ಜಂಟಿಯಾಗಿ ಪರಿಹರಿಸುವ ಸಾಧ್ಯತೆ ಇದೆ. ಭಾರತಕ್ಕೆ ಆತಿಥ್ಯ ನೀಡಲು ನಾವು ಎದುರು ನೋಡುತ್ತಿದ್ದೇವೆ'ಎಂದೂ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

19ರಿಂದ 3 ದೇಶಗಳಿಗೆ ಪ್ರವಾಸ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮೇ 19ರಿಂದ 24ರ ವರೆಗೆ ಜಪಾನ್, ಪಪುವಾ ನ್ಯೂ ಗಿನಿ ಮತ್ತು ಆಸ್ಟ್ರೇಲಿಯಾಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಂಗಳವಾರ ತಿಳಿಸಿದೆ. ಜಿ–7 ಸಮಾವೇಶದಲ್ಲಿ ಪಾಲ್ಗೊಳ್ಳಲು ಇದೇ 19ರಿಂದ 21ರ ವರೆಗೆ ಜಪಾನ್‌ನ ಹಿರೋಶಿಮಾದಲ್ಲಿ ಇರಲಿದ್ದಾರೆ.

'ಪ್ರಧಾನಿ ಮೋದಿ ಅವರು, ಶಾಂತಿ, ಸ್ಥಿರತೆ ಮತ್ತು ಆಹಾರ, ರಸಗೊಬ್ಬರ, ಇಂಧನ ಭದ್ರತೆ ಕುರಿತು ಜಿ–7 ಸಮಾವೇಶದಲ್ಲಿ ಪಾಲುದಾರ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸಲಿದ್ದಾರೆ' ಎಂದು ತಿಳಿಸಿದೆ.

ಬೇಹುಗಾರಿಕೆ: ಪತ್ರಕರ್ತನ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): 'ಸೇನೆ ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಡಿಆರ್‌ಡಿಒ) ಸಂಬಂಧಿಸಿದ ಅತಿ ಸೂಕ್ಷ್ಮ ಮಾಹಿತಿಗಳನ್ನು ಕಲೆಹಾಕಿ ಅವುಗಳನ್ನು ವಿದೇಶಿ ಗುಪ್ತಚರ ಸಂಸ್ಥೆಗಳೊಂದಿಗೆ ಹಂಚಿಕೊಂಡ ಆರೋಪದಡಿ ಹವ್ಯಾಸಿ ಪತ್ರಕರ್ತನೊಬ್ಬನ ವಿರುದ್ಧ ಸಿಬಿಐ, ಎಫ್‌ಐಆರ್ ದಾಖಲಿಸಿದೆ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ವಿವೇಕ್ ರಘುವಂಶಿ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಇದರ ಬೆನ್ನಲ್ಲೇ ಸಿಬಿಐ, ಆರೋಪಿ ಹಾಗೂ ಆತನ ಆಪ್ತರಿಗೆ ಸೇರಿದ ಜೈಪುರ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿನ (ಎನ್‌ಸಿಆರ್) 12 ಸ್ಥಳಗಳಲ್ಲಿ ಶೋಧ ನಡೆಸಿದೆ. ಈ ವೇಳೆ ಹಲವು ಸೂಕ್ಷ್ಮ ದಾಖಲೆಗಳು ಲಭ್ಯವಾಗಿದ್ದು, ಅವುಗಳನ್ನು ಪರಿಶೀಲನೆಗೆ ಕಳುಹಿಸಲಾಗಿದೆ' ಎಂದಿದ್ದಾರೆ.

'ಆರೋಪಿಯು ಅಮೆರಿಕ ಮೂಲದ ವೆಬ್‌ಸೈಟ್‌ವೊಂದರಲ್ಲಿ ರಕ್ಷಣೆ ಹಾಗೂ ಸೇನಾ ವ್ಯವಹಾರಗಳಿಗೆ ಸಂಬಂಧಿಸಿದ ಭಾರತದ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ. ಈತನ ವಿರುದ್ಧ ಗೋಪ್ಯತಾ ಕಾಯ್ದೆಯ ಸೆಕ್ಷನ್–3 (ಬೇಹುಗಾರಿಕೆ) ಹಾಗೂ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 120–ಬಿ (ಕ್ರಿಮಿನಲ್ ಪಿತೂರಿ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಹೇಳಿದ್ದಾರೆ.

'ರಘುವಂಶಿಯು ದೇಶ ಹಾಗೂ ವಿದೇಶಗಳಲ್ಲಿ ಯಾರೊಂದಿಗೆಲ್ಲಾ ಒಡನಾಟ ಹೊಂದಿದ್ದಾನೆ. ಯಾರೊಂದಿಗೆ ಶಾಮೀಲಾಗಿದ್ದಾನೆ ಎಂಬುದನ್ನು ಪತ್ತೆಹಚ್ಚಲು ಸಿಬಿಐ ಸಮಗ್ರ ತನಿಖೆಗೆ ಮುಂದಾಗಿದೆ' ಎಂದು ಮೂಲಗಳು ಹೇಳಿವೆ.

'ಆರೋಪಿಯು ಡಿಆರ್‌ಡಿಒದ ವಿವಿಧ ಯೋಜನೆಗಳ ಪ್ರಗತಿಗೆ ಸಂಬಂಧಿಸಿದ ಹಾಗೂ ದೇಶದ ಸಶಸ್ತ್ರ ಪಡೆಗಳ ಭವಿಷ್ಯದ ಖರೀದಿ ಯೋಜನೆಗಳ ಕುರಿತಾದ ಸೂಕ್ಷ್ಮ ಮಾಹಿತಿಗಳನ್ನು ಕಲೆಹಾಕಿದ್ದ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿ ರಹಸ್ಯ ಮಾತುಕತೆಯ ಮಾಹಿತಿಗಳು ಹಾಗೂ ದೇಶವು ತನ್ನ ಮಿತ್ರ ರಾಷ್ಟ್ರಗಳೊಂದಿಗೆ ನಡೆಸಿರುವಂತಹ ದ್ವಿಪಕ್ಷೀಯ ಹಾಗೂ ಸೇನೆಗೆ ಸಂಬಂಧಿಸಿದ ಮಾತುಕತೆಯ ವಿವರಗಳನ್ನೂ ಸಂಗ್ರಹಿಸಿದ್ದ. ಈ ಮಾಹಿತಿಗಳು ಒಂದೊಮ್ಮೆ ಬಹಿರಂಗಗೊಂಡಿದ್ದರೆ ಈ ರಾಷ್ಟ್ರಗಳೊಂದಿಗಿನ ದ್ವಿಪಕ್ಷೀಯ ಬಾಂಧವ್ಯವು ಹದಗೆಡುತ್ತಿತ್ತು' ಎಂದು ತಿಳಿಸಿವೆ.

ಗಾಳಿಯ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ

ರಾಜಧಾನಿಯಲ್ಲಿ ಹೆಚ್ಚಿದ 'ಹೊಂಜು'

ನವದೆಹಲಿ (ಪಿಟಿಐ): 'ದೆಹಲಿಯಾದ್ಯಂತ ಮಂಗಳವಾರ ಬೆಳಿಗ್ಗೆ ಬೀಸಿದ ಬಿರುಗಾಳಿಯಿಂದಾಗಿ ವಾತಾವರಣದಲ್ಲಿ ದಟ್ಟವಾದ ದೂಳು ಆವರಿಸಿತ್ತು. ಇದರಿಂದ ಗಾಳಿಯ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿತ್ತು. ಗೋಚರತೆಯೂ ಕ್ಷೀಣಿಸಿತ್ತು' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ತಿಳಿಸಿದೆ.

'ಗಂಟೆಗೆ 30 ರಿಂದ 35 ಕಿ.ಮೀ. ವೇಗದಲ್ಲಿ ಗಾಳಿ ಬೀಸಿದ್ದರಿಂದಾಗಿ ದೂಳೆಲ್ಲಾ ಮೇಲೆದ್ದು ವಾತಾವರಣ ಕಲುಷಿತಗೊಂಡಿತ್ತು. ಜೊತೆಗೆ ಗೋಚರತೆಯು ಕ್ಷೀಣಿಸಿತ್ತು. ಬೆಳಿಗ್ಗೆ 9 ಗಂಟೆ ವೇಳೆಗೆ ಗಾಳಿಯ ವೇಗ 12 ಕಿ.ಮೀ ಗೆ ತಗ್ಗಿತ್ತು. ಕ್ರಮೇಣ ಅದು ಇನ್ನಷ್ಟು ಕಡಿಮೆಯಾಗಿದ್ದರಿಂದ ವಾತಾವರಣ ತಿಳಿಯಾಗಿತ್ತು' ಎಂದು ಐಎಂಡಿಯ ಪ್ರಾದೇಶಿಕ ಮುನ್ಸೂಚನಾ ಕೇಂದ್ರದ ಮುಖ್ಯಸ್ಥ ಕುಲದೀಪ್ ಶ್ರೀವಾಸ್ತವ ಹೇಳಿದ್ದಾರೆ.

'ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸನಿಹವಿರುವ ಪಾಲಮ್ ವೀಕ್ಷಣಾಲಯದ ಬಳಿ ಬೆಳಿಗ್ಗೆ 9 ಗಂಟೆ ಸುಮಾರಿಗೆ ಗೋಚರತೆಯ ಮಟ್ಟವು 1,100 ಮೀಟರ್‌ನಷ್ಟು ದಾಖಲಾಗಿತ್ತು. ಸೋಮವಾರ ಇದೇ ವೇಳೆಗೆ ಈ ಮಟ್ಟವು 4,000 ಮೀಟರ್‌ನಷ್ಟಿತ್ತು' ಎಂದು ಐಎಂಡಿಯ ಹಿರಿಯ ವಿಜ್ಞಾನಿ ಆರ್.ಕೆ.ಜೆನಾಮಣಿ ತಿಳಿಸಿದ್ದಾರೆ.



ಗಾಜಿಯಾಬಾದ್ ಬಳಿ ಮಂಗಳವಾರ ಬೆಳಿಗ್ಗೆ ಗೋಚರತೆ ಕ್ಷೀಣಿಸಿತ್ತು–ಪಿಟಿಐ ಚಿತ್ರ

'ದೂಳಿನ ಸಾಂದ್ರತೆಯು ಹಲವು ಬಾರಿ ಹೆಚ್ಚಳವಾಗಿತ್ತು. ಬೆಳಿಗ್ಗೆ 4 ರಿಂದ 8 ಗಂಟೆ ನಡುವಣ ಅವಧಿಯಲ್ಲಿ ಪರ್ಟಿಕ್ಯುಲೇಟ್ ಮ್ಯಾಟರ್–10ನ ಸಾಂದ್ರತೆಯು ಒಂದು ಘನ ಮೀಟರ್‌ಗೆ 140 ಮೈಕ್ರೋಗ್ರಾಂನಿಂದ 775 ಮೈಕ್ರೋಗ್ರಾಂಗೆ ಹೆಚ್ಚಳವಾಗಿತ್ತು. ಬಿರುಗಾಳಿ ಬೀಸಿದ್ದರಿಂದಾಗಿ ಈ ಬದಲಾವಣೆ ಉಂಟಾಗಿತ್ತು. ಗಾಳಿ ತಗ್ಗಿದ ಬಳಿಕ ದೂಳು ಕಡಿಮೆಯಾಗಿತ್ತು' ಎಂದು ಐಎಂಡಿಯ ಪರಿಸರ ನಿಗಾ ಮತ್ತು ಸಂಶೋಧನಾ ಕೇಂದ್ರದ ಮುಖ್ಯಸ್ಥ ವಿ.ಕೆ.ಸೋನಿ ಹೇಳಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಜನರು ಉಸಿರಾಡುವಾಗ ದೂಳಿನ ಕಣಗಳು ಶ್ವಾಸಕೋಶದೊಳಗೆ ಸೇರಿಕೊಳ್ಳಬಹುದು. ಇದರಿಂದ ಉಸಿರಾಟದ ಸಮಸ್ಯೆ ಉಂಟಾಗಬಹುದು. ಆಸ್ತಮಾ, ಶ್ವಾಸನಾಳಗಳ ಒಳಪೊರೆಯ ಉರಿಯೂತ ಹಾಗೂ ಅಲರ್ಜಿಯಂತಹ ಸಮಸ್ಯೆಗಳೂ ತಲೆದೋರಬಹುದು ಎಂದು ತಜ್ಞರು ತಿಳಿಸಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ದೆಹಲಿಯಲ್ಲಿ ಗರಿಷ್ಠ ತಾಪಮಾನ ಕಂಡುಬಂದಿದೆ. 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ಉಷ್ಣಾಂಶ ದಾಖಲಾಗಿದೆ. ಇದರಿಂದಾಗಿ ನಗರದಾದ್ಯಂತ ಬಿಸಿಲಿನ ಝಳ ಹೆಚ್ಚಾಗಿದೆ.

ರಾಹುಲ್ ಪಿ.ಎಯಿಂದ ಹಣ: ಇ.ಡಿ ಮುಂದೆ ಸುಳ್ಳು ಹೇಳಿದ ಟಿಎಂಸಿ ವಕ್ತಾರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಆಪ್ತ ಸಹಾಯಕ ಅಲಂಕಾರ್ ಸವಾಯಿ ಅವರಿಂದ ಸಾಮಾಜಿಕ ಮಾಧ್ಯಮ ಹಾಗೂ ಇತರ ಸಲಹಾ ಕಾರ್ಯಗಳಿಗಾಗಿ ₹23.54 ಲಕ್ಷ ನಗದು ಪಡೆದಿರುವುದಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಟಿಎಂಸಿಯ ರಾಷ್ಟ್ರೀಯ ವಕ್ತಾರ ಸಾಕೇತ್ ಗೋಖಲೆ ಸುಳ್ಳು ಹೇಳಿದ್ದಾರೆ ಎನ್ನಲಾಗಿದೆ.

'₹23.54 ಲಕ್ಷ ಮೊತ್ತವು ಸಾಕೇತ್ ಅವರು ಸಾಮಾಜಿಕ ಚಟುವಟಿಕೆಯ ಹೆಸರಿನಲ್ಲಿ ದೇಣಿಗೆ ಮೂಲಕ ಸಂಗ್ರಹಿಸಿದ ನಿಧಿಯ ಭಾಗವಾಗಿದೆ. ಆದರೆ, ಅದನ್ನು ಅವರು ತಮ್ಮ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ತೋರಿಸಿಲ್ಲ' ಎಂದು ಇ.ಡಿ ಹೇಳಿದೆ.

ಈ ಕುರಿತು ಖಚಿತಪಡಿಸಿಕೊಳ್ಳಲು ರಾಹುಲ್ ಅವರ ಆಪ್ತಸಹಾಯಕ ಅಲಂಕಾರ್ ಸವಾಯಿ ಅವರನ್ನು ಇ.ಡಿ ಪ್ರಶ್ನೆಗೊಳಪಡಿಸಿತ್ತು. ಆಗ ಸವಾಯಿ ತಾನು ಸಾಕೇತ್‌ಗೆ ಯಾವುದೇ ಹಣವನ್ನು ಪಾವತಿಸಿಲ್ಲ ಎಂದು ಹೇಳಿದ್ದರು. ಬಳಿಕ ಸಾಕೇತ್ ಮತ್ತು ಸವಾಯಿ ಇಬ್ಬರನ್ನೂ ಏಕ ಕಾಲಕ್ಕೆ ವಿಚಾರಣೆಗೊಳಪಡಿಸಿದಾಗ ಆಗಲೂ ಸವಾಯಿ ತಾನು ಯಾವುದೇ ರೀತಿಯಲ್ಲೂ ಸಾಕೇತ್‌ಗೆ ಹಣ ನೀಡಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಜಾರಿ ನಿರ್ದೇಶನಾಲಯದ ಪ್ರಕಾರ, ಸಾಕೇತ್ ಗೋಖಲೆ ಹಣದ ಮೂಲವನ್ನು ವಿವರಿಸಲು ವಿಫಲರಾಗಿದ್ದು, ಅವರು ದೇಣಿಗೆ ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲವನ್ನು ಹೊಂದಿಲ್ಲ ಎನ್ನಲಾಗಿದೆ. ಈ ಕುರಿತು ಹಣ ಅಕ್ರಮ ವರ್ಗಾವಣೆಯ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಇ.ಡಿ ಮಾಹಿತಿ ನೀಡಿದೆ.

ಅಹಮದಾಬಾದ್‌ನ ಸೈಬರ್ ಸೆಲ್‌ನಲ್ಲಿ ಕಳೆದ ಡಿ. 28ರಂದು ಸಾಕೇತ್ ಗೋಖಲೆ ವಿರುದ್ಧ ವಂಚನೆ, ಕ್ರಿಮಿನಲ್ ಪಿತೂರಿಯ ಜೊತೆಗೆ ಪೋರ್ಜರಿ ಆರೋಪದಡಿ ಎಫ್‌ಐಆರ್ ದಾಖಲಾಗಿದ್ದು, ಇದನ್ನು ಆಧರಿಸಿ ಇ.ಡಿ ತನಿಖೆ ಕೈಗೊಂಡಿದೆ. ಸಾಕೇತ್, ಸಾಮಾಜಿಕ ಸೇವೆಗಳಿಗೆ ದೇಣಿಗೆ ಮೂಲಕ ಹಣ ಸಂಗ್ರಹಿಸಿ ವೈಯಕ್ತಿಕ ಉದ್ದೇಶಗಳಿಗೆ ಬಳಸಿಕೊಂಡಿದ್ದಾರೆ ಎಂದೂ ಆರೋಪಿಸಲಾಗಿದೆ.

ಅನಗತ್ಯವಾಗಿ ಗರ್ಭಕೋಶ ಶಸ್ತ್ರಚಿಕಿತ್ಸೆ ಪರಿಶೀಲನೆಗೆ ರಾಜ್ಯಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಖಾಸಗಿ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅನಗತ್ಯವಾಗಿ ಗರ್ಭಕೋಶದ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಈ ಬಗ್ಗೆ ಲೆಕ್ಕಪರಿಶೋಧನೆ ನಡೆಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಎಲ್ಲ ರಾಜ್ಯಗಳಿಗೆ ಸೂಚಿಸಿದೆ.

'ಅಗತ್ಯವಿಲ್ಲದಿದ್ದರೂ, ಹಣವನ್ನು ಸಂಪಾದಿಸುವ ಮಾರ್ಗವಾಗಿ ಇಂತಹ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ' ಎಂದು ಈಚೆಗೆ ಸುಪ್ರಿಂ ಕೋರ್ಟ್‌ಗೆ ದೂರು ಸಲ್ಲಿಕೆಯಾದ ಹಿಂದೆಯೇ ಕೇಂದ್ರ ಸರ್ಕಾರ ಈ ಬಗ್ಗೆ ಸೂಚನೆ ನೀಡಿದೆ.

ಅನಗತ್ಯವಾಗಿ ಶಸ್ತ್ರಚಿಕಿತ್ಸೆ ನಡೆಸುವುದನ್ನು ತಡೆಯಲು ಅಗತ್ಯ ಕ್ರಮ ತೆಗೆದುಕೊಳ್ಳುವುದರ ಜೊತೆಗೆ, ರಾಜ್ಯಗಳಿಂದಲೂ ಈ ಕುರಿತು ಸಮಗ್ರ ಅಂಕಿ ಅಂಶಗಳನ್ನು ಸಂಗ್ರಹಿಸಿ ಸಲ್ಲಿಸಲಾಗುವುದು ಎಂದು ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಭರವಸೆ ನೀಡಿತ್ತು.

'ಎಲ್ಲ ಖಾಸಗಿ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಡೆದಿರುವ ಗರ್ಭಕೋಶ ಶಸ್ತ್ರಚಿಕಿತ್ಸೆ ಕುರಿತಂತೆ ಲೆಕ್ಕಪರಿಶೋಧನೆ ನಡೆಸಬೇಕು. ಅಂಕಿ–ಅಂಶದ ವಿವರ ಸಲ್ಲಿಸಬೇಕು' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

2019–21ರಲ್ಲಿ ನಡೆಸಿದ್ದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, 15 ರಿಂದ 49 ವರ್ಷದವರಲ್ಲಿ ಶೇ 3ರಷ್ಟು ಮಹಿಳೆಯರು ಗರ್ಭಕೋಶ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಇಂಥ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾದ ವಯೋಮಿತಿ 33 ರಿಂದ 37 ವರ್ಷಗಳಾಗಿವೆ.

ಅಭಿವೃದ್ಧಿ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಗರ್ಭಕೋಶದ ಶಸ್ತ್ರಚಿಕಿತ್ಸೆಯನ್ನು 45ವರ್ಷಮೀರಿದಮಹಿಳೆಯರಿಗೆನಡೆಸಲಾಗುತ್ತದೆ. ಅಲ್ಲದೆ, ಸ್ವತಂತ್ರ ಸಮೀಕ್ಷೆ ಪ್ರಕಾರವೂ ಭಾರತದಲ್ಲಿ 28–36 ವರ್ಷದ ಮಹಿಳೆಯರು ಇಂತಹ ಶಸ್ತ್ರಚಿಕಿತ್ಸೆಗೆ ಒಳಗಾಗುವುದು ಹೆಚ್ಚುತ್ತಿದೆ.

ಸಾಮಾನ್ಯ ವೈದ್ಯಕೀಯ ಚಿಕಿತ್ಸೆಯೇ ಸಾಕು ಎಂಬ ಪ್ರಕರಣಗಳಲ್ಲೂ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಬಡವರು, ಅವಿದ್ಯಾವಂತರು, ಮುಖ್ಯವಾಗಿ ಗ್ರಾಮೀಣ ಮಹಿಳೆಯರು ಇಂತಹ ಅನಗತ್ಯ ಶಸ್ತ್ರಚಿಕಿತ್ಸೆಗಳ 'ಬಲಿಪಶು'ಗಳಾಗುತ್ತಿದ್ದಾರೆ ಎಂದು ಹೇಳಲಾಗಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯ ಅನ್ವಯ ಮಾರ್ಚ್ 16ರವರೆಗೆ ಗರ್ಭಕೋಶ ಶಸ್ತ್ರಚಿಕಿತ್ಸೆಗಾಗಿ 45,434 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಯೋಜನೆಯ ಪ್ರಕಾರ, 40 ವರ್ಷಕ್ಕಿಂತ ಕೆಳಗಿನವರಿಗೆ ಇಂತಹ ಶಸ್ತ್ರಚಿಕಿತ್ಸೆಯನ್ನು ನಡೆಸಬೇಕಾದರೆ, ಅಂತಹ ಚಿಕಿತ್ಸೆಯು ಅಗತ್ಯವಾಗಿದೆ ಎಂದು ಕನಿಷ್ಠ ಇಬ್ಬರು ವೈದ್ಯರು ಪ್ರಮಾಣೀಕರಿಸಬೇಕಾಗಿದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತಂತೆ 2013ರಲ್ಲಿ ಆದೇಶಿಸಿದ್ದ ಸುಪ್ರೀಂ ಕೋರ್ಟ್, ನಿಯಮ ಉಲ್ಲಂಘಿಸುವ ಪ್ರಕರಣಗಳಲ್ಲಿ ಶಿಸ್ತುಕ್ರಮ ವಹಿಸಬೇಕು ಎಂದು ತಿಳಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಸಮಗ್ರ ಅಂಕಿ ಅಂಶಗಳನ್ನು ಸಂಗ್ರಹಿಸಲಿದ್ದು, ಬಳಿಕ ವಸ್ತುಸ್ಥಿತಿ ಪರಿಶೀಲಿಸಲು ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಗಳನ್ನು ರಚಿಸಲಾಗುವುದು ಎಂದು ಭರವಸೆ ನೀಡಿತ್ತು.

ಈ ಸಂಬಂಧ ಪಿಐಎಲ್ ಅನ್ನು ಸಲ್ಲಿಸಿದ್ದ ಪ್ರಯಾಸ್ ಸಂಸ್ಥೆಯ ಸಂಯೋಜಕ ನರೇಂದ್ರ ಗುಪ್ತಾ ಅವರ ಪ್ರಕಾರ, 'ಮೂರು ವಾರಗಳ ಹಿಂದಷ್ಟೇ ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶಕರ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಆದರೆ ರಾಜ್ಯ, ಜಿಲ್ಲಾ ಮಟ್ಟದಲ್ಲಿ ಸಮಿತಿಗಳು ಇನ್ನೂ ರಚನೆಯಾಗಿಲ್ಲ'.

ಇಂಥ ಅನಗತ್ಯ ಶಸ್ತ್ರಚಿಕಿತ್ಸೆಗಳ ಕುರಿತು ಕ್ರಮವಹಿಸಬೇಕು ಎಂದು ಕೋರಿ ಭೂಷಣ್ ಎಂಬವರು ಕಳೆದ ಅಕ್ಟೋಬರ್ ತಿಂಗಳಲ್ಲಿ ಪತ್ರ ಬರೆದಿದ್ದರು. 40 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಹಿಳೆಯರ ಮೇಲೆ ನಡೆದಿರುವ ಶಸ್ತ್ರಚಿಕಿತ್ಸೆಗಳ ಪರಿಶೀಲನೆ ನಡೆಸಬೇಕು ಹಾಗೂ ಈ ಕುರಿತಂತೆ ಆರೋಗ್ಯ ಸಚಿವಾಲಯ ರೂಪಿಸಿರುವ ನಿಯಮಗಳನ್ನು ಪಾಲಿಸಬೇಕು ಎಂದು ರಾಜ್ಯಗಳಿಗೆ ಸೂಚಿಸಲಾಗಿದೆ.

ಮಾರ್ಕಸ್ ಸ್ಟೊಯಿನಿಸ್ ಅಬ್ಬರದ ಆಟ; ಕೊನೆಯ ಓವರ್‌ನಲ್ಲಿ ಮೊಹ್ಸಿನ್ ಶಿಸ್ತಿನ ದಾಳಿ

ಮುಂಬೈಗೆ ಆಘಾತ ನೀಡಿದ ಲಖನೌ

ಲಖನೌ (ಪಿಟಿಐ): ಮಾರ್ಕಸ್ ಸ್ಟೊಯಿನಿಸ್ ಅಬ್ಬರದ ಬ್ಯಾಟಿಂಗ್ ಮತ್ತು ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 5 ರನ್‌ಗಳ ರೋಚಕ ಜಯ ಸಾಧಿಸಿತು.

ಮಂಗಳವಾರ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಲಖನೌ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 177 ರನ್ ಗಳಿಸಿತು. ಆ ಬಳಿಕ ರೋಹಿತ್ ಶರ್ಮಾ ಬಳಗವನ್ನು 5 ವಿಕೆಟ್‌ಗಳಿಗೆ 172 ರನ್‌ಗಳಿಗೆ ನಿಯಂತ್ರಿಸಿತು.

ಈ ಗೆಲುವು ಕೃಣಾಲ್ ಪಾಂಡ್ಯ ಬಳಗದ ಪ್ಲೇ ಆಫ್ ಸಾಧ್ಯತೆಗೆ ಬಲ ತುಂಬಿದರೆ, ಮುಂಬೈ ತಂಡವನ್ನು ಅಂತಿಮ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿಸಿದೆ.

ಸೊಗಸಾದ ಆಟವಾಡಿದ ಮಾರ್ಕಸ್ ಸ್ಟೊಯಿನಿಸ್ (ಅಜೇಯ 89; 47ಎ, 4X4, 6X8) ಅವರು ಲಖನೌ ತಂಡದ ಗೆಲುವಿಗೆ ಕಾರಣರಾದರು. ಅದೇ ರೀತಿ, ಕೊನೆಯ ಓವರ್‌ನಲ್ಲಿ ಬಿಗುವಾದ ದಾಳಿ ನಡೆಸಿದ ಮೊಹ್ಸಿನ್ ಖಾನ್ ಕೂಡಾ ಗಮನ ಸೆಳೆದರು.

ಸವಾಲಿನ ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೆ ಇಶಾನ್ ಕಿಶನ್ (59) ಮತ್ತು ರೋಹಿತ್ ಶರ್ಮಾ (37) ಮೊದಲ ವಿಕೆಟ್‌ಗೆ 9.4 ಓವರ್‌ಗಳಲ್ಲಿ 90 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ರವಿ ಬಿಷ್ಣೋಯಿ (26ಕ್ಕೆ2) ಅವರು 13 ರನ್ ಅಂತರದಲ್ಲಿ ಇಬ್ಬರನ್ನೂ ಪೆವಿಲಿಯನ್‌ಗೆ ಕಳುಹಿಸಿದರು. ಸೂರ್ಯಕುಮಾರ್ ಯಾದವ್ ಬೇಗನೇ ಔಟಾದರು. ಆ ಬಳಿಕ ಲಖನೌ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸಿದರು.



ಲಖನೌ ಸೂಪರ್ ಜೈಂಟ್ಸ್ ತಂಡದ ಮಾರ್ಕಸ್ ಸ್ಟೊಯಿನಿಸ್ ಹಾಗೂ ಕೃಣಾಲ್ ಪಾಂಡ್ಯ ಜೊತೆಯಾಟದ ಓಟ –ಪಿಟಿಐ ಚಿತ್ರ

ಟಿಮ್ ಡೇವಿಡ್ (ಔಟಾಗದೆ 32) ಅವರು ಕೊನೆಯಲ್ಲಿ ಹೋರಾಡಿದರೂ, ಇತರ ಬ್ಯಾಟರ್‌ಗಳಿಂದ ಬೆಂಬಲ ದೊರೆಯಲಿಲ್ಲ. ಮುಂಬೈ ಜಯಕ್ಕೆ ಕೊನೆಯ ಎರಡು ಓವರ್‌ಗಳಲ್ಲಿ 30 ರನ್‌ಗಳು ಬೇಕಿದ್ದವು. ನವೀನ್ ಉಲ್ ಹಕ್ ಬೌಲ್ ಮಾಡಿದ 19ನೇ ಓವರ್‌ನಲ್ಲಿ 19 ರನ್‌ಗಳು ಬಂದವು. ಟಿಮ್ ಡೇವಿಡ್ ಆ ಓವರ್‌ನಲ್ಲಿ ಎರಡು ಸಿಕ್ಸರ್ ಹೊಡೆದರು.

ಕೊನೆಯ ಓವರ್‌ನಲ್ಲಿ 11 ರನ್‌ಗಳ ಅವಶ್ಯಕತೆಯಿತ್ತು. ಶಿಸ್ತಿನ ಬೌಲಿಂಗ್ ಮಾಡಿದ ಮೊಹ್ಸಿನ್ ಖಾನ್ ಕೇವಲ ಐದು ರನ್ ಬಿಟ್ಟುಕೊಟ್ಟು, ಮುಂಬೈ ಗೆಲುವಿಗೆ ಅಡ್ಡಿಯಾದರು.

'ಅನಾರೋಗ್ಯದಿಂದ ಬಳಲುತ್ತಿದ್ದ ನನ್ನ ತಂದೆ 10 ದಿನ ಐಸಿಯುವಿನಲ್ಲಿದ್ದು, ಚೇತರಿಸಿಕೊಂಡಿದ್ದಾರೆ. ಇಂದಿನ ನನ್ನ ಪ್ರದರ್ಶನವನ್ನು ಅವರಿಗೆ ಅರ್ಪಿಸುತ್ತೇನೆ' ಎಂದು ಮೊಹ್ಸಿನ್ ಹೇಳಿದರು.

ಸ್ಟೊಯಿನಿಸ್ ಅಬ್ಬರ: ಮೊದಲು ಬ್ಯಾಟ್ ಮಾಡಿದ ಲಖನೌ ತಂಡದ ಆರಂಭ ಉತ್ತಮವಾಗಿರಲಿಲ್ಲ. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಜೇಸನ್ ಬೆಹ್ರೆನ್‌ಡಾರ್ಫ್ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ಪವರ್‌ಪ್ಲೇನಲ್ಲಿ ಕೇವಲ 35 ರನ್‌ಗಳು ಸೇರಿದವು. ಏಳನೇ ಓವರ್‌ನಲ್ಲಿ ಸ್ಪಿನ್ನರ್ ಪಿಯೂಷ್ ಚಾವ್ಲಾ ಎಸೆತದಲ್ಲಿ ಕ್ವಿಂಟನ್ ಡಿಕಾಕ್ ಕೂಡ ಔಟಾದರು.

ಈ ಹಂತದಲ್ಲಿ ಜೊತೆಗೂಡಿದ ಕೃಣಾಲ್ ಹಾಗೂ ಸ್ಟೋಯಿನಿಸ್ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಗಾಯಗೊಂಡು ನಿವೃತ್ತರಾದ ಕೃಣಾಲ್ (49; 42ಎ) ಉತ್ತಮ ಕಾಣಿಕೆ ನೀಡಿದರು. ಇವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು.

17ನೇ ಓವರ್‌ನಲ್ಲಿ ಸ್ನಾಯುಸೆಳೆತದಿಂದ ಬಳಲಿದ ಕೃಣಾಲ್ ಪಾಂಡ್ಯ 'ನಿವೃತ್ತಿ'ಯಾದರು. ಆದರೆ ಸ್ಟೊಯಿನಿಸ್ ಅಬ್ಬರ ಮುಂದುವರಿಸಿದರು.

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 3 ಕ್ಕೆ177 (20 ಓವರ್‌ಗಳಲ್ಲಿ)
ದೀಪಕ್ ಸಿ ಟಿಮ್ ಬಿ ಬೆಹ್ರೆನ್‌ಡಾರ್ಫ್ 5 (7ಎ)
ಕ್ವಿಂಟನ್ ಸಿ ಇಶಾನ್ ಬಿ ಚಾವ್ಲಾ 16 (15ಎ, 6X2)
ಪ್ರೇರಕ್ ಸಿ ಇಶಾನ್ ಬಿ ಬೆಹ್ರೆನ್‌ಡಾರ್ಫ್ 0 (1ಎ)
ಕೃಣಾಲ್ ಗಾಯಗೊಂಡು ನಿವೃತ್ತಿ 49 (42ಎ, 4X1, 6X1)
ಮಾರ್ಕಸ್ ಔಟಾಗದೆ 89 (47ಎ, 4X4, 6X8)
ಪೂರನ್ ಔಟಾಗದೆ 8 (8ಎ, 4X1)
ಇತರೆ: 10 (ಲೆಗ್‌ಬೈ 5, ವೈಡ್ 5)
ವಿಕೆಟ್ ಪತನ: 1–12 (ದೀಪಕ್ ಹೂಡಾ; 2.1), 2–12 (ಪ್ರೇರಕ್ ಮಂಕಡ್; 2.2), 3–35 (ಕ್ವಿಂಟನ್ ಡಿಕಾಕ್; 6.1)
ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 4–0–30–2, ಕ್ರಿಸ್ ಜೋರ್ಡನ್ 4–0–50–0, ಹೃತಿಕ್ ಶೋಕಿನ್ 3–0–20–0, ಪಿಯೂಷ್ ಚಾವ್ಲಾ 3–0–26–1, ಆಕಾಶ್ ಮದ್ವಾಲ್ 4–0–30–0, ಕ್ಯಾಮೆರಾನ್ ಗ್ರೀನ್ 2–0–16–0

ಮುಂಬೈ ಇಂಡಿಯನ್ಸ್ 5ಕ್ಕೆ 172 (20 ಓವರ್)
ಇಶಾನ್ ಸಿ ನವೀನ್ ಬಿ ರವಿ 59 (39 ಎ., 4X8, 6X1)
ರೋಹಿತ್ ಸಿ ಹೂಡಾ ಬಿ ರವಿ 37 (25 ಎ., 4X1, 6X3)
ಸೂರ್ಯಕುಮಾರ್ ಬಿ ಯಶ್ ಠಾಕೂರ್ 7 (9 ಎ)
ನೇಹಲ್ ಸಿ ಸಬ್ (ಗೌತಮ್) ಬಿ ಮೊಹ್ಸಿನ್ 16 (20 ಎ., 4X2)
ಡೇವಿಡ್ ಔಟಾಗದೆ 32 (19 ಎ., 4X1, 6X3)
ವಿಷ್ಣು ಸಿ ಪೂರನ್ ಬಿ ಯಶ್ ಠಾಕೂರ್ 2 (4 ಎ) ಗ್ರೀನ್ ಔಟಾಗದೆ 4 (6 ಎ)
ಇತರೆ: 15 (ಬೈ 4, ಲೆಗ್‌ಬೈ 1, ನೋಬಾಲ್ 2, ವೈಡ್ 8)
ವಿಕೆಟ್ ಪತನ: 1–90 (ರೋಹಿತ್ ಶರ್ಮಾ; 9.4), 2–103 (ಇಶಾನ್ ಕಿಶನ್; 11.1), 3–115 (ಸೂರ್ಯಕುಮಾರ್ ಯಾದವ್; 14.1), 4–131 (ನೇಹಲ್ ವಧೇರಾ; 16.1), 5–145 (ವಿಷ್ಣು ವಿನೋದ್; 17.4)
ಬೌಲಿಂಗ್: ಕೃಣಾಲ್ ಪಾಂಡ್ಯ 4–0–27–0, ಮೊಹ್ಸಿನ್ ಖಾನ್ 3–0–26–1, ನವೀನ್ ಉಲ್ ಹಕ್ 4–0–37–0, ಯಶ್ ಠಾಕೂರ್ 4–0–40–2, ಸ್ವಪ್ನಿಲ್ ಸಿಂಗ್ 1–0–11–0, ರವಿ ಬಿಷ್ಣೋಯಿ 4–0–26–2
ಫಲಿತಾಂಶ: ಲಖನೌ ಗೆ 5 ರನ್ ಗೆಲುವು

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	631

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	13	9	4	0	18	0.835
ಚೆನ್ನೈ	13	7	5	1	15	0.381
ಲಖನೌ	13	7	5	1	15	0.304
ಮುಂಬೈ	13	7	6	0	14	-0.128
ಬೆಂಗಳೂರು	12	6	6	0	12	0.166
ರಾಜಸ್ಥಾನ	13	6	7	0	12	0.140
ಕೋಲ್ಕತ್ತ	13	6	7	0	12	-0.256
ಪಂಜಾಬ್	12	6	6	0	12	-0.268
ಹೈದರಾಬಾದ್	12	4	8	0	8	-0.575
ಡೆಲ್ಲಿ	12	4	8	0	8	-0.686

ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket


ಪಂಜಾಬ್‌ಗೆ ಗೆಲುವಿನ ಗುರಿ

ಪ್ಲೇ ಆಫ್‌ಗೆ ಕ್ಷೀಣ ಅವಕಾಶ; ಡೆಲ್ಲಿ ವಿರುದ್ಧ ಪಂದ್ಯ ಇಂದು

ಧರ್ಮಶಾಲಾ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡ, ಪಾಯಿಂಟ್ ಪಟ್ಟಿಯ ತಳದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಭರ್ಜರಿ ಜಯಗಳಿಸಿ ಪ್ಲೇ ಆಫ್‌ನ ಕ್ಷೀಣ ಅವಕಾಶವನ್ನು ಜೀವಂತವಾಗಿರಿಸಲು ಕಾತರವಾಗಿದೆ. ಬುಧವಾರ ನಡೆಯುವ ಈ ಐಪಿಎಲ್ ಪಂದ್ಯ ಡೆಲ್ಲಿ ತಂಡಕ್ಕೆ ಮಹತ್ವದ್ದಲ್ಲದಿದ್ದರೂ ಸಮಾಧಾನಕರ ಜಯಕ್ಕೆ ಯತ್ನಿಸಲಿದೆ.

ಪಂಜಾಬ್ ತಂಡದ ಈ ಬಾರಿಯ ಅಭಿಯಾನ ಸಾಕಷ್ಟು ಏರಿಳಿತಗಳನ್ನು ಕಂಡಿದೆ. 12 ಪಂದ್ಯಗಳಲ್ಲಿ ಆರು ಗೆದ್ದು, ಅಷ್ಟೇ ಸೋತಿರುವ ಶಿಖರ್ ಧವನ್ ಪಡೆ 12 ಪಾಯಿಂಟ್ಸ್ ಸಂಗ್ರಹಿಸಿದೆ. ಆದರೆ ಅದರ ಪ್ಲೇ ಆಫ್ ಹಾದಿ ಪೂರ್ಣವಾಗಿ ಮುಚ್ಚಿಲ್ಲ. ಜಯದ ಜೊತೆ ಈಗ ಇರುವ –0.268 ನಿವ್ವಳ ರನ್ ದರವನ್ನು ಸುಧಾರಿಸುವ ಅಗತ್ಯವೂ ಇದೆ.

ಕಳೆದ ವಾರ ಡೇವಿಡ್ ವಾರ್ನರ್ ಬಳಗದ ವಿರುದ್ಧ ಗಳಿಸಿದ 31 ರನ್‌ಗಳ ಜಯ ಪಂಜಾಬ್ ತಂಡದ ವಿಶ್ವಾಸ ವೃದ್ಧಿಸಿದೆ. ಗೆಲುವಿನ ಜೊತೆಗೆ ಇತರ ಪಂದ್ಯಗಳ ಫಲಿತಾಂಶಗಳೂ ತಾನು ಬಯಸಿದಂತಿರಲಿ ಎಂಬ ಹಾರೈಕೆ ಹೊಂದಬೇಕಾಗಿದೆ.



ಪಂಜಾಬ್ ಕಿಂಗ್ಸ್ ತಂಡದ ಪ್ರಭಸಿಮ್ರನ್

ಪಂಜಾಬ್ ತಂಡವು ಬ್ಯಾಟರ್‌ಗಳಿಂದ ಸುಧಾರಿತ ಪ್ರದರ್ಶನದ ನಿರೀಕ್ಷೆಯಲ್ಲಿದೆ. ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಪ್ರಭಸಿಮ್ರನ್ ಸಿಂಗ್ ಏಕಾಂಗಿಯಾಗಿ ಹೋರಾಟ ನಡೆಸಿದ್ದರು. ಶಿಖರ್ ಧವನ್ ಬಿಟ್ಟರೆ ಉಳಿದ ಆಟಗಾರರು ಅಷ್ಟೇನೂ ಗಮನಸೆಳೆದಿಲ್ಲ.

ಮಧ್ಯಮ ವೇಗಿಗಳೂ ಸಂಘಟಿತ ಪ್ರದರ್ಶನ ನೀಡುತ್ತಿಲ್ಲ. ನಥಾನ್ ಎಲ್ಲಿಸ್, ಸ್ಯಾಮ್ ಕರನ್ ಮತ್ತು ಅರ್ಷದೀಪ್ ಸಿಂಗ್ ಅವರಂಥ ಬೌಲರ್‌ಗಳಿದ್ದರೂ ಮೊತ್ತವನ್ನು ರಕ್ಷಿಸಲು ಕೆಲ ಸಂದರ್ಭಗಳಲ್ಲಿ ಸಾಧ್ಯವಾಗಿಲ್ಲ.

ಇನ್ನೊಂದೆಡೆ, ಡೆಲ್ಲಿ ತಂಡಕ್ಕೆ ಈವರೆಗಿನ ಪಯಣ ದುಃಸ್ವಪ್ನದಂತಾಗಿದ್ದು, ಈಗಾಗಲೇ ಹೊರಬಿದ್ದಿದೆ. ಬ್ಯಾಟರ್‌ಗಳು ನಿರಾಶೆ ಮೂಡಿಸಿದ್ದೇ ಹೆಚ್ಚು. ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಅವರನ್ನುಳಿದು ಇತರ ಬೌಲರ್‌ಗಳು ಅಂಥ ಪರಿಣಾಮ ಬೀರಿಲ್ಲ. ಇವರಿಬ್ಬರ ಮಿತವ್ಯಯದ ಬೌಲಿಂಗ್ ಪ್ರದರ್ಶನದಿಂದ ಕೆಲಪಂದ್ಯಗಳಲ್ಲಿ ಯಶಸ್ಸು ದೊರಕಿದೆ. ಅನುಭವಿ ಇಶಾಂತ್ ಶರ್ಮಾ ಮತ್ತು ತಂಡಕ್ಕೆ ಮರಳಿದ ಖಲೀಲ್ ಅಹ್ಮದ್ ಕೆಲ ಪಂದ್ಯಗಳಲ್ಲಿ ಮಿಂಚಿದ್ದಾರೆ.

ವೈಯಕ್ತಿಕ ಕಾರಣಗಳಿಗಾಗಿ ತವರಿಗೆ ಹೋಗಿದ್ದ ಎನ್ರಿಚ್ ನಾಕಿಯ ಅವರು ವಾಪಸಾಗಿದ್ದಾರೆ. ಆದರೆ ಮೇಲಿನ ಕ್ರಮಾಂಕದಲ್ಲಿ ಆಡುವ ಹೊರದೇಶದ ಬ್ಯಾಟರ್‌ಗಳ ಪೈಕಿ ಒಬ್ಬರನ್ನು ಬಿಟ್ಟು ಅವರಿಗೆ ಅವಕಾಶ ನೀಡಬಹುದೇ ಎಂಬುದನ್ನು ಕಾದುನೋಡಬೇಕಾಗಿದೆ.

ಪೃಥ್ವಿ ಶಾ ಮತ್ತು ಸರ್ಫರಾಜ್ ಖಾನ್ ಅವರ ಸತತ ವೈಫಲ್ಯವೇ ತಂಡದ ಮನೋಬಲ ಕುಗ್ಗಿಸಿತು. ಅವರ ಜಾಗದಲ್ಲಿ ವಿದೇಶಿ ಬ್ಯಾಟರ್‌ಗಳು ಅವಕಾಶ ಪಡೆದ ಮೇಲೆ ಕೊಂಚ ಪರಿಣಾಮವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅರ್ಜುನ್‌ಗೆ ನಾಯಿ ಕಚ್ಚಿ ಗಾಯ

ಬೆಂಗಳೂರು: ಮುಂಬೈ ತಂಡದ ಅರ್ಜುನ್ ತೆಂಡೂಲ್ಕರ್ ಅವರಿಗೆ ನಾಯಿಯೊಂದು ಕಚ್ಚಿ ಗಾಯವಾಗಿದೆ.

ಎರಡು ದಿನಗಳ ಹಿಂದೆ ಈ ಘಟನೆ ನಡೆದಿತ್ತು. ಮಂಗಳವಾರ ಅವರು ಚೇತರಿಸಿಕೊಂಡು ತಂಡಕ್ಕೆ ಮರಳಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ತಂಡವು ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ವಿಡಿಯೊ ತುಣುಕೊಂದನ್ನು ಹಾಕಿದೆ.

ಅದರಲ್ಲಿ ಅರ್ಜುನ್ ಮತ್ತು ಲಖನೌ ತಂಡದ ಯುಧವೀರ್ ಸಿಂಗ್ ಅವರ ಮಾತುಕತೆಯಲ್ಲಿ ಈ ವಿಷಯ ಬಹಿರಂಗವಾಗಿದೆ.

'ಆರೋಗ್ಯ ಹೇಗಿದೆ' ಎಂದು ಯುಧವೀರ್ ಕೇಳುವ ಪ್ರಶ್ನೆಗೆ, 'ಎರಡು ದಿನಗಳ ಹಿಂದೆ ನಾಯಿ ಕಚ್ಚಿತ್ತು. ಗಾಯ ಈಗ ಗುಣಮುಖವಾಗುತ್ತಿದೆ' ಎಂದು ಅರ್ಜುನ್ ಪ್ರತಿಕ್ರಿಯಿಸಿದ್ದಾರೆ.

ಅಂಗಿ ಮೇಲೆ ಧೋನಿ ಹಸ್ತಾಕ್ಷರ ಪಡೆದಿದ್ದು ಭಾವನಾತ್ಮಕ ಕ್ಷಣ: ಗಾವಸ್ಕರ್

ಮುಂಬೈ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ಅವರಿಂದ ತಾವು ಧರಿಸಿದ್ದ ಅಂಗಿಯ ಮೇಲೆ ಹಸ್ತಾಕ್ಷರ ಪಡೆದ ಸಂದರ್ಭ ತಮ್ಮ ಪಾಲಿಗೆ ಭಾವನಾತ್ಮಕ ಕ್ಷಣ ಎಂದು ಬ್ಯಾಟಿಂಗ್ ದಂತಕತೆ ಸುನೀಲ್ ಗಾವಸ್ಕರ್ ಹೇಳಿದ್ದಾರೆ.

ಕಳೆದ ಭಾನುವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್‌ಕಿಂಗ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ಪಂದ್ಯದ ನಂತರ ಗಾವಸ್ಕರ್, ಸ್ವತಃ ಧೋನಿ ಅವರತ್ತ ಧಾವಿಸಿ ಹಸ್ತಾಕ್ಷರ ಪಡೆದಿದ್ದರು.

ಚೆನ್ನೈ ಆಟಗಾರರು ಚೆಪಾಕ್‌ನಲ್ಲಿ ಈ ಬಾರಿಯ ಕೊನೆಯ ಲೀಗ್ ಪಂದ್ಯವಾಡಿದ ನಂತರ ಮೈದಾನದ ಸುತ್ತು ಹೊಡೆದು ಪ್ರೇಕ್ಷಕರಿಗೆ ಅಭಿನಂದನೆ ಹೇಳಿದ್ದರು. ಈ ವೇಳೆ ವೀಕ್ಷಕ ವಿವರಣೆಗಾರರ ತಂಡದ ಜೊತೆ ನಿಂತಿದ್ದ ಗಾವಸ್ಕರ್, ಧೋನಿ ಬಳಿ ತೆರಳಿ ತಾವು ಧರಿಸಿದ ಅಂಗಿಯ ಮೇಲೆ 'ಆಟೋಗ್ರಾಫ್' ನೀಡುವಂತೆ ವಿನಂತಿಸಿದ್ದರು. ಗಾವಸ್ಕರ್ ಅವರ ಹೇಳಿಕೆಯನ್ನು ಸ್ಟಾರ್ ಸ್ಪೋರ್ಟ್ಸ್ ಉದ್ಧರಿಸಿದೆ.

'ಸಿಎಸ್‌ಕೆ ಪ್ಲೇ ಆಫ್‌ಗೆ ಅವಕಾಶ ಪಡೆದರೆ ಅವರಿಗೆ ಮತ್ತೆ ಚೆನ್ನೈನಲ್ಲಿ ಆಡುವ ಅವಕಾಶ ದೊರೆಯಬಹುದು. ಆದರೆ ಅಂದಿನ ಕ್ಷಣವನ್ನು ವಿಶೇಷ ರೀತಿಯಲ್ಲಿ ಸಂಭ್ರಮಿಸಲು ನಿರ್ಧರಿಸಿದೆ. ಕ್ಯಾಮೆರಾ ಯೂನಿಟ್‌ನಲ್ಲಿದ್ದ ಒಬ್ಬರ ಬಳಿ ಮಾರ್ಕರ್ ಪೆನ್ ಇತ್ತು. ಅವರಿಗೂ ನಾನು ಕೃತಜ್ಞ' ಎಂದರು.



ಧೋನಿ ಅವರ ಹಸ್ತಾಕ್ಷರ ಪಡೆದ ಗಾವಸ್ಕರ್ –ಸಿಎಸ್‌ಕೆ ಟ್ವಿಟರ್ ಚಿತ್ರ

ಸಬ್ ಜೂನಿಯರ್ ಹಾಕಿ: ಹೃತಿಕ್ ನಾಯಕ

ಬೆಂಗಳೂರು: ಹೃತಿಕ್ ಅಯ್ಯಪ್ಪ ಕೆ.ಡಿ. ಅವರು ಒಡಿಶಾದ ರೂರ್ಕೇಲಾದಲ್ಲಿ ಇದೇ 18 ರಿಂದ 28ರವರೆಗೆ ನಡೆಯುವ ಸಬ್ ಜೂನಿಯರ್ ಪುರುಷರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡದ ನಾಯಕತ್ವ ವಹಿಸಿದ್ದಾರೆ.

ಕರ್ನಾಟಕ 'ಎ' ಗುಂಪಿನಲ್ಲಿದ್ದು, ಉತ್ತರ ಪ್ರದೇಶ ಮತ್ತು ಕೇರಳ ಗುಂಪಿನಲ್ಲಿರುವ ಇತರ ತಂಡಗಳಾಗಿವೆ ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಡ: ಕೃಶಾಂಕ್ ಕಾಳಪ್ಪ ಟಿ.ಬಿ., ಕುಶಲ್ ನಂಜಪ್ಪ (ಗೋಲ್‌ಕೀಪರ್ಸ್), ನಿಶಾಂತ್ ಎಂ., ವಚನ್ ಉತ್ತಪ್ಪ ಎಸ್.ಎಲ್., ವಿಖ್ಯಾತ್ ಮಂದಣ್ಣ, ಕಿರಣ್ ರೆಡ್ಡಿ, ತನಿಶ್ ರಮೇಶ್ ಹುಲಕುಂದ್, ಅಚ್ಚಯ್ಯ ಎಂ.ಎಂ., ಸಂಪತ್ ಗಣಪತಿ ಬಿ.ವಿ., ವಿಶ್ವಜಿತ್ ಕೆ.ವಿ., ಸುಪ್ರೀತ್ ಜಿ., ಹೃತಿಕ್ ಅಯ್ಯಪ್ಪ ಕೆ.ಡಿ. (ನಾಯಕ), ವರುಣ್ ಮಾದಪ್ಪ ಸಿ.ಆರ್., ರಮೇಶ್ ಶಿವ ಕುರಪಾಟಿ, ಅಣ್ಣಂ ಷಣ್ಮುಖ, ಉತ್ತಪ್ಪ ಕೆ.ಎಸ್., ಜಶನ್ ತಿಮ್ಮಯ್ಯ ಎಂ.ಸಿ. ಕಾರ್ತಿಕ್ ಕಾರಿಯಪ್ಪ ವಿ.ಎ., ಕೋಚ್: ನಾಗಲಿಂಗಸ್ವಾಮಿ ಬಿ., ಸಹಾಯಕ ಕೋಚ್: ವಿನಾಯಕ ಬಿಜವಾಡ.

ತಜಿಂದರ್, ಅನ್ನುರಾಣಿಗೆ ಚಿನ್ನ

ರಾಂಚಿ (ಪಿಟಿಐ): ಏಷ್ಯನ್ ಗೇಮ್ಸ್ ಷಾಟ್‌ಪಟ್ ಚಾಂಪಿಯನ್ ತಜಿಂದರ್‌ಪಾಲ್ ಸಿಂಗ್ ತೂರ್ ಮತ್ತು ಜಾವೆಲಿನ್ ಥ್ರೊನಲ್ಲಿ ರಾಷ್ಟ್ರೀಯ ದಾಖಲೆಹೊಂದಿರುವ ಅನ್ನುರಾಣಿ ಅವರು ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಮಂಗಳವಾರ ಚಿನ್ನದ ಪದಕಗಳನ್ನು ಗೆದ್ದು ಗಮನ ಸೆಳೆದರು.

ಉತ್ತರ ಪ್ರದೇಶದ ಅನ್ನುರಾಣಿ 59.24 ಮೀ. ಸಾಧನೆಯೊಡನೆ ಮೊದಲಿಗರಾದರು. ಇದು ಅವರ ಶ್ರೇಷ್ಠ ಸಾಧನೆಯ (63.82 ಮೀ.) ಸಮೀಪಕ್ಕೆ ಬರದಿದ್ದರೂ, ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ ಅರ್ಹತಾ ಮಾನದಂಡ ಮೀರಲು ಅಡ್ಡಿಯಾಗಲಿಲ್ಲ. ಏಷ್ಯನ್ ಚಾಂಪಿಯನ್‌ಷಿಪ್‌ಗೆ 54.73 ಮೀ. ಮತ್ತು ಏಷ್ಯನ್ ಗೇಮ್ಸ್‌ಗೆ 56.46 ಮೀ. ನಿಗದಿಪಡಿಸಲಾಗಿದೆ.

28 ವರ್ಷದ ತಜಿಂದರ್, ಚಿನ್ನ ಗೆಲ್ಲುವ ಹಾದಿಯಲ್ಲಿ ಷಾಟ್‌ಪಟ್‌ಅನ್ನು 20.42 ಮೀ. ದೂರ ಎಸೆದು ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ (19 ಮೀ.) ಅರ್ಹತೆಯ ಮಟ್ಟ ಮೀರಿದರು. ಎರಡನೇ ಸ್ಥಾನ ಗಳಿಸಿದ ಸಾಹಿಬ್ ಸಿಂಗ್ (19.23 ಮಿ.) ಮತ್ತು ಕರಣವೀರ್ (19.05ಮೀ) ಕೂಡ ಅರ್ಹತೆ ಮಾನದಂಡ ಮೀರಿದರು.



ರಾಜ್ಯ 9 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನ ವಿಜೇತರು (ಎಡದಿಂದ): ರಾಜೇಶ್ವರಿ ಅಯ್ಯಪ್ಪನ್ (ಬಾಲಕಿಯರ ವಿಭಾಗದ ರನ್ನರ್ ಅಪ್), ಲಿಯಾ ಜೋಸೆಫ್ (ಬಾಲಕಿಯರ ವಿಭಾಗದ ವಿಜೇತೆ), ಅಭಿನವ್ ಆನಂದ್ (ಬಾಲಕರ ವಿಭಾಗದ ವಿಜೇತ), ಸಮಕ್ಷ್ ಅಶೋಕ್ (ರನ್ನರ್ ಅಪ್)

ಅಭಿನವ್, ಲಿಯಾಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರಿನ ಅಭಿನವ್ ಆನಂದ್ ಮತ್ತು ಲಿಯಾ ಜೋಸೆಫ್, ಬೆಂಗಳೂರು ಗ್ರಾಮಾಂತರ ಚೆಸ್ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಸಹಯೋಗದಲ್ಲಿ ನಡೆದ ರಾಜ್ಯ 9 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ವಿಜೇತರಾದರು. ಇಬ್ಬರೂ ಅಜೇಯ ಸಾಧನೆ ಪ್ರದರ್ಶಿಸಿದರು.

ಹೊಸಕೋಟೆ ತಾಲ್ಲೂಕಿನ ದೊಡ್ಡದುನ್ನಸಂದ್ರದ ಶೃಂಗ ಅಂತರರಾಷ್ಟ್ರೀಯ ಶಾಲೆಯಲ್ಲಿ ಭಾನುವಾರ ಮುಕ್ತಾಯಗೊಂಡ ಮೂರು ದಿನಗಳ ಈ ಟೂರ್ನಿಯಲ್ಲಿ 160 ಮಂದಿ ಸ್ಪರ್ಧಿಗಳು ಭಾಗವಹಿಸಿದ್ದರು.


ಅಭಿನವ್ ಆನಂದ್ 9 ಸುತ್ತುಗಳಲ್ಲಿ, ಏಳರಲ್ಲಿ ಜಯಗಳಿಸಿ, ಎರಡು ಪಂದ್ಯ 'ಡ್ರಾ' ಮಾಡಿ 8 ಪಾಯಿಂಟ್ಸ್ ಸಂಗ್ರಹಿಸಿದರು. ಬೆಂಗಳೂರಿನ ಸಮಕ್ಷ್ ಅಶೋಕ್ (7.5) ಎರಡನೇ ಮತ್ತು ವಿಯಾನ್ ಬಂಚೋರ್ (7) ಮೂರನೇ ಸ್ಥಾನ ಗಳಿಸಿದರು. ಸ್ರಗ್ವಿದಾ ಎಸ್. ಮತ್ತು ಇಶಾನ್ ಬನ್ನಾಲಿ (ತಲಾ 7) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು. ಬಾಲಕರ ವಿಭಾಗದಲ್ಲಿ ಸ್ಪರ್ಧಿಗಳಲ್ಲಿ 14 ಮಂದಿ ರೇಟೆಡ್ ಆಟಗಾರರು ಒಳಗೊಂಡಿದ್ದರು.

ಏಳು ಸುತ್ತುಗಳಿದ್ದ ಬಾಲಕಿಯರ ವಿಭಾಗದಲ್ಲಿ ಲಿಯಾ ಆಡಿದ ಎಲ್ಲಾ ಪಂದ್ಯಗಳಲ್ಲಿ ಜಯಗಳಿಸಿದಳು. ಮೈಸೂರಿನ ರಾಜೇಶ್ವರಿ ಅಯ್ಯಪ್ಪನ್ (6 ಅಂಕ) ಎರಡನೇ, ಕೋಲಾರದ ಸೌಖ್ಯಾ ಕೆ.ಆರ್. (6) ಮೂರನೇ ಮತ್ತು ಬೆಂಗಳೂರಿನ ಕೆ.ಕೆ.ನೀಲಾ (5.5) ನಾಲ್ಕನೇ, ಮಂಗಳೂರಿನ ರಿಥೆಲ್ ಅಲಿದಾ ಡಿಸೋಜಾ (5.5) ಐದನೇ ಸ್ಥಾನ ಪಡೆದರು.

ಎರಡೂ ವಿಭಾಗಗಳಲ್ಲಿ ಮೊದಲ 4 ಸ್ಥಾನ ಗಳಿಸಿದವರು ಜಾರ್ಖಂಡ್‌ನಲ್ಲಿ ನ. 15 ರಿಂದ 23ರವರೆಗೆ ನಡೆಯಲಿರುವ ರಾಷ್ಟ್ರೀಯ (9 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದರು.

ಸಂಕ್ಷಿಪ್ತ ಸುದ್ದಿಗಳು

ಬ್ಯಾಡ್ಮಿಂಟನ್: 7ನೇ ಸ್ಥಾನಕ್ಕೇರಿದ ಪ್ರಣಯ್



ಪ್ರಣಯ್

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್.ಎಸ್. ಪ್ರಣಯ್ ಅವರು ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಏಳನೇ ಸ್ಥಾನಕ್ಕೇರಿದ್ದಾರೆ. ಇದು ಅವರ ವೃತ್ತಿಜೀವನದ ಶ್ರೇಷ್ಠ ರ‍್ಯಾಂಕ್ ಆಗಿದೆ.

ಪ್ರಣಯ್ ಅವರು ಈ ಹಿಂದಿನ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದ್ದರು. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಒಂದು ಕ್ರಮಾಂಕ ಮೇಲಕ್ಕೇರಿರುವ ಪಿ.ವಿ.ಸಿಂಧು 11ನೇ ಸ್ಥಾನದಲ್ಲಿದ್ದಾರೆ.

ಟ್ರೀಸಾ ಜೋಲಿ– ಗಾಯತ್ರಿ ಗೋಪಿಚಂದ್ ಜೋಡಿ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ 15ನೇ ಸ್ಥಾನ ಪಡೆದಿದೆ. ಪುರುಷರ ಡಬಲ್ಸ್‌ನಲ್ಲಿ ಎರಡು ಕ್ರಮಾಂಕ ಕುಸಿತ ಕಂಡಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಅವರು ಏಳನೇ ಸ್ಥಾನ ಪಡೆದಿದ್ದಾರೆ.

ಜಸ್ಟ್ ಕ್ರಿಕೆಟ್ ಅಕಾಡೆಮಿಗೆ ಜಯ

ಬೆಂಗಳೂರು: ಮಾನಸ್ (124) ಅವರ ಶತಕದ ನೆರವಿನಿಂದ ಜಸ್ಟ್ ಕ್ರಿಕೆಟ್ ಅಕಾಡೆಮಿ ತಂಡ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 16 ವರ್ಷದೊಳಗಿನವರ ವಿಭಾಗದಲ್ಲಿ ಜಯ ಸಾಧಿಸಿತು.

ಹೈಪರ್ ಟರ್ಫ್ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಜಸ್ಟ್ ಕ್ರಿಕೆಟ್ ಅಕಾಡೆಮಿ ತಂಡ 198 ರನ್‌ಗಳಿಂದ ಆರ್‌ಕೆಸಿಎ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಸಿಕ್ಸ್ ಕ್ರಿಕೆಟ್ ಅಕಾಡೆಮಿ 12 ರನ್‌ಗಳಿಂದ ಗೋಪಾಲನ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಜಸ್ಟ್ ಕ್ರಿಕೆಟ್ ಅಕಾಡೆಮಿ 30 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 300 (ಮಾನಸ್ 124, ಸಿ.ಭರತ್ 83, ಹರ್ಷಿತ್ ರೆಡ್ಡಿ 44ಕ್ಕೆ 3) ಆರ್‌ಕೆಸಿಎ 24.1 ಓವರ್‌ಗಳಲ್ಲಿ 102 (ಹರ್ಷಿತ್ ರೆಡ್ಡಿ 28, ಬಿ.ಕೃತಿನ್ 18ಕ್ಕೆ 4, ವಿ.ದಿವಿತ್ 19ಕ್ಕೆ 3) ಫಲಿತಾಂಶ: ಜಸ್ಟ್ ಕ್ರಿಕೆಟ್ ಅಕಾಡೆಮಿಗೆ 198 ರನ್ ಗೆಲುವು ಸಿಕ್ಸ್ ಕ್ರಿಕೆಟ್ ಅಕಾಡೆಮಿ 30 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 179 (ಅನ್ವಯ್ 53, ಶೌರ್ಯ ಮನೀಷ್ 35, ಕೆ.ಪಿ.ಅಹನ್ 32, ಚಾರ್ವಿಕ್ 25ಕ್ಕೆ 3, ರಾಜರ್ಷಿ ಮಿತ್ರ 34ಕ್ಕೆ 3) ಗೋಪಾಲ್ 30 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 167 (ಕೆ.ಎಸ್.ಮೋಕ್ಷಿತ್ 64, ಅಥರ್ವ್ ಮಾಳವಿಯ 50, ಸುಜಿತ್ 35ಕ್ಕೆ 3, ಪ್ರೀತಂ ರಾಜ್ 8ಕ್ಕೆ 2) ಫಲಿತಾಂಶ: ಸಿಕ್ಸ್ ಕ್ರಿಕೆಟ್ ಅಕಾಡೆಮಿಗೆ 12 ರನ್ ಗೆಲುವು

ಗಾಲ್ಫ್: ಅರ್ಜುನ್ ಜಯಭೇರಿ

ಬೆಂಗಳೂರು: ಅರ್ಜುನ್ ಅನೇಕರ್ ಅವರು ಬೆಂಗಳೂರು ಗಾಲ್ಫ್ ಕ್ಲಬ್ ಆಶ್ರಯದಲ್ಲಿ ನಡೆದ ಕ್ಯಾಪ್ಟನ್ ಮತ್ತು ಸೆಕ್ರೆಟರಿ ಕ್ವೇಷ್ ಟೂರ್ನಿಯಲ್ಲಿ ವಿಜೇತರಾದರು.

ಅರ್ಜುನ್ ಅವರು ಹ್ಯಾಂಡಿಕ್ಯಾಪ್ (0–9) ವಿಭಾಗದಲ್ಲಿ 42 ಅಂಕಗಳನ್ನು ಗಳಿಸಿದರು. 40 ಅಂಕ ಗಳಿಸಿದ ಪಿ. ನರೇಶ್ ರನ್ನರ್ ಅಪ್ ಆದರು.

ಫಲಿತಾಂಶ: ಹ್ಯಾಂಡಿಕ್ಯಾಪ್ (0–9): ಅರ್ಜುನ್ ಅನೇಕರ್ –1, ಪಿ. ನರೇಶ್ –2; ಹ್ಯಾಂಡಿಕ್ಯಾಪ್ (10–18): ಮನಪ್ರೀತ್ ಸಚದೇವ –1, ಹರ್ಷ ದಾಸೇಗೌಡ, ರಾಮನಿವಾಸ್ ಬೂಬ್, ಸುನಿಲ್ ರಸ್ತೋಗಿ –2; ಹ್ಯಾಂಡಿಕ್ಯಾಪ್ (19–24): ಅದ್ವೈತ್ ಕಾಕತ್ಕರ್ –1, ಕಸ್ತೂರಿ ರಂಗಯ್ಯ –2.; ಲೇಡಿಸ್ ಗ್ರಾಸ್: ಧನಲಕ್ಷ್ಮೀ ರೈಸ್ –1, ಲೇಡಿಸ್ ನೆಟ್, ಹ್ಯಾಂಡಿಕ್ಯಾಪ್ 0–16: ಜೈಯಂತಿ ರವಿ –1, ಹ್ಯಾಂಡಿಕ್ಯಾಪ್ (17–24): ಕರಿಷ್ಮಾ ಟಂಡನ್ –1.

ರಾಮ್ ಲೀಲಾ ಮೈದಾನಕ್ಕೆ ಸ್ಥಳಾಂತರಕ್ಕೆ ಚಿಂತನೆ

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಯನ್ನು ಜಂತರ್ ಮಂತರ್‌ನಿಂದ ರಾಮ್ ಲೀಲಾ ಮೈದಾನಕ್ಕೆ ಸ್ಥಳಾಂತರಿಸಲು ಕುಸ್ತಿಪಟುಗಳು ಚಿಂತನೆ ನಡೆಸಿದ್ದಾರೆ.

'ಪ್ರತಿಭಟನೆಯ ತಾಣವನ್ನು ಬದಲಾಯಿಸುವ ಚಿಂತನೆ ನಡೆಸಿದ್ದೇವೆ. ನಾವು ಪರಸ್ಪರ ಸಮಾಲೋಚನೆ ನಡೆಸಿ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವೆವು' ಎಂದು ಸಾಕ್ಷಿ ಮಲಿಕ್ ಮಂಗಳವಾರ ಹೇಳಿದರು.

ಬ್ರಿಜ್‌ಭೂಷಣ್ ಬಂಧನಕ್ಕೆ ಒತ್ತಾಯಿಸಿ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ನೇತೃತ್ವದಲ್ಲಿ ಕಳೆದ 24 ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ.